

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ ೧೨ ಸಂಚಿಕೆ ೧೪ ಏಪ್ರಿಲ್ ೮, ೧೯೯೦ ರೂ. ೧.೫೦

ರಾಜಕೀಯ ಮಾರ್ಗಗಳಿಂದ ಮಾತ್ರ ಪಂಜಾಬ್, ಕಾಶ್ಮೀರ ಪ್ರಶ್ನೆಗೆ ಪರಿಹಾರ

ರಾಜಕೀಯ ಮಾರ್ಗದಿಂದಲೇ ಪಂಜಾಬ್ ಪ್ರಶ್ನೆಗೆ ಪರಿಹಾರ ಸಾಧ್ಯ. ಪರಸ್ಪರ ಮಾತುಕತೆ ಸಂಧಾನಗಳಿಂದಲೇ ಇದಕ್ಕೆ ಪರಿಹಾರ ಕಂಡುಕೊಳ್ಳಬೇಕೆಂದು ಪಿ.ಬಿ.ಯ ಪತ್ರಿಕಾ ಹೇಳಿಕೆ ತಿಳಿಸಿದೆ. ಎಡ ಮತ್ತು ಜಾತ್ಯಾತೀತ ಪಕ್ಷಗಳು ಇದನ್ನೆ ಹಿಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿದೆ.

ಜಮ್ಮು ಕಾಶ್ಮೀರದಲ್ಲಿ ನಿಯಂತ್ರಣ ಮೀರಿದ ಭಯೋತ್ಪಾದಕತೆಯಿಂದ ಜನರ ನೆರೆಯ ರಾಜ್ಯಗಳಿಗೆ ವಲಸೆ ಹೋಗಲಾರಂಭಿಸಿದ್ದಾರೆ. ಸರ್ವಪಕ್ಷಗಳ ಸಭೆಯನ್ನು ನಡೆಸುವುದು, ಮತ್ತು ಸಲಹಾ ಸಮಿತಿಯೊಂದನ್ನು ರಚಿಸುವುದು ಮೊದಲಾದ ಸ್ವಾಗತಾರ್ಹ ಕ್ರಮಗಳನ್ನು ಕೈಗೊಂಡ ರಾಷ್ಟ್ರೀಯ ರಂಗ ಸರ್ಕಾರ ಆ ಸಮಿತಿಯನ್ನು ಕ್ರಿಯಾಶೀಲಗೊಳಿಸುವುದರಲ್ಲಿ ಹಿಂದೆಬಿದ್ದಿದೆ. ಕಾಶ್ಮೀರ ಕಣಿವೆಯಲ್ಲಿ ಶಾಂತಿ ಸ್ಥಾಪಿಸಲು ಐಕ್ಯತೆಯಿಂದ ಕೆಲಸ ಮಾಡಬೇಕೆಂದು ಸರ್ಕಾರ ಹಾಗೂ ಎಲ್ಲಾ ರಾಜಕೀಯ ಪಕ್ಷಗಳಿಗೆ ಪಿ.ಬಿ. ವಿನಂತಿಸಿದೆ. ಕಾಶ್ಮೀರದ ವಿಶಿಷ್ಟತೆ ಹಾಗೂ ಪ್ರತ್ಯೇಕ ನಿಯಮಾವಳಿಗಳನ್ನು ರಕ್ಷಿಸಬೇಕೆಂದು ಹೇಳಿರುವ ಪಿ.ಬಿ. ಸಂವಿಧಾನದ ೩೭೦ನೇ ವಿಧಿಯಲ್ಲಿ ಜಮ್ಮು ಕಾಶ್ಮೀರಕ್ಕಿರುವ ರಕ್ಷಣೆಯನ್ನು ತೊಡೆಯ ಬೇಕೆಂಬ ಬಿಜೆಪಿ ಹಾಗೂ ಇತರ ಹಿಂದೂ ಮೂಲಭೂತವಾದಿಗಳ ಒತ್ತಾಯ. ಜಮ್ಮು ಕಾಶ್ಮೀರದ ಜನತೆಯನ್ನು ದೇಶದ ಸಾಮಾನ್ಯ ರಾಜಕೀಯ ಪ್ರವಾಹದಿಂದ ದೂರ ಮಾಡುವುದರಲ್ಲಿ ಪರ್ಯವಸಾನವಾಗುತ್ತದೆ. ಅಮೇರಿಕ ಹಾಗೂ ಪಾಕಿಸ್ತಾನದ ಸಹಾಯದಿಂದ ಪ್ರತ್ಯೇಕತಾವಾದಿಗಳು ಈ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಜಮ್ಮು ಕಾಶ್ಮೀರ ಮತ್ತು ಪಂಜಾಬ್ ಪ್ರಶ್ನೆಗಳನ್ನು ತಮ್ಮ ರಾಜಕೀಯ ಹಿತದ ಸಂಕುಚಿತ ದೃಷ್ಟಿಯಿಂದ ಮಾತ್ರ ನೋಡುವುದನ್ನು ಬಿಟ್ಟು ರಾಷ್ಟ್ರೀಯ ಪ್ರಶ್ನೆಯನ್ನಾಗಿ ಕಾಣಬೇಕು. ಜಮ್ಮು ಕಾಶ್ಮೀರ, ಪಂಜಾಬ್ ಅಸ್ಸಾಂ ಮತ್ತು ರಾಮಜನ್ಮಭೂಮಿಯ ಪ್ರಶ್ನೆಗಳು ಬಿಗಡಾಯಿಸುತ್ತಾ ಬರುತ್ತಿವೆಯೆಂಬುದನ್ನು ಪಿ.ಬಿ. ಎತ್ತಿ ತೋರಿಸಿದೆ. ಅಸ್ಸಾಂನಲ್ಲಿ ಹಳೆಯ ಭೀಕರ ದಿನಗಳು ಮತ್ತೆ ಪುನರಾವರ್ತನೆಯಾಗಲಿವೆಯೆಂಬುದರ ಸೂಚನೆ ಅಲ್ಲಿ ಯು.ಎಲ್.ಎಫ್.ಎ.ಗಳ ಆಕ್ರಮಗಳ ಮೂಲಕ ಸಿಕ್ಕಿದೆ.

ಪುಟ ೮ ಕ್ಕೆ

ಪಂಜಾಬಿನಲ್ಲಿ ರಾಷ್ಟ್ರಪತಿ ಆಳ್ವಿಕೆ ವಿಸ್ತರಣೆ-ಏಕೆ?

(ಪಿ.ಡಿ. ಸಂಪಾದಕೀಯ)

ಲೋಕಸಭೆಗೆ ಪಂಜಾಬಿನಿಂದಲೂ ಚುನಾವಣೆ ನಡೆಯಿತು. ಆದರೆ ಅದು ಮುಕ್ತ ನ್ಯಾಯಪೂರ್ಣ ಚುನಾವಣೆಯಾಗಿರಲಿಲ್ಲ. ಚುನಾವಣೆಯ ನಂತರ ಹೀರೋ ಆಗಿ ಮೂಡಿ ಬಂದ ಮಾನ್ ಕೂಡಾ ತನ್ನ ಜನಪ್ರಿಯತೆಕಳಕೊಂಡಿದ್ದಾರೆ. ಭಯೋತ್ಪಾದಕರ ಕೊಲೆ, ಸುಲಿಗೆ, ಅಪಹರಣಗಳು ಹೊಸ-ಹೊಸ ದಾಖಲೆಗಳನ್ನು ಸ್ಥಾಪಿಸುತ್ತಿವೆ. ಈ ಹಿನ್ನೆಲೆಯಲ್ಲಿ ಪಂಜಾಬಿನ, ದೇಶದ ಎಲ್ಲಾ ರಾಜಕೀಯ ಶಕ್ತಿಗಳು ಪಂಜಾಬಿನಲ್ಲಿ ರಾಷ್ಟ್ರಪತಿ ಆಳ್ವಿಕೆ ವಿಸ್ತರಿಸಲು ಸಂವಿಧಾನ ತಿದ್ದುಪಡಿ ತರಲು ಸಮ್ಮತಿಸಿವೆ. ಆದರೆ ರಾಷ್ಟ್ರಪತಿ ಆಳ್ವಿಕೆ ಪರ್ಯಾಯವೇನೂ ಅಲ್ಲ. ಆದರ ಆರು ತಿಂಗಳ ಅವಧಿಯವರೆಗೂ ಕಾಯಬೇಕಿಲ್ಲ. ರಾಷ್ಟ್ರೀಯ ಐಕ್ಯತೆ ಬಯಸುವ ಎಲ್ಲಾ ಶಕ್ತಿಗಳೂ ತಮ್ಮ ಚೈತನ್ಯವನ್ನೆಲ್ಲಾ ಕ್ರೋಢೀಕರಿಸಿ ಶಾಂತಿ ನೆಲೆಸುವಂತಾಗಿ ಕೆಲವೇ ತಿಂಗಳಲ್ಲಿ ಪಂಜಾಬಿನಲ್ಲಿ ರಾಜಕೀಯ ಪ್ರಕ್ರಿಯೆ ಆರಂಭಿಸುವುದು ಸಾಧ್ಯ..

ಹೊಸ ಸರ್ಕಾರ ಬಂದಾಗಿನಿಂದ ಪಂಜಾಬಿನಲ್ಲಿ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದರೂ ಪ್ರತ್ಯೇಕವಾದಿಗಳ, ಭಯೋತ್ಪಾದಕರ ಚಟುವಟಿಕೆಗಳು ಎಷ್ಟೋ ಪಾಲು ಹೆಚ್ಚಿದೆ. ಭಯೋತ್ಪಾದಕರ ಕೊಲೆಗಳ ಪಟ್ಟಿ ಹಿಂದೆಂದಿಗಿಂತಲೂ ದೊಡ್ಡದಾಗಿದೆ. ಹಣ ಕಿತ್ತುಕೊಳ್ಳುವುದು, ಮಕ್ಕಳ ಅಪಹರಣ ಈಗ ಸಾಮಾನ್ಯ ಸಂಗತಿಯಾಗುತ್ತಿದೆ.

ಲೋಕಸಭೆಗೆ ಇಲ್ಲಿಯೂ ಚುನಾವಣೆಗಳು ನಡೆದವು. ಆದರೆ ಅವು ಮುಕ್ತ ಹಾಗೂ ನ್ಯಾಯಪೂರ್ಣವಾಗಿರಲಿಲ್ಲ. ಪಟ್ಟಣಗಳಲ್ಲಿ ಮತದಾನ ಬಹಳ ಕಮ್ಮಿಯಿತ್ತು. ಹಳ್ಳಿಗಳಲ್ಲಿ ಮತದಾನದಲ್ಲಿ ಮೋಸ, ಬಲವಂತ ನಡೆಯಿತು. ಈ ಚುನಾವಣೆಗಳಲ್ಲಿ ಮತನೀಡಿದವರು ಭಯೋತ್ಪಾದಕರ ಪ್ರತ್ಯೇಕವಾದಕ್ಕೆ ಮತನೀಡಲಿಲ್ಲ. ಬದಲಾಗಿ ಮಾನ್‌ಗುಂಪು ಕೂಡಾ ರಾಜಕೀಯ ಪ್ರಕ್ರಿಯೆಯಲ್ಲಿ ತೊಡಗಿದರೆ ರಾಜ್ಯಕ್ಕೆ ಶಾಂತಿ ಸಿಗಬಹುದು ಎಂಬುದು ಅವರ ನಿರೀಕ್ಷೆಯಾಗಿತ್ತು. ಆದರೆ ಬೇಗನೇ ಅವರಿಗೆ ಭ್ರಮನಿರಸನವಾಗಿದೆ. ಮಾನ್ ಗುಂಪು ಸಂವಿಧಾನ ಚೌಕಟ್ಟಿನೊಳಗೆ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವುದಾಗಿ ಹೇಳಿದರ ಮಾನ್‌ನ ಹೆಸರು ಹೇಳಿಕೊಂಡು ಅಖಿಲ ಭಾರತ ಸಿಖ್ ವಿದ್ಯಾರ್ಥಿ ಒಕ್ಕೂಟ ಖಾಲಿಸ್ತಾನದ ಪ್ರತಿಪಾದನೆ ಮುಂದುವರೆಸಿತು. ಭಯೋತ್ಪಾದಕರ ಚಟುವಟಿಕೆಗಳು ಹೆಚ್ಚುತ್ತಿದ್ದರೂ ಮಾನ್ ಎಂದೂ ಅವನ್ನು ಖಂಡಿಸಲಿಲ್ಲ, ಮುಗ್ಧ ಕೊಲೆಗಳನ್ನು ಖಂಡಿಸಲಿಲ್ಲ. ಬದಲಾಗಿ ಪೋಲೀಸ್ ಅತಿರೇಕಗಳ ರಾಗವನ್ನೇ ಹಾಡುತ್ತಾ ಬಂದರು. ಚುನಾವಣೆಯಲ್ಲಿ ಮೂಲೆಗುಂಪಾಗಿದ್ದ ಅಕಾಲಿ ವಿವಿಧ ಗುಂಪುಗಳು ಕೇಂದ್ರ ಸರ್ಕಾರವನ್ನು ದೂಟಿಸುವುದರಲ್ಲೇ ಸ್ಪರ್ಧೆಗಳಿದಿದ್ದವೇ ಹೊರತು ಭಯೋತ್ಪಾದಕರ ಕೊಲೆ ಸುಲಿಗೆಗಳನ್ನು ಖಂಡಿಸುತ್ತಿಲ್ಲ. ರಾಷ್ಟ್ರೀಯರಂಗ ಸರ್ಕಾರ ರಚನೆಯಾದ ಮೇಲೆ ಪ್ರತ್ಯೇಕತಾವಾದಿಗಳೊಡನೆ ಸುಳ್ಳು ಹಣಾಹಣಿಯೆಂಬುದು ನಡೆಯದಂತೆ ಕೇಂದ್ರ ಸರ್ಕಾರ ನೋಡಿಕೊಂಡಿದೆಯೆನ್ನಲೇ ಬೇಕು. ಆದರೂ ಪ್ರಕಾಶ್‌ಸಿಂಗ್ ಬಾದಲ್ ಈ ಭಯೋತ್ಪಾದಕರನ್ನುಹುತಾತ್ಮರನ್ನಾಗಿ ಕಾಣುವ ಧಾರ್ಮಿಕ ಕ್ರಿಯೆಗಳಲ್ಲಿ ಪಾಲುಗೊಳ್ಳಲು ಹಿಂದೆ-ಮುಂದೆ ನೋಡದವರು ಅಟೋಹರ್, ತಳವಂಡಿಗಳಲ್ಲಿ ಭಯೋತ್ಪಾದಕರಿಗೆ ಬಲಿಯಾದ ಮುಗ್ಧರಕುಟುಂಬಗಳನ್ನು ಸಂತೈಸಲು ಹೋಗಲಿಲ್ಲ.

ಪಂಜಾಬಿನಲ್ಲಿ ಶಾಂತಿ ನೆಲೆಸಬೇಕಾದರೆ ಭಯೋತ್ಪಾದಕರಿಂದ, ಪ್ರತ್ಯೇಕತಾವಾದಿಗಳಿಂದ ದೂರ ನಿಂತು ಜನರನ್ನು ಅಣಿನೆರೆಸಬೇಕೆಂದು ನಮ್ಮ ಪಕ್ಷ ವಿವಿಧ ಅಕಾಲೀ ಗುಂಪುಗಳಿಗೆ ತೀಕ್ಷ್ಣವಾಗಿ ಹೇಳಿದರೂ ಅವರು ಕಿವಿಗೆ ಹಾಕಿಕೊಂಡಿಲ್ಲ. ಫಲವಾಗಿ ಪ್ರತ್ಯೇಕತಾವಾದಿ, ಭಯೋತ್ಪಾದಕರ ಜತೆಗೆ ಅಕಾಲೀ ಗುಂಪುಗಳ ಬಗ್ಗೆಯೂ

ಪುಟ ೮ ಕ್ಕೆ

ನಗರ ಪಾಲಿಕೆ ಕಾನೂನು ತಿದ್ದುಪಡಿ ಸರ್ವಾಧಿಕಾರಿ ಪ್ರವೃತ್ತಿಯ ಲಕ್ಷಣ

ಕರ್ನಾಟಕ ನಗರ ಪಾಲಿಕೆ ಕಾನೂನು ತಿದ್ದುಪಡಿ ವಿಧೇಯಕದ ಕುರಿತು ವಿಧಾನ ಸಭೆ- ವಿಧಾನ ಪರಿಷತ್ತುಗಳಲ್ಲಿ ಬಿಸಿ ಬಿಸಿ ಚರ್ಚೆ ನಡೆದು ಕೊನೆಗೆ ಪಾಸಾಯಿತು. ಈ ತಿದ್ದುಪಡಿ ಸರಕಾರಕ್ಕೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡಲು ಸರ್ವಾಧಿಕಾರ ನೀಡುತ್ತದೆ. ತನ್ನ ರಾಜಕೀಯ ದುರುದ್ದೇಶ ಸಾಧಿಸಲು ರಾಜೀವ ಗಾಂಧಿಯವರು ಯಾವ ರೀತಿ ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರುತ್ತಿದ್ದರೋ, ಚುನಾವಣಾ ಆಯೋಗದ ಮೇಲೆ ಒತ್ತಡ ತರುತ್ತಿದ್ದರೋ, ಹಾಗೆಯೇ ಕರ್ನಾಟಕದಲ್ಲಿ ವೀರೇಂದ್ರ ಪಾಟೀಲ ಸರಕಾರ ಮಾಡುತ್ತಿದೆ. ಇಂಥ ತಿದ್ದುಪಡಿಗಳಿಂದಾಗಿ ಒಂದು ಮಹಾನಗರ ಕಂಡು ಬಂದರೆ ಆಳುವ ಪಕ್ಷ ಕೊನೇ ಗಳಿಗೆಯಲ್ಲಿ ಅಂದರೆ ಮತದಾನ ನಡೆಯುವ ಒಂದು ದಿವಸ ಮುಂಚಿತವಾಗಿ ಕೂಡ ಚುನಾವಣೆ ರದ್ದು ಗೊಳಿಸುವ ಅಧಿಕಾರ ಪಡೆದಂತಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸುವ ಪಕ್ಷಗಳ ಉಮೇದುವಾರರ ಹಾಗೆಯೇ ಸರಕಾರ ಖರ್ಚಿಗೆ, ದುಡಿತಕ್ಕೆ ಬೆಲೆ ಕೊಡದೆ ತನ್ನ ಸ್ವಾರ್ಥಕ್ಕಾಗಿ ಕೊನೆಗಳಿಗೆಯೇ ಚುನಾವಣೆ ಮುಂದೂಡುವ ಅಧಿಕಾರ ಪಡೆದಿರುವುದು ಸರ್ವಾಧಿಕಾರಿ, ಪ್ರವೃತ್ತಿಯಲ್ಲದೆ ಮತ್ತೇನು?

ಅಧಿಕಾರ ವಿಕೇಂದ್ರೀಕರಣವಾಗಬೇಕೆಂದು ಬೊಬ್ಬಿಡುತ್ತಿರುವ ಕಾಂಗ್ರೆಸ್ ಕರ್ನಾಟಕದಲ್ಲಿ ಹಾಗೆಯೇ ಇತರ ರಾಜ್ಯಗಳಲ್ಲಿ ನಗರಸಭೆ, ನಗರ ಪಾಲಿಕೆಗಳಿಗೆ ಹಲವಾರು ವರ್ಷ ಕಾಲ ಚುನಾವಣೆ ನಡೆಸಲು ಹಿಂದೇಟು ಹಾಕುತ್ತಿತ್ತು. ವಿಧೇಯಕಗಳ ಮೂಲಕವೇ ಚುನಾವಣೆಗಳು ಮುಂದೊಡಲ್ಪಡುತ್ತಿತ್ತು. ಈಗ ಅದನ್ನ ಕಾನೂನು ಬದ್ಧಗೊಳಿಸಲಾಗಿದೆ.

ಚುನಾವಣೆಗಳನ್ನು ಘೋಷಿಸುವ ಅಧಿಕಾರ ಚುನಾವಣಾ ಆಯುಕ್ತ ರದ್ದಾಗಿದೆ. ಈ ವಿಧೇಯಕದಿಂದಾಗಿ ವೀರೇಂದ್ರ ಪಾಟೀಲ ಸರಕಾರ ಚುನಾವಣಾ ಅಧಿಕಾರಿಗಳ ಅಧಿಕಾರವನ್ನು ಮೊಟಕುಗೊಳಿಸಿದೆ.

ಸರಕಾರಿ ನೌಕರರ ಮುಷ್ಕರದಿಂದಾಗಿ ಈ ತಿದ್ದುಪಡಿ ತರಬೇಕಾಯಿತೆಂದು ಸಚಿವ ವೀರಪ್ಪ ಮೋಯಿಲಿ ಹೇಳಿದ್ದಾರೆ. ಅದೊಂದೇ ಕಾರಣವಾಗಿದ್ದರೆ ತರಾತುರಿಯಲ್ಲಿ ಚುನಾವಣೆಯನ್ನು ಮುಂದೂಡುವ ಅಗತ್ಯವಿರಲಿಲ್ಲ. ಯೂನಿಯನ್ ಪದಾಧಿಕಾರಿಗಳನ್ನು ಬೆದರಿಸಿ ಈಗಾಗಲೇ ಬಯಲಾಗಿರುವಂತೆ ಹಣದಾಸೆಯನ್ನು ತೋರಿಸಿ ೨-೩ ದಿವಸದೊಳಗಾಗಿ ಮುಷ್ಕರವನ್ನು ಮುರಿಯುವ ಸರ್ವಸಿದ್ಧತೆಯನ್ನು ವೀರೇಂದ್ರ ಸರಕಾರ ಮಾಡಿತ್ತು. ಸಂಘದ ಅಧ್ಯಕ್ಷ ಕೃಷ್ಣಪ್ಪ ಕಾಂಗ್ರೆಸ್ ಮನುಷ್ಯನಾಗಿದ್ದು ವೀರೇಂದ್ರ ಪಾಟೀಲರ ವಿರೋಧಿ ಗುಂಪಿನ ಕುಮ್ಮಕ್ಕಿನಿಂದಲೇ ಪ್ರೆ ೧೫ ರ ಒಂದು ದಿವಸದ ಸಾಂಕೇತಿಕ ಮುಷ್ಕರ ಅನಿರ್ದಿಷ್ಟಾವಧಿಯ ಮುಷ್ಕರವಾಗಿ ಪರಿವರ್ತನೆಯಾಗಿರುವ ಸಂಗತಿ ಗುಟ್ಟೇನಲ್ಲ. ಆದ್ದರಿಂದ ಸರಕಾರಿ ನೌಕರರ ಮುಷ್ಕರ ಚುನಾವಣೆಯನ್ನು ಮುಂದೂಡಲು ಏಕಮಾತ್ರ ಕಾರಣವಲ್ಲ. ತನ್ನ ಪಕ್ಷ ಜಯಭೇರಿ ಬಾರಿಸಲಾರದು ಎಂಬ ಸಂಶಯವೇ ಮುಖ್ಯ ಕಾರಣವಿರಬಹುದೆಂದರೆ ತಪ್ಪಾಗಲಾರದು.

ಪುಟ ೮ ಕ್ಕೆ

ಯಶಸ್ವಿ ಆಟೋ ಮುಷ್ಕರ

ಪುಟ ೪ ನೋಡಿ



ದುಡಿಯುವ ಮಹಿಳೆಯರ ಎರಡನೆಯ ರಾಜ್ಯ ಸಮಾವೇಶದತ್ತ

ಸಿ. ನಂಜುಂಡಪ್ಪ

ಕರ್ನಾಟಕದಲ್ಲಿ ಕೈಗಾರಿಕೆಯ ಅಸಂಘಟಿತ ವಿಭಾಗದಲ್ಲಿ ಲಕ್ಷಗಟ್ಟಲೆ ಮಹಿಳೆಯರು ದುಡಿಯುತ್ತಿದ್ದಾರೆ. ಆರು ಲಕ್ಷಕ್ಕಿಂತಲೂ ಹೆಚ್ಚು ಕಾರ್ಮಿಕರಿರುವ ಬೀಡಿ ಕೈಗಾರಿಕೆಯಲ್ಲಿ ನೂರರಲ್ಲಿ ಎಂಬತ್ತಕ್ಕಿಂತಲೂ ಹೆಚ್ಚುಮಂದಿ ಮಹಿಳಾ ಕಾರ್ಮಿಕರು. ಸಹಸ್ರಾರು ಮಹಿಳೆಯರು ಕಾಫಿ ಸಂಸ್ಕರಣ, ಗೋಡಂಬಿ ಸಂಸ್ಕರಣ ಅಡಿಕೆ ಸಂಸ್ಕರಣ, ಏಲಕ್ಕಿ ಸಂಸ್ಕರಣ ಮತ್ತು ಅಗರಬತ್ತಿ ಉದ್ಯಮಗಳಲ್ಲಿ ದುಡಿಯುತ್ತಾರೆ. ಕಾಫಿ, ಟೀ, ರಬ್ಬರ್, ಮತ್ತು ಏಲಕ್ಕಿ ಪ್ಲಾಂಟೇಷನ್‌ಗಳಲ್ಲಿ, ಮಿಶ್ರ ತೋಟಗಳಲ್ಲಿ ದುಡಿಯುವ ಸುಮಾರು ಮೂರು ಲಕ್ಷ ಕಾರ್ಮಿಕರ ಪೈಕಿ ಶೇಕಡ ಐವತ್ತರಷ್ಟು ಜನ ಮಹಿಳೆಯರು. ರೇಷ್ಮೆ, ಕೃಷಿ, ಕಟ್ಟಡ ಮತ್ತು ರಸ್ತೆ ನಿರ್ಮಾಣ, ಕೈಮಗ್ಗ, ನೆಯ್ಗೆ, ಸಿದ್ಧ ಉಡುಪು, ಎಲೆಕ್ಟ್ರಾನಿಕ್ಸ್ ಮತ್ತು ಪುರಸಭೆ ನಗರ ಸಭೆಗಳಲ್ಲಿ ಲಕ್ಷಾಂತರ ಮಹಿಳೆಯರು ದುಡಿಯುತ್ತಾರೆ. ಇನ್ನಿತರ ಕೈಗಾರಿಕೆಗಳಲ್ಲಿಯೂ ಮಹಿಳಾ ಕಾರ್ಮಿಕರಿದ್ದಾರೆ.

ವಿದ್ಯೆ, ತರಬೇತಿಗಳನ್ನು ಪಡೆದ ಮಹಿಳೆಯರು ಕೇಂದ್ರೋದ್ಯಮಗಳಾದ ದೂರವಾಣಿ ಕಾರ್ಖಾನೆ, ಎಚ್.ಎಂ.ಟಿ. ಕೈಗಡಿಯಾರಕಾರ್ಖಾನೆ, ,ಬಿ.ಎಚ್.ಇ.ಎಲ್. .ಭಾರತ್ ಎಲೆಕ್ಟ್ರಾನಿಕ್ಸ್ ಮೊದಲಾದ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ವಿಮೆ, ಬ್ಯಾಂಕ್ ಮೊದಲಾದ ಹಣಕಾಸು ಸಂಸ್ಥೆಗಳಲ್ಲಿ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ವಿವಿದ ಇಲಾಖೆಗಳಲ್ಲಿ, ಖಾಸಗಿ ಶಿಕ್ಷಣ ಸಂಸ್ಥೆ, ಖಾಸಗಿ ಶಾಲೆ ವಿದ್ಯಾಲಯಗಳಲ್ಲಿ, ಆಸ್ಪತ್ರೆಗಳಲ್ಲಿ, ಪತ್ರಿಕೋದ್ಯಮದಲ್ಲಿ ಗುಮಾಸ್ತೆಯರಾಗಿ, ಬೆರಳಚ್ಚುಗಾರರಾಗಿ ಶೀಘ್ರಲಿಪಿಕಾರರಾಗಿ, ವೈದ್ಯರಾಗಿ, ದಾದಿಯರಾಗಿ, ಶಿಕ್ಷಕಿಯರಾಗಿ, ವರದಿಗಾರ್ತಿಯಾಗಿ, ಅಂಗನವಾಡಿ ಕಾರ್ಯಕರ್ತೆಯರಾಗಿ, ಟೆಲಿಫೋನ್ ಆಪರೇಟರ್‌ಗಳಾಗಿ, ಮೇಲ್ವಿಚಾರಕಿಯರಾಗಿ ವಿದ್ಯಾವಂತ ಮಹಿಳೆಯರು ದುಡಿಯುತ್ತಾರೆ.

ಸಾಮಾನ್ಯವಾಗಿ ಎಲ್ಲಾ ಮಹಿಳಾ ಕಾರ್ಮಿಕರು ನೌಕರರು ಕೂಲಿ-ಸಂಬಳಗಳಿಗಾಗಿ ದಿನವಿಡೀದುಡಿಯುವುದಲ್ಲದೆ, ಮನೆಯಲ್ಲಿ ಅಡಿಗೆ, ಶಿಶುಪಾಲನೆ, ಹಿರಿಯರಸೇವೆ ಮುಂತಾದ ಕೆಲಸ 'ಗಳನ್ನೂ ಮಾಡಬೇಕು. ಪಾಳೆಯಗಾರಿ ಸಂಬಂಧಗಳು ಇನ್ನೂ ಇರುವ ಇಂದಿನ ಸಮಾಜದಲ್ಲಿ ಪಾಳೆಯಗಾರಿ ದರ್ಪ, ದೌರ್ಜನ್ಯಗಳನ್ನು ದುಡಿಯುವ ಮಹಿಳೆಯರು ಅನುಭವಿಸುವುದನ್ನು ಕಾಣಬಹುದು.

ದುಡಿಯುವ ಮಹಿಳೆಯರಿರುವ ಕೈಗಾರಿಕಾ ಸ್ಥಾವರಗಳಲ್ಲಿ, ಕಛೇರಿಗಳಲ್ಲಿ ಸಾಮಾನ್ಯವಾಗಿ ಮಹಿಳೆಯರಿಗೆ ಪ್ರತ್ಯೇಕವಾದ ಮೂತ್ರಿಗಳು, ಕಕ್ಕುಸುಗಳು, ವಿಶ್ರಾಂತಿ ಗೃಹಗಳು ಇರುವುದಿಲ್ಲ. ದುಡಿಯುವ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳಲು ಬಾಲಪಾಲಿಕೆಗಳು (ಕ್ರೇಷ್‌ಗಳು) ಇರುವುದಿಲ್ಲ. ಅನೇಕ ದುಡಿಯುವ ಮಹಿಳೆಯರಿಗೆ ಹೆತ್ತಾಗ ಅವರಿಗೆ ಸಿಗಬೇಕಾದ ಹೆರಿಗೆ ರಜೆ, ಹೆರಿಗೆ ಭತ್ಯೆ, ವೈದ್ಯಕೀಯ ಶುಶ್ರೂಷೆ ಸಿಕ್ಕುವುದಿಲ್ಲ. ಎರಡು ಹೆರಿಗೆಯ ನಂತರ ಹೆರಿಗೆ ಭತ್ಯೆ ಮತ್ತು ಹೆರಿಗೆ ರಜೆಗಳನ್ನು ಕೊಡುವುದಿಲ್ಲವೆಂದು ಸರ್ಕಾರವೇ ಹೇಳುತ್ತದೆ. ಹೆರಿಗೆ ಭತ್ಯೆಯನ್ನು ಕೊಡದೆ ಉಳಿಸಿಕೊಳ್ಳುವುದಕ್ಕಾಗಿ ಬಂಡವಾಳಗಾರರು ಒಬ್ಬ ಮಹಿಳೆ ಗರ್ಭಿಣಿಯಾದರೆ ಆಕೆಗೆ ಕೆಲಸವನ್ನು ನಿಲ್ಲಿಸುತ್ತಾರೆ. ಕುಟುಂಬ ನಿಯಂತ್ರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಮಹಿಳೆಯರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಾರೆ.

ಕೆಲವು ಮೇಲಧಿಕಾರಿಗಳು ಸಹೋದ್ಯೋಗಿಗಳು, ತಮ್ಮ ಕೈ ಕೆಳಗೆ ಕೆಲಸ ಮಾಡುವ ಮಹಿಳೆಯರನ್ನು ಚುಡಾಯಿಸುವುದು, ಕೆಣಕುವುದು, ಮಾನಭಂಗ ಮಾಡಲು ಪ್ರಯತ್ನಿಸುವುದು ನಡೆಯುತ್ತಿದ್ದು ದುಡಿಯುವ ಮಹಿಳೆಯರು ಅಪಮಾನಕರವಾದ ಅಮಾನುಷ ದೌರ್ಜನ್ಯವನ್ನು ಎದುರಿಸಬೇಕಾಗುತ್ತದೆ. ನೌಕರಿಯಲ್ಲಿರುವ ಮಹಿಳೆಯರನ್ನು ದೂರದ ಊರಿಗೆ ವರ್ಗ ಮಾಡಿ ತೊಂದರೆ ಕೊಡುವುದು ನಡೆಯುತ್ತದೆ.

ಪುರುಷ ಪ್ರಧಾನವಾದ ಪ್ರಸಕ್ತ ವರ್ಗ ಸಮಾಜದಲ್ಲಿ ಕಾರ್ಮಿಕ ಸಂಘಗಳ ನಾಯಕತ್ವವೂ ಪುರುಷ ಪ್ರಧಾನವಾಗಿ ಬೆಳೆದು ಬಂದಿದ್ದು, ಮಹಿಳೆಯರ ಮೇಲೆ ಹೇಳಿದ ವಿಶಿಷ್ಟ ,ಸಮಸ್ಯೆಗಳನ್ನು ಪರಿಹರಿಸಲು ಕಾರ್ಮಿಕ ಸಂಘಗಳು ಅಗತ್ಯವಾದ ಗಮನವನ್ನು ಕೊಡುವುದಿಲ್ಲ. ಒಂದು ಕಾರ್ಖಾನೆಯಲ್ಲಿರುವ ಕಾರ್ಮಿಕ ಸಂಘವು ಬಾಲಪಾಲಿಕೆಯನ್ನು ಏರ್ಪಡಿಸಬೇಕೆಂಬ ಬೇಡಿಕೆಯನ್ನಿಟ್ಟರೆ ಮಾಲಿಕರು ಕಾರ್ಖಾನೆಯನ್ನೇ ಮುಚ್ಚಿ ಬಿಡಬಹುದೆಂಬ ನೆಪವೊಡ್ಡಿ ಆ ಬೇಡಿಕೆಯನ್ನೇ ಮಾಲೀಕರ ಮುಂದೆ ಮಂಡಿಸಲು ಹೋಗಲಿಲ್ಲ. ಈ ವೈಫಲ್ಯದಿಂದ ದುಡಿಯುವ ಮಹಿಳೆಯರಲ್ಲಿ ಬೆಳೆಯುವ ಅತೃಪ್ತಿಯನ್ನು ಕೆಲವು ಮಹಿಳಾ ಸಂಘಟನೆಗಳು ಸಾಮಾನ್ಯವಾಗಿ ಪುರುಷ ದ್ವೇಷವನ್ನು ಹರಡುವ, ಸಾಮ್ರಾಜ್ಯಶಾಹಿ ಮೂಲಗಳಿಂದ ನೆರವು ಪಡೆಯುವ ಮಹಿಳಾ ಸಂಘಟನೆಗಳು ಉಪಯೋಗಿಸಿ ಕೊಳ್ಳಲು ಪ್ರಯತ್ನಿಸುತ್ತವೆ.

ಮಹಿಳೆಯರೇ ಪ್ರಧಾನವಾಗಿರುವ ಕೈಗಾರಿಕೆಗಳಲ್ಲಿರುವ ಕಾರ್ಮಿಕ ಸಂಘಗಳಲ್ಲಿ ಪುರುಷರೇ ಪದಾಧಿಕಾರಿಗಳಾಗಿರುವುದು ಕಾರ್ಮಿಕ ಸಂಘ ಚಳುವಳಿಯಲ್ಲಿ ಕಂಡು ಬರುವ ಒಂದು ವಿಲಕ್ಷಣ. ೧೯೭೫-೭೭ ರ ಆಂತರಿಕ ತುರ್ತು ಪರಿಸ್ಥಿತಿಯಿದ್ದ ಕಾಲದಲ್ಲಿ ಕುಣಿಗಲ್ಲಿನಲ್ಲಿ ಪೋಲೀಸರು ಅಲ್ಲಿಯ ಬೀಡಿ ಕಾರ್ಮಿಕರ ಸಂಘದ ಮುಖಂಡ ಬಡೇಸಾಹೇಬರನ್ನು ಬಂಧಿಸಿ ಠಾಣೆಗೆ ಕರೆದೊಯ್ದಾಗ, ಈ ಸುದ್ದಿಯನ್ನು ತಿಳಿದ ಐನೂರಕ್ಕೂ ಹೆಚ್ಚು ಬೀಡಿ ಕಾರ್ಮಿಕರು ಎಲ್ಲಾ ಮುಸ್ಲಿಂ ಮಹಿಳಾ ಕಾರ್ಮಿಕರು ಪೋಲೀಸ್ ಠಾಣೆಗೆ ಸಂಜೆಯವರೆಗೆ ಮುತ್ತಿಗೆ ಹಾಕಿ ತಮ್ಮ ನಾಯಕನನ್ನು ಬಿಡಿಸಿಕೊಂಡು ಬರುವುದರಲ್ಲಿ ಯಶಸ್ವಿಯಾದರು. ಮಂಗಳೂರಿನ ಮಹಿಳಾ ಬೀಡಿ ಕಾರ್ಮಿಕರು ಹಲವಾರು ಸಮರ ಧೀರ ಹೋರಾಟಗಳನ್ನು ನಡೆಸಿದ್ದಾರೆ. ಮಹಿಳಾ ಕಾರ್ಮಿಕರು ನಡೆಸಿದ ಹಲವಾರು ಸಮರಶೀಲ ಹೋರಾಟಗಳಿಗೆ ಮೇಲಿನವು ಉದಾಹರಣೆಗಳಷ್ಟೆ. ಅನೇಕ ವರ್ಷಗಳಿಂದ ಅಸ್ತಿತ್ವದಲ್ಲಿದ್ದು ಅನೇಕ ಚಳುವಳಿ, ಹೋರಾಟಗಳನ್ನು ನಡೆಸಿಯೂ ಮಹಿಳಾ ಕಾರ್ಮಿಕರು, ಮಹಿಳಾ ನೌಕರರು ಕಾರ್ಮಿಕ ಸಂಘಗಳ ಕಾರ್ಯಕರ್ತೆಯರಾಗಿ, ನಾಯಕಿಯರಾಗಿ ಬೆಳೆಯದಿರುವುದು, ಬೆಳೆಸಲ್ಪಡದಿರುವುದು ಕಾರ್ಮಿಕ ಸಂಘ ಚಳುವಳಿಯ ಬಹು ದೊಡ್ಡ ವೈಫಲ್ಯವಾಗಿದೆ.

ಕೆಲವು ಸಂದರ್ಭಗಳಲ್ಲಿ ಮೇಲಿನ ಒತ್ತಡದಿಂದಾಗಿ ಮಹಿಳಾ ಕಾರ್ಮಿಕರನ್ನು ಕಾರ್ಮಿಕ ಸಂಘಗಳ ಪದಾಧಿಕಾರಿಗಳಾಗಿ, ಕಾರ್ಯಕರ್ತೆಯರನ್ನಾಗಿಚುನಾಯಿಸಿದರೂ ಅವರು ಆ ಸ್ಥಾನಗಳಿಂದ ಕೆಲಸಮಾಡಲು ಬೇಕಾದ ತರಬೇತಿ, ಸಹಾಯಗಳನ್ನು ಕೊಡದಿರುವುದು, ಆ ಮಹಿಳೆಯರ ಮನೆಯವರು ಅವರನ್ನು ಕಾರ್ಮಿಕ ಸಂಘಗಳ ಕಾರ್ಯಕರ್ತೆಯರಾಗಿ ಬೆಳೆಯಲು ಅಡ್ಡಿ ಮಾಡುವುದು ಕಾರ್ಮಿಕ ಸಂಘ ಚಳುವಳಿಯ ಇನ್ನೊಂದು ವೈಫಲ್ಯವಾಗಿದೆ.

ವರ್ಗ ಹೋರಾಟದ ಆಧಾರದ ಮೇಲೆ ೧೯೭೦ ರ ಮೇ ತಿಂಗಳಲ್ಲಿ ಕಲ್ಕತ್ತದಲ್ಲಿ ನಡೆದ ಕಾರ್ಮಿಕ ಸಂಘಗಳ ಅಖಿಲ ಭಾರತ ಸಮ್ಮೇಳನದಲ್ಲಿ ಜನಿಸಿದ ಸಿ.ಐ.ಟಿ.ಯು. ಮೂರು ವರ್ಷಗಳ ನಂತರ ನಡೆದ ಎರಡನೆಯ ಸಮ್ಮೇಳನದಲ್ಲಿ ದುಡಿಯುವ ಮಹಿಳೆಯರ ಸಮಸ್ಯೆಗಳತ್ತ ಗಮನ ಹರಿಸಿತು. ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಐ.ಎಲ್.ಓ. ೧೯೭೫ನ್ನು 'ಅಂತರ ರಾಷ್ಟ್ರೀಯ ಮಹಿಳಾ ವರ್ಷ' ಎಂದು ಘೋಷಿಸಿತು. ಕಾರ್ಮಿಕ ಚಳುವಳಿಯ ಒತ್ತಾಯದಿಂದಾಗಿ ಭಾರತ ಸರ್ಕಾರವು ಮಹಿಳೆಯರಿಗೆ ಸಮಾನ ವೇತನವನ್ನು ಕೊಡುವ 'ಈಕ್ವಲ್ ರೆಮ್ಯುನರೇಷನ್ ಆಕ್ಟ್' ಎಂಬ ಕಾಯಿದೆಯನ್ನೇ ಮಾಡಿತು. ಆದರೆ ಎರಡು ಮೂರು ಕೈಗಾರಿಕೆಗಳಿಗೆ ಮಾತ್ರ ಈ ಕಾಯಿದೆಯನ್ನು ಅನ್ವಯಿಸಿತು.

ಸಿಐಟಿಯು ೧೯೭೯ರ ಏಪ್ರಿಲಿನಲ್ಲಿ ತನ್ನ ನಾಲ್ಕನೆಯ ಅಖಿಲ ಭಾರತ ಸಮ್ಮೇಳನದವನ್ನು ಮದರಾಸಿನಲ್ಲಿ ನಡೆಸುವುದರ ಜತೆಯಲ್ಲಿಯೇ, ಎರಡು ದಿವಸಗಳ ಅಖಿಲ ಭಾರತ ದುಡಿಯುವ ಮಹಿಳೆಯರ ಸಮಾವೇಶವನ್ನು ನಡೆಸಿ, ದುಡಿಯುವ ಮಹಿಳೆಯರ ಅಖಿಲ ಭಾರತ ಸಮನ್ವಯ ಸಮಿತಿಯನ್ನು ರಚಿಸಿ, ದುಡಿಯುವ ಮಹಿಳೆಯರ ವಿಶಿಷ್ಟ ಸಮಸ್ಯೆಗಳತ್ತ ಸಾರ್ವಜನಿಕರ, ಸರ್ಕಾರಗಳ ಗಮನವನ್ನು ಸೆಳೆಯಿತು.

ಈ ಅಖಿಲ ಭಾರತ ಸಮಾವೇಶಕ್ಕೆ ಪೂರ್ವ ಭಾವಿಯಾಗಿ ದುಡಿಯುವ ಮಹಿಳೆಯರ ಕರ್ನಾಟಕ ರಾಜ್ಯದ ಮೊದಲನೆಯ ಸಮಾವೇಶವು ೧೯೭೯ ರ ಫೆಬ್ರುವರಿ ತಿಂಗಳಲ್ಲಿ ಮಂಗಳೂರಲ್ಲಿ ನಡೆಯಿತು. ಈ ವೇಳೆಗೆ 'ವಿಮೋಚನ', 'ಮಾಲಿನಿ', '೧೫೧ ಕೋರ್‌ಗ್ರುಪ್', 'ಮಹಿಳಾ ಸಂಘರ್ಷ ಸಮಿತಿ' ಮೊದಲಾದ ಮಹಿಳಾ ಸಂಘಟನೆಗಳು ಹುಟ್ಟಿಕೊಂಡುವು. ಮಂಗಳೂರಿನ ಸಮಾವೇಶವು ರಚಿಸಿದ್ದ ಸಮನ್ವಯ ಸಮಿತಿಯ ನಾಯಕ ಸ್ಥಾನದಲ್ಲಿದ್ದವರೇ, 'ದುಡಿಯುವ ಮಹಿಳೆಯರ ಸಮನ್ವಯ ಸಮಿತಿ'ಯ ಒಂದು ಪ್ರತ್ಯೇಕವಾದ ಸಂಘಟನೆ, ಅದಕ್ಕೆ ತನ್ನದೇ ಆದ ಸದಸ್ಯತನ, ವಂತಿಗೆ ಇರಬೇಕು ಮುಂತಾದ ತಪ್ಪು ವಾದ, ತಪ್ಪು ನಿಲುಮೆಗಳಿಂದಾಗಿ ಸಮನ್ವಯ ಸಮಿತಿಯು ಕಾಲಕ್ರಮೇಣ ಕ್ರಿಯಾಶೂನ್ಯವಾಯಿತು.

ಸಮಾಜವಾದದ ಗುರಿಯತ್ತ ಹೋಗಲು ಜನತಾ ಪ್ರಜಾಪ್ರಭುತ್ವ ಕ್ರಾಂತಿಯಾಗಬೇಕು. ಇದನ್ನು ನಡೆಸಲು ಜನತಾ ಪ್ರಜಾಪ್ರಭುತ್ವ ರಂಗದ ನಿರ್ಮಾಣವಾಗಬೇಕು. ಕಾರ್ಮಿಕ ವರ್ಗವು ಈ ರಂಗದ ನಾಯಕ ಪಾತ್ರವನ್ನು ವಹಿಸಬೇಕು. ಕಾರ್ಮಿಕ ವರ್ಗದ ಐಕ್ಯತೆಗಾಗಿ ನಡೆಯುವ ಹೋರಾಟದಲ್ಲಿ ಕಾರ್ಮಿಕ ವರ್ಗದ ಒಂದು ಅವಿಭಾಜ್ಯ ಭಾಗವಾದ ದುಡಿಯುವ ಮಹಿಳೆಯರು ಗಮನಾರ್ಹವಾದ ಪಾತ್ರವನ್ನು ವಹಿಸಬೇಕು.

ಕಾರ್ಮಿಕ ವರ್ಗದ ಈ ಲಕ್ಷ್ಯಾಚಾರದ ವಿರುದ್ಧವಾಗಿ ಸಾಮ್ರಾಜ್ಯ ಶಾಹಿಗಳು ಮಹಿಳೆಯರು ಸಾಮಾನ್ಯ ಚಳುವಳಿಯಲ್ಲಿ ಭಾಗವಹಿಸದಂತೆ ಮಾಡಲು, ಮಹಿಳೆಯರ ಬೇಡಿಕೆಗಳಿಗಾಗಿ ಎಂಬ ಹೆಸರಿನಲ್ಲಿ ಮಹಿಳೆಯರನ್ನು ಪುರುಷರ ವಿರುದ್ಧ, ಪುರುಷ ಕಾರ್ಮಿಕರ ವಿರುದ್ಧ ಎತ್ತಿಕಟ್ಟುವ ಸಂಘಟನೆಗಳನ್ನು ಪ್ರೇರೇಪಿಸಿ, ಒಳಗಿಂದೊಳಗೆ ಧನ ಸಹಾಯ ಮಾಡಿ, ದುಡಿಯುವ ಮಹಿಳೆಯರ ಐಕ್ಯತೆಯ ವಿರುದ್ಧವಾಗಿ, ಮಹಿಳೆಯರ ಐಕ್ಯತೆಯ ವಿರುದ್ಧವಾಗಿ ಕೆಲಸ ಮಾಡುವಂತೆ ಮಾಡಿದರು.

ದುಡಿಯುವ ಮಹಿಳೆಯರ ಕರ್ನಾಟಕ ರಾಜ್ಯದ ಎರಡನೆಯ ಸಮಾವೇಶವು ನಡೆಯುವಾಗ ಹಿಂದಿನ ಅನುಭವದಿಂದ ಪಾಠಗಳನ್ನು ಕಲಿತು, ಮಹಿಳಾ ಕಾರ್ಮಿಕರು ಪ್ರಧಾನವಾಗಿರುವ ಬೀಡಿ, ಪ್ಲಾಂಟೇಷನ್, ಕಾಫಿ ಸಂಸ್ಕರಣ ಮೊದಲಾದ ಕೈಗಾರಿಕೆಗಳ ಕಾರ್ಮಿಕರ ಗಂಭೀರವಾದ ಸಮಸ್ಯೆಗಳನ್ನು ಎದುರಿಸಲು, ಮಹಿಳಾ ಕಾರ್ಮಿಕರ ವಿಶಿಷ್ಟ ಸಮಸ್ಯೆಗಳನ್ನು ಪರಿಹರಿಸಲು, ದುಡಿಯುವ ಮಹಿಳೆಯರನ್ನು ಕಾರ್ಮಿಕ ಸಂಘಗಳ ಮತ್ತು ಕಾರ್ಮಿಕಚಳುವಳಿಯ ನಾಯಕ ಸ್ಥಾನಕ್ಕೆ ಏರಿಸಲು ಎದುರಾಗುವ ಸಮಸ್ಯೆಗಳನ್ನು ಚರ್ಚಿಸಬೇಕಾಗಿದೆ.

ಗಂಡು ಮತ್ತು ಹೆಣ್ಣಿನ ನಡುವೆ ಇರುವ ತಾರತಮ್ಯವು ಅಳಿದು ಗಂಡು ಮತ್ತು ಹೆಣ್ಣು ಸರ್ವ ಸಮಾನರಾಗುವುದು ಸಮತಾವಾದಿ ಸಮಾಜದಲ್ಲಿ ಮಾತ್ರ ಎಂಬುದನ್ನು ಸ್ಮರಿಸಿ, ದುಡಿಯುವ ಮಹಿಳೆಯರ ಚಳುವಳಿಯು ಆ ದಿಸೆಯಲ್ಲಿ ಮುನ್ನಡೆಯಲಿ ಎಂದು ಹಾರೈಸೋಣ.

ಮಸಣದಲ್ಲಿ ಸಂಘಿಗಳು

ಮಾರ್ಚ್ ೧೭ರ ಮುಂಜಾನೆ ಸಂಘ ದಿಲ್ಲಿಯ ಲೋದಿ ರಸ್ತೆಯ ಸುಡುಗಾಡನ್ನು ತಲುಪಿತು. ಆದರೆ ದೇಶದ ದೌರ್ಭಾಗ್ಯ ಸಂಘದ ಈ ಸ್ಮಶಾನಯಾತ್ರೆ ಚಟ್ಟ ಹತ್ತಿ ಸಾಗಲಿಲ್ಲ. ಸ್ವಂತ ಕಾಲಿನಲ್ಲೇ ನಡೆದು ಮುಟ್ಟಿತು. ಸಂಘಿಗಳಿಗೆ ಸುಡುಗಾಡಿಗೆ ಹೋಗುವ ಅಗತ್ಯ ಏಕೆ ಬಂತು ಎಂದು ನೀವು ಕೇಳಬಹುದು. ಈ ಪ್ರಶ್ನೆ ಏಕೆಂದರೆ ಅವರು ಒಳ್ಳೆಯ ರೀತಿಯಲ್ಲಿರುವ ಕೇರಿಗಳನ್ನೇ ಮಸಣ ಮಾಡಿಬಿಡುವುದರಲ್ಲಿ ನಿಪುಣರು. ಅವರ ಆಧ್ಯಾತ್ಮ ಚೇತನ ಬಹಳ ಒದೆಯಲಾರಂಭಿಸಿದಾಗ ಹೂಗಳಿಂದ ತುಂಬಿದ ಕೇರಿಗಳಲ್ಲಿ ಮಸಣದ ಮೌನ ಹರಡಿಬಿಡುತ್ತಾರೆ. ಆ ದಿನವೂ ಕೊನೆಗೆ ಆದದ್ದು ಇದೇ. ಹಜರತ್ ನಿಜಾಮುದ್ದೀನ್ ಬಸ್ತಿಯಲ್ಲಿ, ಗುಂಡು ಹಾರಿತು. ಇಬ್ಬರು ಸ್ಥಳದಲ್ಲೇ ಸಾಯಿಸಲ್ಪಟ್ಟರು. ಸಂಘಗಳು ಬಂದು ಸೇರಿದಲ್ಲಿ ಹೆಣ ಬೀಳದಿರುವುದೇ? ಅಸಂಭವ.

ಜಗಳ ಇದ್ದದ್ದು ಮಸಣ ಮತ್ತು ಕಬ್ರಿಸ್ತಾನದ ನಡುವಿನ ಭೂಮಿಗಾಗಿ ಎಂದು ತಿಳಿದು ಬಂದಿದೆ. ಈ ಭೂಮಿಯಲ್ಲಿ ಮಹಿಳೆಯರ ಗುಡಿಸಲುಗಳು ಎದ್ದಿದ್ದವು. ಅವುಗಳ ಈ ಬೆಡಾರುಮಾನಲ್ಲಿ ಶರೀರಧಾರಿ ಗಳಿಗೇನು ಕೆಲಸ ಎಂಬುದು ಸಂಘಿಗಳ ಕಳವಳ. ಆದ್ದರಿಂದ ಅವರು ನಿರ್ಧರಿಸಿ ಬಿಟ್ಟರು. ಹಿಂದೂ ಅವುಗಳ ಈ ಬೆಡಾರುವಿನ ಗೋಡೆಯನ್ನು ಮುಂದೆ ತಳ್ಳಿಬಿಟ್ಟರೆ ಅವುಗಳನ್ನು ಯಾರೂ ಡಿಸ್ಟರ್ಬ್ ಮಾಡಲು ಸಾಧ್ಯವಿಲ್ಲವಲ್ಲ.

ಮಾರ್ಚ್ ೧೭ರ ಮುಂಜಾನೆ ವಿಶ್ವ ಹಿಂದೂ ಪರಿಷದಿಗಳು, ಭಜರಂಗ ದಳೀಯರು, ಬಿಜೆಪೀಯರು, ವಿಧ ವಿಧದ ಚಡ್ಡಿಗಳು ಕೈಯಲ್ಲಿ ತ್ರಿಶೂಲ ಹಿಡಿದು ಲೋದಿ ರಸ್ತೆಯ ರುದ್ರಭೂಮಿ ತಲುಪಿಯೇ ಬಿಟ್ಟರು. ಜಯ ಶ್ರೀರಾಮ ಹರಹರ ಮಹಾದೇವ ಘೋಷಣೆ ಕೊಟ್ಟು ಗೋಡೆ ಕಟ್ಟುವುದನ್ನು ಶುರುಮಾಡಿಯೇ ಬಿಟ್ಟರು. ನೋಡಿದ ಎದುರಿನ ಕೇರಿಯ ಜನ ಭುಗಿಲೆದ್ದರು. ಸಂಘಿಗಳಿಗೂ ಇದೇ ಬೇಕಾಗಿತ್ತು. ಏಕೆಂದರೆ ಸ್ವತಃ ಸಂಘಿಗಳು ತಣ್ಣಗೆ ತಲೆಯಿಂದ ಇದನ್ನೆ ನಿರ್ಧರಿಸಿ ಬಂದಿದ್ದರು. ಅವರನ್ನು ಸಿಟ್ಟಿಗೇಳಿಸುತ್ತೇವೆ. ಅವರು ಸಿಟ್ಟಿಗೆದ್ದಾಗ ನಾವೂ ಭುಗಿಲೇಳುತ್ತೇವೆ ಆಯ್ತು. ಎದುರಿನ ಮಂದಿ ಭುಗಿಲೆದ್ದರು. ಸಂಘೀಸರದಾರ ಆದೇಶ ನೀಡಿದ "ಚಡ್ಡಿ ಫಲ್ಟನ್ ಭಡಕೇಗೀ, ಪಲ್ಟನ್ ಭಡಕ್"!

ಆದೇಶ ಸಿಕ್ಕಿದ್ದೇ ತಡ; ಭುಗಿಲೇಳಲೆಂದೇ ಮನೆಯಿಂದ ಹೊರಟ ಚಡ್ಡಿಪಟಾಲಂ ಭುಗಿಲೆದ್ದಿತು. ಇನ್ನಷ್ಟು ವೇಗವಾಗಿ ಗೋಡೆ ಕಟ್ಟಲಾರಂಭಿಸಿತು. ನಡುವೆ ಒಬ್ಬ ಟ್ರೈನ್ಡ್ ಚಡ್ಡಿ ಎದುರಿನ ಕೇರಿಯ ಹಳೆ ಸಾಮಾನಿನ ಗೋದೊಮಿಗೆ ಬೆಂಕಿಯಿಟ್ಟ, ಈ ರೀತಿ ಸಂಘದ ಎರಡೂ ಉದ್ದೇಶ ಸಾಧಿಸಿತು. ನಿಮಗೆ ಗೊತ್ತಿರಬೇಕು ಪ್ರತಿಯೊಬ್ಬ ಚಡ್ಡಿಯ ಜೀವನದ ಗುರಿ ಎರಡು. ಒಂದು ಗೋಡೆ ನಿಲ್ಲಿಸುವುದು. ಇನ್ನೊಂದು ಬೆಂಕಿ ಹಚ್ಚುವುದು. ಪ್ರತಿಯೊಬ್ಬ ಚಡ್ಡಿಗೂ ಎರಡೂತರದ ಟ್ರೈನಿಂಗ್ ಕೊಡಲಾಗುತ್ತದೆ. ದ್ವೇಷದ ಗೋಡೆ ಕಟ್ಟುವುದು ಮತ್ತು ಅಗತ್ಯವಿದ್ದರೆ ಕಲ್ಲು ಇಟ್ಟಿಗೆಗಳ ಗೋಡೆ ಕೂಡಾ. ಆದರೆ ಸಾಮಾನ್ಯವಾಗಿ ಸಂಘೀ ವಾಸ್ತುಶಿಲ್ಪದಲ್ಲಿ ಪ್ರಿಫರೆನ್ಸ್ ದ್ವೇಷದ ಗೋಡೆಗೇನೇ. ಏಕೆಂದರೆ ಈ ಗೋಡೆ ಬಹಳ ಗಟ್ಟಿ. ಇದು ಭೂಮಿಯನ್ನು ಹಂಚುವುದಿಲ್ಲ. ಬದಲಿಗೆ ಚೈತನ್ಯಶಾಲಿ ಮನುಷ್ಯನನ್ನೇ ಹಂಚಿಬಿಡುತ್ತದೆ. ಹಂಚಿಬಿಡುವುದೇನು, ಒಳ್ಳೆಯ ಹೃದಯವಂತ ಮನುಷ್ಯನನ್ನೇ ಗೋಡೆ ಮಾಡಿಬಿಡುತ್ತದೆ.

ಇದೇ ಕಾರಣ ಅಗ್ನಿಶಾಮಕರು ಬೆಂಕಿ ಆರಿಸಲು ಬಂದಾಗ ಸಂಘಿಗಳು ಬಿಡಲಿಲ್ಲ. ಅಗ್ನಿಶಾಮಕರ ಮೇಲೇಯೇ ಕಲ್ಲು ತೂರಿದರು. ಈ ಅಗ್ನಿಶಾಮಕ ದಳದವರೂ ಮೂರ್ಖರು. ಢಣ ಢಣ ಗಂಟೆ ಬಾರಿಸುತ್ತಾ ಬಂದೇ ಬಿಟ್ಟರು. ಆದರೆ ಅಲ್ಲಿ ಬೆಂಕಿ ಹತ್ತಿದ್ದ ತಾನೇ? ಅಲ್ಲಿ ಬೆಂಕಿ ಹಚ್ಚಲಾಗಿತ್ತಷ್ಟೆ. ಹತ್ತಿಕೊಂಡ ಬೆಂಕಿ, ಹತ್ತಿಸಿದ ಬೆಂಕಿ ಇವೆರಡರ ನಡುವೆ ಏನು ವ್ಯತ್ಯಾಸ ಎಂದು ಅರ್ಥವಾಗದಿರುವುದೇ ನಮ್ಮ ಪ್ರತಿಯೊಂದು ಸರಕಾರೀ ಇಲಾಖೆಯ ವಿಶೇಷತೆ. ಅಟಲಿ ಬಿಹಾರೀ ಅಲ್ಲಿ ಬೆಂಕಿ ನಂದಿಸಲು ಬಂದಿದ್ದರೇನು? ಮದನ ಲಾಲ್ ಖುರಾನಾ ಬೆಂಕಿ ಹರಡದಿರಲೆಂದು ನೋಡಲು ಬಂದಿದ್ದರೇನು? ಮುಂಜಾವಿನಿಂದ ಮಸಣದಲ್ಲಿ ನೂರಾರು ಚಡ್ಡಿಗಳು ಪರಪರಗುಡುತ್ತಿದ್ದುದು ತಾವು ಹಚ್ಚಿದ ಬೆಂಕಿಯನ್ನು ಅಗ್ನಿಶಾಮಕರು ನಂದಿಸಲಿ ಎಂದೇನೂ ಅಲ್ಲವಲ್ಲ!

ಈ ರುದ್ರಭೂಮಿಯ ಗೇಟಿನಲ್ಲಿ ಒಂದು ಅತ್ಯಂತ ಸ್ಫೂರ್ತಿದಾಯಕ ಪಂಕ್ತಿಯಿದೆ -ಪ್ರತಿ ದಿನ ಒಂದು ಒಳ್ಳೆಯ ಕೆಲಸ ಮಾಡು! ನಿಮ್ಮ ಊರು ಕೇರಿಯ ಅನುಭವದಿಂದ ನಿಮಗೇ ಗೊತ್ತಾಗಿರಬಹುದು -ಪ್ರತಿಯೊಬ್ಬ ಚಡ್ಡಿ ಒಳ್ಳೆಯ ಕೆಲಸ ಮಾಡಲು ಎಷ್ಟು ಆತುರದಿಂದಿರುತ್ತಾನೆ ಎಂದು! ವಾಸ್ತವವಾಗಿ ಆತ ಚಡ್ಡಿ ತೊಡುವುದೇ ಅದಕ್ಕಾಗಿ. ಒಳ್ಳೆಯ ಕೆಲಸ ಮಾಡಲು ಓಡುವಾಗ ಒಳ್ಳೆಯ ಕೆಲಸ ಮಾಡಿ ಓಡುವಾಗ ಯಾವುದೇ ತೊಂದರೆಯಾಗದಿರಲಿ ಎಂದು ಸಂಘಿಗಳ ಮಾತು ನಡೆಯುವಂತಿದ್ದರೆ ಮಸಣದ ಗೇಟಿನಲ್ಲಿ ಬರೆದ ಪಂಕ್ತಿಯಂತೆ ದಿನಕ್ಕೊಂದು ಒಳ್ಳೆಯ ಕೆಲಸ ಮಾಡುತ್ತಿದ್ದರು. ಆದರೇನು ಮಾಡುವುದು? ಕಾಲ ಕೆಟ್ಟುಹೋಗಿದೆ. ಒಳ್ಳೆಯ ಕೆಲಸ ಮಾಡಲು ಬಿಡುವುದೇ ಇಲ್ಲ. ಆದ್ದರಿಂದ ಒಂದು ಒಳ್ಳೆ ಕೆಲಸ ಮಾಡುವ ಸಂದರ್ಭ ಸಿಗುವುದೇ ಅಪರೂಪ ಎಂದಾದರೂ ಸಿಕ್ಕಿದರೂ ಅದೇ ದಿನ ಅಗ್ನಿಶಾಮಕರು ಒಳ್ಳೆಯ ಕೆಲಸದ ಮೇಲೆ ನೀರು ಬಿಡಲು ಬಂದೇ ಬಿಡುತ್ತಾರೆ. ಅವರ ಈ ದಾರ್ಷ್ಟ್ಯವನ್ನು ಸಹಿಸಲು ಸಾಧ್ಯವೇ?

ಪೋಲೀಸರಿಗೆ, ಆಡಳಿತಕ್ಕೆ ಇದರ ಸುದ್ದಿಯೇ ಇರಲಿಲ್ಲವೇ ಎಂದು ನೀವು ಕೇಳಬಹುದು. ಖಂಡಿತಾ ಇತ್ತು. ಹಾಗಿದ್ದರೆ ಪೋಲೀಸರು ಏನು ಮಾಡುತ್ತಿದ್ದರು? ತಮ್ಮ ಪರಂಪರೆ ನಿಭಾಯಿಸುತ್ತಿದ್ದರು! ಗೋಡೆ ಕಟ್ಟುವುದರಲ್ಲಿ ನೆರವು ನೀಡುತ್ತಿದ್ದರು. ಮಾರ್ಚ್ ೧೭ರ ಬೆಳಿಗ್ಗೆ ಸಂಘ ಮಸಣಕ್ಕೆ ಬಂದು ಬಿಡುತ್ತದೆ ಎಂದು ಪೋಲೀಸ್ ಅಧಿಕಾರಿಗಳಿಗೆ ಗೊತ್ತಿರಲಿಲ್ಲವೇ? ಹೌದಪ್ಪಾ, ಗೊತ್ತಿತ್ತು! ಆದರೆ ಮಸಣದಲ್ಲಿ ಸ್ವಲ್ಪ ಹೊತ್ತು ಕೀರ್ತನೆ ನಡೆಯುತ್ತದಷ್ಟೆ ಎಂದು ಅವರಿಗೆ ಹೇಳಲಾಗಿತ್ತು! ಸ್ಮಶಾನದಲ್ಲಿ ಯಾರಾದರೂ ಏಕೆ ಕೀರ್ತನೆ ಮಾಡುತ್ತಾರೆ ಎಂದೂ ಪೋಲೀಸರು ಯೋಚಿಸಲಿಲ್ಲವೇ? ಇಲ್ಲಪ್ಪಾ, ಪೋಲೀಸ್ ಅಧಿಕಾರಿಗಳಿಗೂ ಮೋಸ ಮಾಡಲಾಯಿತು! ಆದರೂ, ಅವರು ಅಲ್ಪಸಂಖ್ಯಾತರ ಕೇರಿಗೆ ನುಗ್ಗಿ ಸಿಕ್ಕಾಪಟ್ಟೆ ಗುಂಡು ಹಾರಿಸಿದರಲ್ಲ? ಏನು ಮಾಡುವುದು ಸ್ವಾಮೀ, ಕಾನೂನು ವ್ಯವಸ್ಥೆಯ ರಕ್ಷಣೆ ಪೋಲೀಸರ ಜವಾಬ್ದಾರಿಯಲ್ಲವೇನು? ಪೋಲೀಸರನ್ನು ವಂಚಿಸಿದ್ದು ಸಂಘಿಗಳೇ ಹಾಗಿದ್ದರೆ ಹನ್ನೊಂದುವರ್ಷದ ಹಸೀಘನ ಮೇಲೆ ಗುಂಡು ಹಾರಿಸುವಾಗ ಈ ಮಗು ಏನದ್ದೇನು ತಪ್ಪು ಎಂದು ಪೋಲೀಸರೇಕೆ ಯೋಚಿಸಲಿಲ್ಲ? ಕ್ಷಮಿಸಿ ಸ್ವಾಮಿ, ಯೋಚಿಸುವುದು ನಮ್ಮ ಪೋಲೀಸರಜವಾಬ್ದಾರಿಯಲ್ಲ!

(ಮಾರ್ಚ್ ೧೭ರಂದು ದೆಹಲಿಯ ಹಜರತ್ ನಿಜಾಮುದ್ದೀನ್ ಬಸ್ತಿಯಲ್ಲಿ ವಿ.ಹೆಚ್.ಪಿ., ಭಜರಂಗದಳ ಪೋಲೀಸರ ಶಾಮೀಲಿನೊಂದಿಗೆ ಸೃಷ್ಟಿಸಿದ ಗಲಭೆಯ ಬಗ್ಗೆ ಸಿ.ಪಿ.ಐ.(ಎಂ) ಕೇಂದ್ರ ಹಿಂದೀಪತ್ರಿಕೆ 'ಲೋಕ್‌ಲಹರ್' ನಲ್ಲಿಪ್ರಕಟವಾದ ವ್ಯಂಗ್ಯ

ದೇಶದ ಹಲವೆಡೆ ಕೋಮು ಹಿಂಸಾಚಾರ

ಪೊಲಿಟ್‌ಬ್ಯೂರೋ ತೀವ್ರ ಆತಂಕ

ಕಳೆದ ೧೫ ದಿನಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ ಮತ್ತೆ ಮತ್ತೆ ಕೋಮು ಗಲಭೆಗಳು ನಡೆದಿರುವ ಬಗ್ಗೆ ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಬಿಹಾರವೊಂದರಲ್ಲೇ ಮೂರೆಡೆ ಗಲಭೆಗಳಿದ್ದುವೆ. ನವಧಾದಲ್ಲಿ ಐದು ಮಂದಿ ಪ್ರಾಣ ಕಳೆಕೊಂಡರು. ಜಮಶೇಡಪುರದಲ್ಲಿ ಕನಿಷ್ಠ ಮೂವರು ಕೊಲ್ಲಲ್ಪಟ್ಟರು. ಎರಡೂ ಕಡೆ ಕೋಮುಗಲಭೆ ಸೃಷ್ಟಿಸುವಲ್ಲಿ ವಿಶ್ವಹಿಂದೂ ಪರಿಷತ್ತು, ಭಜರಂಗ್ ದಳ, ಬಿ.ಜೆ.ಪಿ. ಆರ್‌ಎಸ್.ಎಸ್‌ನ ಪಾತ್ರ ಸ್ವಯಂ ವೇದ್ಯ. ಇನ್ನೂ ಆತಂಕಕಾರಿಯೆಂದರೆ ಕಳೆದ ಸೆಪ್ಟೆಂಬರ್‌ನಲ್ಲಿ ಭಯಾನಕ ಗಲಭೆ ಕಂಡಿದ್ದ ಭಾಗಲ್ಪುರದಲ್ಲೂ ಹಿಂಸಾಚಾರ ನಡೆಯಿತು. ಈ ಹಿಂಸಾಚರಗಳಲ್ಲಿ ನೊಂದವರಿಗೆ ಪಿ.ಬಿ. ತನ್ನ ಆಳವಾದ ಸಹಾನುಭೂತಿ ವ್ಯಕ್ತಪಡಿಸಿದೆ.

ಗುಜರಾತಿನಲ್ಲಿ ಪಠಾಣ್ ಪಟ್ಟಣದಲ್ಲಿ ಹಿಂಸಾಚಾರ ನಡೆದು ಕರ್ಫ್ಯೂ ಹಾಕಬೇಕಾಯಿತು. ನವದೆಹಲಿಯ ನಿಜಾಮುದ್ದೀನ್ ರಾಜಸ್ತಾನದ ಅಜ್ಮೇರ್‌ನಲ್ಲೂ ಕೋಮುದಂಗೆ ನಡೆಸಲು ಪ್ರಯತ್ನ ನಡೆದವು.

ಕೋಮು ಕೋಲಾಹಲ ಉಂಟು ಮಾಡಲು ಪ್ರಯತ್ನಿಸಲಾಗುತ್ತಿದೆ ಎಂಬುದು ಈ ಎಲ್ಲಾ ಘಟನೆಗಳಿಂದ ಸ್ಪಷ್ಟ. ರಾಮಜನ್ಮಭೂಮಿ ದೇವಸ್ಥಾನದ ಪ್ರಶ್ನೆಯ ಮೇಲೆ ದೀರ್ಘ ಪ್ರಚಾರದಿಂದಾಗಿ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ ಎಂದು ಪಿ.ಬಿ. ಅಭಿಪ್ರಾಯ ಪಟ್ಟಿದೆ. ಈ ಎಲ್ಲಾ ಸ್ಥಳಗಳಲ್ಲಿ ಬಹುಸಂಖ್ಯಾತ ಕೋಮುವಾದಿಗಳ ಪ್ರಚೋದನೆ ಕಂಡು ಬಂದಿದೆ. ಪ್ರತ್ಯುತ್ತರವಾಗಿ ಅಲ್ಪ ಸಂಖ್ಯಾತ ಕೋಮಿನ ಮೂಲಭೂತವಾದಿಗಳೂ ಪರಿಸ್ಥಿತಿಯ ಲಾಭ ಪಡೆಯಲು ಹವಣಿಸುತ್ತಿದ್ದಾರೆ ಎಂದು ಪಿ.ಬಿ. ಹೇಳಿದೆ.

ಇಂತಹ ಘಟನೆಗಳು ನಡೆಯದಂತೆ ಎಲ್ಲಾ ಜಾತ್ಯತೀತ ಶಕ್ತಿಗಳು ಜಾಗರೂಕರಾಗಿರಬೇಕು. ಸಂಬಂಧಪಟ್ಟ ಎಲ್ಲರೂ ಶಾಂತಿ ಪಹಿಂಪಂತಾಗುವ ಒಂದು ವಾತಾವರಣ ಸೃಷ್ಟಿಯಾಗಬೇಕು. ಸೂಕ್ಷ್ಮ ಕೋಮು ಪ್ರಶ್ನೆಗಳ ಮೇಲೆ ಭಾವೋದ್ರೇಕ ಎಬ್ಬಿಸುವ ಎಲ್ಲಾ ಪ್ರಯತ್ನಗಳನ್ನು ರಾಜ್ಯ ಸರಕಾರಗಳು ದೃಢ ಕ್ರಮಗಳಿಂದ ವಿಫಲಗೊಳಿಸಬೇಕು ಹಾಗೂ ಕೇಂದ್ರ ಸರ್ಕಾರ ಈ ಬಗ್ಗೆ ತಕ್ಷಣ ನಿರ್ದೇಶನಗಳನ್ನು ನೀಡಬೇಕೆಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ಏಪ್ರಿಲ್ ೬ ರಂದು ಸೇರಲಿರುವ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಕೋಮು ಪ್ರಶ್ನೆಗಳನ್ನು ಎದುರಿಸುವಲ್ಲಿ ಒಂದು ಸರ್ವ ಸಾಮಾನ್ಯ ನಿಲುವು ರೂಪಿಸಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕೆಂದು ಕಳಕಳಿಯಿಂದ ಹೇಳಿರುವ ಪೊಲಿಟ್ ಬ್ಯೂರೋ ಇದರ ಜತೆಗೇ ಮತ್ತೆ ಮತ್ತೆ ನಡೆಯುತ್ತಿರುವ ಕೋಮು ಹಿಂಚಾಚಾರದಿಂದ ಅಪಾಯಕ್ಕೆ ಒಳಗಾಗಿರುವ ಜಾತ್ಯತೀತ ಮೌಲ್ಯಗಳನ್ನು ರಕ್ಷಿಸಲು ಎಲ್ಲಾ ಎಡ ಮತ್ತು ಜಾತ್ಯತೀತ ಶಕ್ತಿಗಳು ತಕ್ಷಣ ಒಗ್ಗಟ್ಟಿನಿಂದ ಪ್ರಯತ್ನಿಸಬೇಕೆಂದು ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

……ನಾವು ಪಣ ತೊಡುತ್ತೇವೆ!



ಬೆಂಗಳೂರಿನಲ್ಲಿ ಮಹಿಳಾ ಸೌಹಾರ್ದತಾ ಸರಪಳಿ

ನಗರದ ಜನ ನಿಬಿಡ ಕೆಂಪೇಗೌಡ ರಸ್ತೆಯ ಮೈಸೂರು ಬ್ಯಾಂಕ್ ವೃತ್ತ. ೩೧-೩-೯೦ರ ಸಂಜೆ ನೇಸರ ಕೆಂಬಣ್ಣ ತಳೆಯುತ್ತಿರುವ ೫-೧೦ರ ಸಮಯ ಕಛೇರಿ ವೇಳೆ ಮುಗಿದು ವಾಹನ ಸಂಚಾರ ಜನ ಸಂಚಾರ ಹೆಚ್ಚಾಗುವ ಹೊತ್ತು. ನೂರಾರು ಮಹಿಳೆಯರು ಕ್ಷಣದಲ್ಲಿ ವೃತ್ತದ ಮಧ್ಯೆ ಬಂದು ಒಬ್ಬರಿಗೊಬ್ಬರು ಕೈ ಕೈ ಹಿಡಿದು ಮಹಿಳಾ ಸರಪಳಿ ಸೃಷ್ಟಿಮಾಡಿದರು.

ಸಾರ್ಕ್ ದೇಶಗಳ ಕರೆಯ ಮೇರೆಗೆ "ಅವಳಿಗೆ ಅವಳ ಬಾಳ್ವವನ್ನು ಹಿಂತಿರುಗಿಸಿ" ಎಂಬ ಘೋಷಣೆಯೊಂದಿಗೆ "ಅಂತರರಾಷ್ಟ್ರೀಯ ಮಹಿಳಾ ದಿನ"ವನ್ನು ಈ ಬಾರಿ ಭಾರತದ ಎಲ್ಲ ರಾಜ್ಯಗಳಲ್ಲಿ ಯೂ ಆಚರಿಸಲಾಯಿತು. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕೇಂದ್ರ ಸಮಿತಿಯ ತೀರ್ಮಾನದ ಮೇರೆಗೆ ಬೆಂಗಳೂರಿನಲ್ಲಿ ಈ ಕಾರ್ಯ ಕ್ರಮವನ್ನು ಜನತಾದಳದ ಮಹಿಳಾ ವಿಭಾಗದ ಸಂಯೋಗದೊಂದಿಗೆ ಯೋಜಿಸ ಲಾಗಿತ್ತು. ಸುಮಾರು ೫೦೦ ಜನ ಮಹಿಳೆ ಯರು ಸೇರಿದ್ದ ಈ ಅಪೂರ್ವ ಕಾರ್ಯ ಕ್ರಮವನ್ನು ನೂರಾರು ಜನ ಪುರಷರೂ ಕೂಡ ವೀಕ್ಷಿಸಿದರು. ಜನ ನಿಬಿಡ ಪ್ರದೇಶದಲ್ಲಿ ೧೦ ನಿಮಿಷಗಳ ಕಾಲ ವಾಹನ ಸಂಚಾರವನ್ನು ಸ್ಥಗಿತ ಗೊಳಿಸಿದ ಹೆಚ್ಚಿನ ಮಹಿಳೆಯರು ದುಡಿ ಯುವ ವರ್ಗದ ನೇತೃತ್ವದ ಮುಂಚೂಣಿ ಯಲ್ಲಿರುವ ಸಿ.ಐ.ಟಿ.ಯು. ವಿನ ದುಡಿ ಯುವ ಮಹಿಳೆಯರ ಸಮನ್ವಯ ಸಮಿತಿಯಿಂದ ಬಂದವರಾಗಿದ್ದರು. ಜೊತೆಗೆ ಪ್ರಥಮ ಬಾರಿಗೆ ಇಂತಹ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಧ್ಯಮ ವರ್ಗದ ಮಹಿಳೆಯರೂ ಸೇರಿದ್ದರು. ಕಾರ್ಯಕ್ರಮದ ಸಿದ್ಧತೆಗಾಗಿ ಹಲವು ಕಡೆ ಸಭೆಗಳನ್ನು ನಡೆಸಲಾ ಯಿತು. ಎಲ್ಲ ಕಡೆಯಲ್ಲೂ ಮಹಿಳೆ ಯರಿಂದ ಸ್ಫೂರ್ತಿದಾಯಕವಾದ ಪ್ರತಿ ಕ್ರಿಯೆ ಕಂಡುಬಂದಿದ್ದು ಕಾರ್ಯ ಕರ್ತರಿಗೆ ಸಂಘಟನೆಯನ್ನು ಕಟ್ಟುವಲ್ಲಿ ಹೊಸ ಉತ್ಸಾಹ ಮೂಡಿಸಿದೆ.

ವರದಕ್ಷಿಣೆ ಪದ್ಧತಿಯನ್ನು ವಿರೋಧಿ ಸುವ ಸಮಾನತೆಯನ್ನು ಕೇಳುವ ಭಿತ್ತಿಪತ್ರ ಗಳನ್ನು ಹಿಡಿದ ಮಹಿಳೆಯರು, ಕೋಮು ಗಲಭೆಗಳ ವಿರುದ್ಧ ಅದರಲ್ಲಿ ಹೆಣ್ಣುಮಕ್ಕಳ ಮೇಲೆ ಆಗುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ನಿಲ್ಲಿಸು ವಂತೆ ದೇಶದ ಐಕ್ಯತೆ ಸಮಗ್ರತೆಯನ್ನು ಕಾಪಾಡಲು ಪಣತೊಡುವ "ಸಮಾನ ಉದ್ಯೋಗಾವಕಾಶಕ್ಕಾಗಿ ಹೋರಾಡಲು ಪಣತೊಡುತ್ತೇವೆ" ಎಂಬ ಪ್ರತಿಜ್ಞೆಯೊಂ ದಿಗೆ "ಮಹಿಳಾ ಸರಪಳಿ" ಕಾರ್ಯಕ್ರಮ ವನ್ನು ಮುಕ್ತಾಯ ಮಾಡಲಾಯಿತು.

೫-೧೫ಕ್ಕೆ ಹೆಣೆಯಬೇಕಾಗಿದ್ದ ಸರಪಳಿ ಯಲ್ಲಿ ಕೈಜೋಡಿಸಲು ಹೆಚ್ಚಿನ ಸಂಖ್ಯೆಯ ಮಹಿಳೆಯರು೪-೩೦ರಿಂದಲೇ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದರು. ಅವರನ್ನು ದ್ದೇಶಿಸಿ ಅ.ಭಾ.ಪ್ರ.ಮ. ಸಂಘಟನೆಯ ಸಂಚಾಲಕಿ ಕೆ.ಎಸ್.ವಿಮಲಾರವರು ಮಾತ ನಾಡಿ ಕಾರ್ಯಕ್ರಮದ ಉದ್ದೇಶ ಹಿನ್ನೆಲೆ ಗಳನ್ನು ತಿಳಿಸಿದರು. ಜನತಾದಳ ಮಹಿಳಾ ವಿಭಾಗದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಮತ್ತಿತರರು ಮಾತನಾಡಿದರು.

ಮಂಡಲ ಪಂಚಾಯ್ತಿ ನೌಕರರ ವಿಧಾನಸೌಧ ಚಲೋ



ಕರ್ನಾಟಕ ಸ್ಟೇಟ್ ಮಂಡಲ ಪಂಚಾಯ್ತಿ ಎಂಪ್ಲಾಯೀಸ್ ಯೂನಿಯನ್ ಕರೆಯ ಮೇರೆಗೆ ಮಾರ್ಚ್ ೩೦ರಂದು ರಾಜ್ಯದ ವಿವಿದ ಜಿಲ್ಲೆಗಳಿಂದ ರಾಜಧಾನಿಗೆ ಧಾವಿಸಿದ ಸುಮಾರು ಎರಡು ಸಾವಿರ ಮಂದಿ ಮಂಡಲ ಪಂಚಾಯ್ತಿ ನೌಕರರು ವಿಧಾನಸೌದ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಗರದ ರೈಲ್ವೆ ನಿಲ್ದಾಣದಿಂದ ಹೊರಟ ಮೆರವಣಿಗೆಯಲ್ಲಿ ಹಸಿರು ಸೀರೆಗಳನ್ನುಟ್ಟ ಉತ್ತರ ಕರ್ನಾಟಕದ ಮಹಿಳೆಯರು ಹಾಗೂ ಹಳದಿ ರೂಮಾಲುಗಳನ್ನು ಧರಿಸಿದ ಕೆಲವು ವಯೋವೃದ್ಧರು ಎದ್ದುಕಾಣುತ್ತಿದ್ದರು. ಬೆಂಗಳೂರು, ತುಮಕೂರು, ಕೋಲಾರ, ಗುಲ್ಬರ್ಗಾ, ರಾಯಚೂರು, ಬೀದರ್, ಬಿಜಾಪುರ, ಕೊಡಗು, ಬೆಳಗಾಂ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಿಂದ ನೂರಾರು ಸಂಖ್ಯೆಯಲ್ಲಿ ನೌಕರರು ಪಾಲ್ಗೊಂಡಿದ್ದರು.

ಸರ್ಕಾರದ ಬೇಜವಾಬ್ದಾರಿತನದ ಖಂಡನೆ:

ಕಬ್ಬನ್ ಪಾರ್ಕಿನಲ್ಲಿ ಸಮಾವೇಶಗೊಂಡ ನೌಕರರ ಬಹಿರಂಗ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಕೆ. ಉಪಾಧ್ಯಾಯ ರವರು ಕಾಂಗ್ರೆಸ್(ಐ) ಸರ್ಕಾರದ ಬೇಜವಾಬ್ದಾರಿತನವನ್ನು ಕಟುವಾಗಿ ಟೀಕಿಸಿದರು. ಗ್ರಾಮೀಣಾಭಿವೃದ್ಧಿ ಸಚಿವ ಬಸವಲಿಂಗಪ್ಪನವರು ಮಂಡಲ ಪಂಚಾಯ್ತಿ ನೌಕರರಿಗೂ ಮತ್ತು ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ ವೆಂದು ಹೇಳಿಕೆ ನೀಡಿರುವುದನ್ನು ತೀವ್ರವಾಗಿ ಖಂಡಿಸಿದರು. ಒಂದೆಡೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿ ಗಳ ಆಡಳಿತದಲ್ಲಿ ಅನಗತ್ಯ ಹಸ್ತಕ್ಷೇಪ ಮಾಡುತ್ತಿರುವ ಸರ್ಕಾರ ಇನ್ನೊಂದೆಡೆ ನೌಕರರ ಕುಂದುಕೊರತೆಗಳನ್ನು ಬಗೆಹರಿ ಸುವ ಜವಾಬ್ದಾರಿಯಿಂದ ನುಣುಚಿ ಕೊಳ್ಳುತ್ತಿದೆಯೆಂದು ಟೀಕಿಸಿದರು.

ಬೇಡಿಕೆಗಳನ್ನು ಈಡೇರಿಸಲು ಒತ್ತಾಯ:

ಸಂಘದ ಅಧ್ಯಕ್ಷರು ಹಾಗೂ ಗುಲ್ಬರ್ಗಾ ಜಿಲ್ಲಾಪರಿಷತ್ ಸದಸ್ಯರಾದ ಮಾರುತಿ ಮಾನ್‌ಪಡೆಯವರು ಮಾತ ನಾಡುತ್ತಾ ಮಂಡಲ ಪಂಚಾಯ್ತಿ ನೌಕರರ ನ್ಯಾಯಸಮ್ಮತ ಬೇಡಿಕೆಗಳನ್ನು ಸರ್ಕಾರವು ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿದರು. ಕೆಲಸದ ಭದ್ರತೆ, ಸೇವಾನಿಯಮಾವಳಿ ರಚನೆ, ಸಮಾನ ಕೆಲಸಕ್ಕೆ ಸಮಾನ ವೇತನ, ಎಸ್.ಎಸ್.ಎಲ್.ಸಿ. ಪಾಸಾದ ಬಿಲ್ ಕಲೆಕ್ಟರ್‌ಗಳಿಗೆ ಕಾರ್ಯದರ್ಶಿಗಳಾಗಿ ಬಡ್ತಿ, ನಿವೃತ್ತಿ ವೇತನ ಇತ್ಯಾದಿ ಬೇಡಿಕೆಗಳನ್ನು ಸಂಘವು ಸರ್ಕಾರದ ಮುಂದಿಟ್ಟಿದ್ದು ನೌಕರರ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ಮಂಡಲ ಪಂಚಾಯ್ತಿಗಳಿಗೆ ಸರ್ಕಾರದ ಅನುದಾನವನ್ನು ಹೆಚ್ಚಿಸಬೇಕೆಂದು ಮಾನ್ ಪಡೆಯವರು ತಿಳಿಸಿದರು.

ಐಕ್ಯ ಚಳುವಳಿಯತ್ತ ಮುನ್ನಡೆಯಿರಿ:

ಮಂಡಲ ಪಂಚಾಯ್ತಿ ನೌಕರರಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿ ಮಾತನಾಡಿದ ಸಿಐಟಿಯು ರಾಜ್ಯ ಮಂಡಳಿ ಅಧ್ಯಕ್ಷರಾದ ಎಸ್. ಸೂರ್ಯ ನಾರಾಯಣರಾವ್‌ರವರು ಮಾರ್ಚ್೧೯ ರಂದು ಕರ್ನಾಟಕ ರಾಜ್ಯ ಮಂಡಲ ಪಂಚಾಯ್ತಿ ನೌಕರರ ಸಂಘದ ಆಶ್ರಯದಲ್ಲಿ ಜರುಗಿದ ಮತ್ತೊಂದು ರ್‍ಯಾಲಿಯ ಬಗ್ಗೆ ಪ್ರಸ್ತಾಪಿಸಿ ಎರಡೂ ಸಂಘಗಳು ಒಟ್ಟಾಗಿ ಐಕ್ಯ ಹೋರಾಟದತ್ತ ಮುನ್ನಡೆಯುವಂತೆ ಕರೆ ನೀಡಿದರು. ಇಲ್ಲವಾದಲ್ಲಿ ಜನರ ಸಮಸ್ಯೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತಳೆದಿರುವ ಕಾಂಗ್ರೆಸ್ ಸರ್ಕಾರವನ್ನು ಕುಂಭಕರ್ಣ ನಿದ್ರೆಯಿಂದ ಎಚ್ಚರಿಸಲು ಸಾಧ್ಯವಾಗಲಾರದೆಂದು ಅಬಿ ಪ್ರಾಯಪಟ್ಟರು. ಕನಿಷ್ಠ ವೇತನ ೧೦೫೦ ರೂಗಳನ್ನು ಜಾರಿಗೊಳಿಸುವಂತೆ ಒತ್ತಾಯಿಸಲು ಸಿ.ಐ.ಟಿ.ಯು. ತಮ್ಮ ಕೊಳ್ಳುತ್ತಿರುವ ಜೈಲ್‌ಭರೋ ಚಳುವಳಿ ಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿ ದರು ಎಸ್.ಎಫ್.ಐ. ರಾಜ್ಯ ಕಾರ್ಯ ದರ್ಶಿ ಎಸ್.ವೈ. ಗುರುಶಾಂತ್ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಸ್.ಬಾಳೆ ತಮ್ಮ ಬೆಂಬಲ ಸೂಚಿಸಿದರು.

ನಂತರ ಸಂಘದ ನಿಯೋಗವೊಂದು ಪಂಚಾಯತ್ ರಾಜ್ ಇಲಾಖೆಯ ಉಪ ಕಾರ್ಯದರ್ಶಿಯವರಿಗೆ ಮನವಿ ಸಲ್ಲಿಸಿ ಮಾತುಕತೆ ನಡೆಸಿದ್ದುದಾಗಿ ತಿಳಿದು ಬಂದಿದೆ. ಬಹಿರಂಗಸಭೆಯ ಪ್ರಾರಂಭ ದಲ್ಲಿ ಸಂಘದ ಬೆಂಗಳೂರು ಜಿಲ್ಲಾ ಸಂಘಟನಾದ ಲಕ್ಷ್ಮಣಸ್ವಾಮಿ ದರು ಎ.ಪಿ. [illegible]

ಸರ್ಕಾರ ಇನ್ನಾದರೂ ಕಣ್ಣು ತೆರೆಯಲಿ

ಪಂಚಾಯ್ತಿ ರಾಜ್ ಮಸೂದೆಯ ಹೆಸರಿನಲ್ಲಿ ಅಬ್ಬರದ ಪ್ರಚಾರ ನಡೆಸಿದ ಕಾಂಗ್ರೆಸ್(ಐ) ಪಕ್ಷವು ಇದೀಗ ಮಂಡಲ ಪಂಚಾಯ್ತಿ ನೌಕರರ ಬಗ್ಗೆ ತಳೆದಿರುವ ತಾತ್ಸಾರ ಮನೋಭಾವನೆಯ ಖಂಡನಾರ್ಹವಾಗಿದೆ. ಸರ್ಕಾರದ ಪೂರ್ವಾನುಮತಿಯಿಲ್ಲದೆ ನೇಮಿಸಿಕೊಳ್ಳಲಾಗಿರುವ ಎಲ್ಲಾ ನೌಕರರನ್ನೂ ವಜಾ ಮಾಡಬೇಕೆಂದು ಸಚಿವ ಬಸವಲಿಂಗಪ್ಪನವರು ಅಧಿಕಾರ ವಹಿಸಿಕೊಂಡ ಕೆಲವೇ ದಿನಗ ನಂತರ ಹೇಳಿಕೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ೧-೪-೧೯೮೭ರ ನಂತರ ನೇಮಿಸಿ ಕೊಳ್ಳಲಾಗಿರುವ ಎಲ್ಲಾ ನೌಕರರನ್ನು ಕೆಲಸದಿಂದ ತೆಗೆಯುವಂತೆ ಆದೇಶ ನೀಡಿ ಸುತ್ತೋಲೆಯೊಂದನ್ನು ಹೊರಡಿಸಲಾಗಿದೆ.

ಪ್ರಸ್ತುತದಲ್ಲಿ ಕರ್ನಾಟಕ ರಾಜ್ಯ ಜಿಲ್ಲಾ ಪರಿಷತ್ ಮಸೂದೆಯ ಪ್ರಕಾರ ಮಂಡಲ ಪಂಚಾಯ್ತಿಗಳಿಗೆ ನೌಕರರನ್ನು ನೇಮಿಸಿಕೊಳ್ಳುವ ಮತ್ತು ವಜಾ ಮಾಡುವ ಸಂಪೂರ್ಣ ಅಧಿಕಾರವನ್ನು ನೀಡಲಾಗಿದೆ. ಯಾವುದೇ ಅಕ್ರಮದ ವಿರುದ್ಧ ಜಿಲ್ಲಾಪರಿಷತ್‌ಗಳಿಗೆ ಮೇಲ್ಮನವಿ ಮಾತ್ರ ಸಲ್ಲಿಸಬಹುದಾಗಿದೆ. ಮಂಡಲ ಪಂಚಾಯ್ತಿಗಳ ಒಟ್ಟು ಆದಾಯದಲ್ಲಿ ಶೇ ೪೦ ರಷ್ಟನ್ನು ಮಾತ್ರ ನೌಕರರ ವೇತನ ಮತ್ತಿತರೆ ವೆಚ್ಚಗಳಿಗೆ ವಿನಿಯೋಗಿಸಬಹುದಾಗಿದೆ.

ಇದರಿಂದಾಗಿ ರಾಜ್ಯದ ಮಂಡಲ ಪಂಚಾಯ್ತಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸುಮಾರು ಹದಿನೈದು ಸಹಸ್ರಕ್ಕೂ ಹೆಚ್ಚು ನೌಕರರು ಸದಾ ಅನಿಶ್ಚಿತತೆಯಲ್ಲಿಯೇ ಬದುಕುವಂತಾಗಿದೆ ಇದರಲ್ಲಿ ಗಣನೀಯ ಸಂಖ್ಯೆಯ ನೌಕರರು ಗ್ರಾಮ ಪಂಚಾಯ್ತಿಗಳ ಕಾಲದಿಂದಲೂ ಸೇವೆ ಸಲ್ಲಿಸುತ್ತಾ ಬಂದಿದ್ದರೂ ಕೇವಲ ೫೦ ರಿಂದ ೧೫೦ ರೂಗಳಷ್ಟು ಮಾಸಿಕ ವೇತನ ಪಡೆಯುತ್ತಿದ್ದಾರೆ. ಬೀದರ್ ಜಿಲ್ಲೆಯ ಚಿಟಿಕ ಚಿಂಚೋಳಿ ಮಂಡಲದಲ್ಲಿ ಕೇವಲ ೧೫ ರೂಗಳ ವೇತನ ಪಡೆದು ಕಸಗುಡಿಸುವ ಕೆಲಸ ಮಾಡುತ್ತಿರುವುದಾಗಿ ತಿಳಿದುಬಂದಿದೆ. ನೇಮಿಸಿಕೊಳ್ಳಲಾಗಿರುವ ವಿದ್ಯಾವಂತ ಯುವಕರೂ ಸರಾಸರಿ ೩೦೦ರೂ ಮಾಸಿಕ ವೇತನ ಪಡೆದು ಬಿಲ್‌ಕಲೆಕ್ಟರ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆದ್ದರಿಂದ ಪಂಚಾಯ್ತಿರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ನೆರವಾಗುತ್ತಿರುವ ನೌಕರರ ಶೋಚನೀಯ ಸ್ಥಿತಿಯನ್ನು ಮನಗಂಡು ಸರ್ಕಾರವು ಕೂಡಲೇ ಸೂಕ್ತ ಸೇವಾನಿಯಮಾವಳಿಯನ್ನು ರಚಿಸಿ ತತ್ಸಮಾನ ಕೆಲಸಗಳಿಗೆ ಇತರೆ ಸರ್ಕಾರಿ ಇಲಾಖೆಗಳಲ್ಲಿ ದುಡಿಯುತ್ತಿರುವ ನೌಕರರಿಗೆ ಸಮನಾದ ವೇತನ ಶ್ರೇಣಿ ಹಾಗೂ ಮತ್ತಿತರೆ ಸೌಲಭ್ಯಗಳನ್ನು ಒದಗಿಸಲು ಮುಂದಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮಂಡಲ ಪಂಚಾಯ್ತಿ ಮತ್ತು ಜಿಲ್ಲಾಪರಿಷತ್‌ಗಳಿಗೆ ಹೆಚ್ಚಿನ ಹಣಕಾಸಿನ ನೆರವು ಮತ್ತು ಅಧಿಕಾರಗಳನ್ನು ನೀಡುವ ಮೂಲಕ ಅಧಿಕಾರ ವಿಕೇಂದ್ರೀಕರಣದ ಘೋಷಣೆಯನ್ನು ಕಾರ್ಯರೂಪಕ್ಕಿಳಿಸುವಂತೆ ಸರ್ಕಾರವನ್ನು ಒತ್ತಾಯಿಸಬೇಕಾಗಿದೆ.

ನಗರ ಸಭೆ ಚುನಾವಣೆಗಳು:

ಎನ್.ಕೆ. ಉಪಾಧ್ಯಾಯ

ಇದೇ ತಿಂಗಳು 29 ರಂದು ನಗರ ಸಭೆಗಳಿಗೆ ಚುನಾವಣೆ ನಡೆಯಲಿದೆ. 25 ವರ್ಷಗಳ ಹಿಂದೆ ವಾರ್ಡ್ (ವಿಭಾಗ)ಗಳ ವಿಭಜನೆ ಆಗಬೇಕಾಗಿತ್ತು. ಹಾಗಾಗದಿರುವು ದರಿಂದಲೇ ಹೆಚ್ಚಿನ ವಿಭಾಗಗಳಲ್ಲಿ ಮತದಾರರ ಸಂಖ್ಯೆಯಲ್ಲಿ ಬಹಳಷ್ಟು ಅಂತರ ಕಂಡು ಬರುತ್ತಿದೆ. ಹಾಗೆಯೇ ಈ ವರ್ಷ ಮತದಾರರಯಾದಿಯ ಪುನರ್ವಿಮರ್ಶೆ ಆಗಬೇಕಾಗಿತ್ತು. ಈ ಚುನಾವಣೆಗೆ ಪೂರ್ವಭಾವಿಯಾಗಿ ಡಿಸೆಂಬರಿನಲ್ಲಿ ನಡೆದ ವಿಧಾನ ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಮೂಲಕ ವಿಭಾಗಗಳ ಮತ್ತು ಮತದಾರಯಾದಿಯ ಪುನರ್ವಿಮರ್ಶೆ ಮಾಡಲಾಗುವುದೆಂದು ವೀರೇಂದ್ರ ಪಾಟೀಲರು ಆಶ್ವಾಸನೆ ನೀಡಿದರೂ, ಉತ್ತರ ಭಾರತದ 9 ರಾಜ್ಯಗಳಲ್ಲಿ ನಡೆಯುವ ವಿಧಾನ ಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೋಲುಂಟಾದರೆ, ಅದರ ಪರಿಣಾಮ ಕರ್ನಾಟಕದಲ್ಲಿ ನಡೆಯುವ ಕಾರ್ಪೊರೇಷನ್, ನಗರ ಸಭೆ, ಪುರಸಭೆ ಚುನಾವಣೆಗಳ ಮೇಲಾಗಬಹುದೆಂಬ ಭೀತಿಯಿಂದ ರಾಜಕೀಯ ಒತ್ತಡಕ್ಕೆ ಬಲಿಯಾಗಿ, ಈಗಿರುವ ಪರಿಸ್ಥಿತಿಯಲ್ಲಿಯೇ ಚುನಾವಣೆ ಸಾರಲ್ಪಟ್ಟಿದೆ.

ಕುಡಿಯುವ ನೀರು, ದೀಪ, ರಸ್ತೆ, ಆರೋಗ್ಯ ಸೇವೆ ಮುಂತಾದ ನೇರವಾಗಿ ಜನರಿಗೆ ಸಂಬಂಧಪಟ್ಟ ಸೇವೆಗಳು ನಗರ ಸಭೆಗಳ ಆಡಳಿತೆಯೊಳಗೆ ಬರುತ್ತಿರುವುದ ರಿಂದ ನಗರ ಸಭೆ ಚುನಾವಣೆಗೆ ಬಹಳ ಮಹತ್ವ ವಿರುವುದರಿಂದ ಈ ಚುನಾವಣೆ ಯಲ್ಲಿ ಕಾಂಗ್ರೆಯನ್ನು ಸೋಲಿಸುವ ಮುಖ್ಯ ಉದ್ದೇಶದಿಂದ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಒಟ್ಟು ಸೇರಿಸಿ ಚುನಾವಣೆಯಲ್ಲಿ ಸ್ಪರ್ಧಿ ಸಬೇಕೆಂದೂ ಆ ಕಾರಣದಿಂದಲೇ ಸಿಪಿಐ(ಎಂ) ಪಕ್ಷ ಜನತಾದಳ, ಜನತಾಪಕ್ಷ, ಸಿ.ಪಿ.ಐ. ಹಾಗೆಯೇ ಪುರೋಗಾಮಿ ವ್ಯಕ್ತಿಗಳ ಜೊತೆ ಸೇರಿ ಸ್ಪರ್ಧಿಸಬೇಕೆಂಬ ನಿರ್ಣಯವನ್ನು ರಾಜ್ಯ ಸಮಿತಿ ಕೈಗೊಂಡಿತ್ತು.

ಬಿಜಾಪುರಜಿಲ್ಲೆಯಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ. ಜನತಾದಳ ಸೇರಿ ಸ್ಪರ್ಧೆಗಳಿದಿವೆ. ಬಿಜಾಪುರದಲ್ಲಿ ಒಬ್ಬ ಮಹಿಳೆಯನ್ನು ಸೇರಿ 6 ಸ್ಥಾನಗಳಲ್ಲೂ, (4 ಸ್ಥಾನಗಳಲ್ಲಿ ಹೊಂದಾಣಿಕೆಯಾಗಿದೆ ಬಾಗಲಕೋಟೆಯಲ್ಲಿ 2 ಸ್ಥಾನಗಳಲ್ಲೂ ರಬ ಕವಿ ಬನ ಹಟ್ಟಿ ಯಲ್ಲಿ 4 ಸ್ಥಾನಗಳಲ್ಲೂ ಸಿ.ಪಿ.ಐ.(ಎಂ) ಸ್ಪರ್ಧಿಸುತ್ತಿದೆ. ಪಕ್ಷದ ಮತ್ತು ರೈತ ಸಂಘದ ಮುಖಂಡರಾದ, ಹೋದ ಚುನಾವಣೆಯಲ್ಲಿ ಆರಿಸಿ ಬಂದಿರುವ ಭೀಮಸಿಕಲಾದಗಿ, ಡಿ.ವೈ.ಎಫ್.ಐ. ಅಧ್ಯಕ್ಷ ರಾದ ಮನೂಸಾಬ ಕಲಾದಗಿ ಕಾರ್ಯ ದರ್ಶಿ ಸದಾನಂದ ಮೋದಿ, ಎಸ್ಎಫ್.ಐ. ಕಾರ್ಯದರ್ಶಿ ನದಾಫ ಪ್ರಮುಖ ರಾಗಿದ್ದಾರೆ.

1952 ರಿಂದಲೂ ಬಿಜಾಪುರ ನಗರ ಸಭೆಗೆ ಕಮ್ಯುನಿಸ್ಟ್ ಪಕ್ಷದ ಉಮೇದು ವಾರರು ಆರಿಸಿ ಬರುತ್ತಿದ್ದರು. ಅವರ ಪೈಕಿ ಬಾಲಸಿಂಗ ಮಾಸ್ತರ (1ಸಲ) ಬಾಬು ಸಾಬ ಕಲಾದಗಿ (2 ಸಲ) ಮಕಾನದಾರ (4 ಸಲ) ಮೆಹಬೂಬ ಪಾಷಾ ಇನಾಮದಾರ (3 ಸಲ) ಎನ್.ಕೆ. ಉಪಾಧ್ಯಾಯ (3 ಸಲ) ಪ್ರಮುಖರು. ಎನ್.ಕೆ.ಉಪಾಧ್ಯಾಯರು ಸ್ಪರ್ಧಿಸಿದ್ದಾಗ ನಗರಸಭೆ ಕೆಲಸಗಾರರು ಕೆಂಬಾವುಟ ಹಿಡಿದು ಹಲಿಗೆ ಬಾರಿಸುತ್ತಾ ಮೆರವಣಿಗೆಯಲ್ಲಿ ಹೋಗಿ ಮತ ಹಾಕಿ ರುವ ಘಟನೆ ಹೃದಯ ಸ್ಪಂದಿಯಾಗಿತ್ತು. ಜನರ ಪರವಾಗಿ ಸತತ ಹೋರಾಡುತ್ತ ಬಂದಿರುವ ಸಿ.ಪಿ.ಐ(ಎಂ) ಸ್ಪರ್ಧಿಗಳು ಜಯಗಳಿಸುವರೆಂಬ ಅಂದಾಜಿದೆ. ಕಾಂಗ್ರೆಸ್ ಎಲ್ಲಾ ಸ್ಥಾನಗಳಿಗೆ (35) ಸ್ಪರ್ಧಿ ಗಳನ್ನು ನಿಲ್ಲಿಸಿದೆ. ಅವರಲ್ಲಿ ದುರಾಡಳಿತ ಗಾಗಿ ಹೈಕೋರ್ಟ್‌ನಿಂದ ಛೀಮಾರಿ ಹಾಕಿ ಕೊಂಡವರೂ ಶ್ರೀಮಂತರೂ ಸೇರಿದ್ದಾರೆ. ಜನತಾದಳ, ಬಿಜೆಪಿ ಕೆಲವೇ ಸ್ಥಾನಗಳಿಗೆ ಸ್ಪರ್ಧಿಸಿವೆ. ಸಿಪಿಐ 2 ಸ್ಥಾನದಲ್ಲಿ ಸ್ಪರ್ಧಿಸುತ್ತಿದೆ.

ಹಿರಿಯ ಕಾರ್ಮಿಕ ಮುಖಂಡ ಡಿ.ಎಂ. ಖಲಾಸಿಯವರು ಬಾಗಲಕೋಟೆ ಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಹಿಂದಿನ ಚುನಾವಣೆಯಲ್ಲಿ ಕೆಲವೇ ಮತಗಳಿಂದ ಸೋತಿದ್ದರು.

ಬಳ್ಳಾರಿ:

ಬಳ್ಳಾರಿ ಜಿಲ್ಲೆಯಲ್ಲಿ 7 ಸಿಪಿಐ(ಎಂ) 7 ಸಿಪಿಐ(ಎಂ) ಬೆಂಬಲಿತ ಸ್ಪರ್ಧಿಗಳು ಕಣ ದಲ್ಲಿದ್ದಾರೆ. ಬಳ್ಳಾರಿ 3, ಸಿರುಗುಪ್ಪ 2, ಹೊಸಪೇಟೆ 5, ಅಮರಾವತಿ 4. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಪ್ರಸನ್ನ ಕುಮಾರ ಬಳ್ಳಾರಿಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಕಾರ್ಮಿಕ ಹೋರಾಟದ ಮುಂಚೂಣಿಯಲ್ಲಿರುವ ರಾಮಾಂಜನೇಯ ಮತ್ತು ಬಸವನಗೌಡ ಅವರು ಸಿರುಗುಪ್ಪಾದಲ್ಲೂ, ಸ್ಪರ್ಧಿಸುತ್ತಿದ್ದಾರೆ. ಊರಿನ ಪ್ರತಿಯೊಂದು ಹೋರಾಟದಲ್ಲಿ ಮುಂಚೂಣಿಯಲ್ಲಿಗುವ ಸಿಪಿಐ(ಎಂ) ಸ್ಪರ್ಧಿಗಳು ಆರಿಸಿ ಬರಬಹುದೆಂದು ಆಶಿಸಲಾಗಿದೆ.

ಸಿರಗುಪ್ಪಾದಲ್ಲಿ ಸಿಪಿಐ(ಎಂ) ಸ್ಪರ್ಧಿ ಸುತ್ತಾರೆಂಬ ಸುದ್ಧಿ ಅಧಿಕಾರಿಗಳಲ್ಲೂ ಕಾಂಗ್ರೆಸ್ಸಿನವರಲ್ಲೂ ದಿಗಿಲು ಉಂಟು ಮಾಡಿತ್ತು. ಆ ಕಾರಣದಿಂದಲೇ ನಾಮಿ ನೇಶನ ಕೊಡುವ 45 ದಿವಸಗಳ ಹಿಂದೆಯೇ ಮತದಾರಯಾದಿಯಲ್ಲಿ ಹೆಸರು ಸೇರಿಸಲು ರಾಮಾಂಜನೇಯ

> ಫೆಬ್ರುವರಿಯಲ್ಲಿ ಪ್ರಕಟಿಸುವು[illegible]
> ವರದಿಗಳಿವು. ವೀರೇಂದ್ರ ಪಾಟೀ[illegible]
> ಮೂಲಕ ಆರಿಸಿ ಬಂದಿತೊ
> ಕಾಳಜಿಯಿಂದಾಗಿ ಇವುಗಳ ಪ್ರಕಟಣೆ
> ಈಗ ನಡೆಯಬಹುದು. ಆಗ
> ಚುನಾವಣೆಗಳ ಬಗ್ಗೆ ನಿರಾಸಕ್ತಿತಳ[illegible]
> ಮಾನ ಸ್ಥಿತಿಯಲ್ಲಿಯೇ ಇಟ್ಟು
> ಬಹುದೆನ್ನುವ ಸೂಚನೆಗಳಿವೆ.
> ಚುನಾವಣೆಗಳನ್ನು ತಂದಿಟ್ಟ ವೀರೇಂ[illegible]

ಸಮೀಕ್ಷೆ

ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ

ಎಸ್.ಆರ್. ಆರಾಧ್ಯ

ಭಾರತದ ಮಹಾನಗರಗಳ ಸಾಲಿನಲ್ಲಿ ರುವ ಕರ್ನಾಟಕದರಾಜಧಾನಿ ಬೆಂಗಳೂರು ಅತ್ಯಂತ ವೇಗವಾಗಿ ವಿಸ್ತರಿಸುತ್ತಿರುವ ನಗರಗಳಲ್ಲೊಂದಾಗಿದೆ. ದೇಶದ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಒಂದಾಗಿರುವ ಬೆಂಗಳೂರಿನ ಪೀಣ್ಯ ಕೈಗಾರಿಕಾ ಎಸ್ಟೇಟ್ ಏಷ್ಯಾ ಖಂಡದಲ್ಲೇ ದೊಡ್ಡದೆಂದು ಹೇಳ ಲಾಗುತ್ತಿದೆ. ಹೂದೋಟಗಳ ನಗರವೆಂದು ಹೆಸರಾಗಿರುವ ಬೆಂಗಳೂರು ಮಹಾನಗರ ತನ್ನ ಸೌಂದರ್ಯದ ಒಡಲಿನಲ್ಲೇ ನೂರಾರು ಕೊಳಚೆ ಪ್ರದೇಶಗಳನ್ನು ಬಚ್ಚಿ ಟ್ಟುಕೊಂಡಿರುವುದು ಅನೇಕ ಪ್ರವಾಸಿಗರ ಗಮನಕ್ಕೆ ಬರುವುದಿಲ್ಲ. ಮತ್ತೊಂದು ವಿಶೇಷವೇನೆಂದರೆ ಬೆಂಗಳೂರು ಭಾರತ ದೇಶದ ಅತ್ಯಂತ ದುಬಾರಿ ನಗರವೂ ಸಹ.

1981 ರ ಜನಗಣತಿಯ ಪ್ರಕಾರವೇ ನಗರ ಜಿಲ್ಲೆಯ ಜನಸಂಖ್ಯೆ ಸುಮಾರು 35 ಲಕ್ಷ. ಇಂದು ಮಹಾನಗರ ವೊಂದರ ಜನಸಂಖ್ಯೆಯೇ 40 ಲಕ್ಷವನ್ನು ದಾಟಿರುವ ಸಾಧ್ಯತೆಯಿದೆ. ಬಹುರಾಷ್ಟ್ರೀಯ ಮತ್ತು ರಾಷ್ಟ್ರೀಯ ಗುತ್ತೇದಾರಿ ಕಂಪನಿಗಳು ಹಾಗೂ ಬೃಹತ್ ಸಾರ್ವಜನಿಕ ಉದ್ದಿಮೆ ಗಳು ಮಾತ್ರವಲ್ಲದೆ ಸುಮಾರು 4830 ನೋಂದಣಿಯಾದ ಕಾರ್ಖಾನೆಗಳಿರುತ್ತವೆ. ಜವಳಿ, ಇಂಜಿನಿಯರಿಂಗ್, ರಾಸಾಯನಿಕ ಮತ್ತು ಅಸಂಘಟಿತ ವಲಯಗಳಲ್ಲಿ ಲಕ್ಷಾಂತರ ಕಾರ್ಮಿಕರು ದುಡಿಯುತ್ತಿ ದ್ದಾರೆ. ಸರ್ಕಾರದ ಅಂಕಿ ಅಂಶದ ಪ್ರಕಾರವೇ ಸುಮಾರು 10 ಲಕ್ಷಕ್ಕೂ ಹೆಚ್ಚು ಕಾರ್ಮಿಕರಿರುತ್ತಾರೆ (ಅಲ್ಪಾವಧಿ ಕೆಲಸಗಾರರು ಸೇರಿ). ಗೃಹ ಕೈಗಾರಿಕೆಗಳಲ್ಲಿ ದುಡಿಯುತ್ತಿರುವವರ ಸಂಖ್ಯೆ ಇದರಲ್ಲಿ ಸೇರಿರಲಾರದು. ಕನ್ನಡಿಗರಲ್ಲದೆ ತೆಲುಗು, ತಮಿಳು, ಮಲಯಾಳಂ ಮುಂತಾದ ಭಾಷಾ ಅಲ್ಪ ಸಂಖ್ಯಾತರು ಹಾಗೂ ಮುಸ್ಲಿಂ, ಕ್ರಿಶ್ಚಿಯನ್, ಇತ್ಯಾದಿ ಧಾರ್ಮಿಕ ಅಲ್ಪ ಸಂಖ್ಯಾತರು ಮತ್ತು ಹರಿಜನ ಗಿರಿಜನರು ಗಣನೀಯ ಪ್ರಮಾಣದಲ್ಲಿರುವ ಬೆಂಗಳೂರು ಮಹಾ ನಗರ ಸಂಕೀರ್ಣಮಯ ಭಾರತೀಯ ಸಮಾಜದ ಪ್ರತೀಕವಾಗಿದೆ.

ಅಸಮಾನ ಬೆಳವಣಿಗೆಯ ಪರಿಣಾಮ ವಾಗಿ ಗ್ರಾಮೀಣ ಪ್ರದೇಶಗಳಿಂದ ಬಡತನದ ಬೇಗೆಯನ್ನು ತಾಳಲಾರದೆ ಬದುಕಿಗೊಂದು ದಾರಿಯನ್ನು ಹುಡು ಕುತ್ತಾ ಮಹಾನಗರದತ್ತ ಸಹಸ್ರಾರು ಮಂದಿ ಪ್ರತಿನಿತ್ಯ ವಲಸೆ ಬರುತ್ತಿದ್ದಾರೆ. ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಬಂದ ಸಾಂಪ್ರದಾಯಿಕ ಉಡುಪನ್ನು ಧರಿಸಿದ ಸಾವಿರಾರು ಗಂಡಾಳು-ಹೆಣ್ಣಾಳುಗಳು ಬೆಂಗಳೂರಿನ ಬೀದಿಗಳಲ್ಲಿ ಅಲೆಯುತ್ತಿ ದ್ದಾರೆ. ನೆರೆ ರಾಜ್ಯಗಳಿಂದಲೂ ಗಣನೀಯ ಸಂಖ್ಯೆಯಲ್ಲಿ ಉದ್ಯೋಗಾಕಾಂಕ್ಷಿಗಳು ಧಾವಿಸುತ್ತಿದ್ದಾರೆ. ದೇಶದ ಇತರೆ ಎಲ್ಲಾ ಮಹಾನಗರಗಳೂ ಎದುರಿಸುತ್ತಿರುವ ಅನೇಕ ಗಂಭೀರ ಸಮಸ್ಯೆಗಳಿಗೆ ಬೆಂಗಳೂರು ನಗರವೂ ಸಹ ತುತ್ತಾಗಿದೆ.

ದುಬಾರಿ ಮನೆ ಬಾಡಿಗೆ, ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ, ರೆವಿನ್ಯೂ ನಿವೇಶನಗಳ ಪರಿಷ್ಕರಣ ಸಮಸ್ಯೆ ಕುಡಿ ಯುವ ನೀರು, ಒಳ ಚರಂಡಿ ವ್ಯವಸ್ಥೆ, ಸಾರ್ವಜನಿಕ ಶೌಚಾಲಯ, ನಗರ ನೈರ್ಮಲ್ಯ, ರಸ್ತೆ ದುರಸ್ತಿ, ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಮಕ್ಕಳ-ಪೋಷಕರ ಹಗಲು ದರೋಡೆ, ರಾತ್ರಿ ಕಳ್ಳಕಾಕರ ದರೋಡೆ, ರೇಷನ್ ಕಡಿತ, ಸೀಮೆಎಣ್ಣೆ ಅಭಾವ, ನಗರ ಸಾರಿಗೆ ಸೌಲಭ್ಯವಂತು ತೀರಾ ಅಸಮರ್ಪಕ. ವರ್ತುಲ ರೈಲ್ವೆ ನಿರ್ಮಾಣ ಇನ್ನೂ ಕನಸಿನ ಮಾತು. ವಿದ್ಯುಚ್ಛಕ್ತಿ ಕಡಿತ, ಮಹಾನಗರಪಾಲಿಕೆ ಮತ್ತು ಸರ್ಕಾರದ ತೆರಿಗೆಯ ಹೊರೆ, ಕಾರ್ಖಾನೆ ಗಳು ಉಗುಳುವ ಹೊಗೆ ಕಲ್ಮಶ ರಾಸಾಯನಿಕಗಳಿಂದ ಪರಿಸರ ಮಾಲಿನ್ಯ, 'ಜನಭರಿತ' ಚಿತ್ರ ಮಂದಿರಗಳಲ್ಲಿ ಕೀಳು ಮನರಂಜನೆಯ ಅಶ್ಲೀಲಚಿತ್ರಗಳ ಭರಾಟೆ, ಮಾದಕ ದ್ರವ್ಯಗಳ ದುಷ್ಪರಿಣಾಮ, ಇತ್ಯಾದಿ, ಇತ್ಯಾದಿ ಹತ್ತು ಹಲವಾರು ನಾಗರೀಕ ಸಮಸ್ಯೆಗಳು.

ದಿನೇ ದಿನೇ ಉಲ್ಬಣಗೊಳ್ಳುತ್ತಿರುವ ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಮಹಾನಗರ ಪಾಲಿಕೆ ಮತ್ತು ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ನಗರಸಭೆ ಅದಕ್ಷತೆ ಮತ್ತು ಭ್ರಷ್ಟಾಚಾರಗಳ ಆಗರವಾಗಿದೆ. ಇದರೊಂದಿಗೆ ಅಧಿಕಾರ ಮತ್ತು ಸಂಪನ್ಮೂಲಗಳ ಕೊರತೆ. ಸರ್ಕಾರದ ದಿವ್ಯ ನಿರ್ಲಕ್ಷ್ಯ.

ಇಂತಹ ಸಂದರ್ಭದಲ್ಲಿ ಜನತೆಯ ಅತೃಪ್ತಿಯ ಲಾಭ ಪಡೆದು ಭಾಷೆ ಧರ್ಮಗಳ ಸಂಕುಚಿತ ಭಾವನೆಗಳನ್ನು ಪ್ರಚೋದಿಸಿ ಕೋಮು ಘರ್ಷಣೆ ಭಾಷಾ ಜಗಳಗಳನ್ನು ಎತ್ತಿಕಟ್ಟಲು ಕೆಲವು ಸಂಕು ಚಿತವಾದಿ ಶಕ್ತಿಗಳು ಆಗಾಗ್ಗೆ ಪ್ರಯತ್ನ ನಡೆಸುತ್ತಾ ಬಂದಿವೆ. ಆದ್ದರಿಂದ ಪ್ರಜಾ ಸತ್ತಾತ್ಮಕ ಚಳುವಳಿಯಹಾದಿಯಲ್ಲಿ ಸಮಸ್ತ ನಾಗರೀಕ ಜನತೆಯನ್ನು ಅಣಿನೆರೆಸುವುದು ತಕ್ಷಣದ ರಾಜಕೀಯ ಕರ್ತವ್ಯ ವಾಗಿದೆ.

ಈ ಹಿನ್ನೆಲೆಯಲ್ಲಿ ಏಪ್ರಿಲ್-29 ರಂದು ನಡೆಯಲಿರುವ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಮಹತ್ವ ಪೂರ್ಣವಾಗಿದೆ. 12 ವಿಧಾನ ಸಭಾ ಕ್ಷೇತ್ರ ಗಳ ವ್ಯಾಪ್ತಿಯನ್ನು ಹೊಂದಿರುವ ಒಟ್ಟು 87 ಸ್ಥಾನಗಳಿಗೆ ಸುಮಾರು 1050 ಅಭ್ಯರ್ಥಿಗಳು ಸ್ಪರ್ಧೆಗಳಿದಿದ್ದಾರೆ. ಬಹು ತೇಕವಾಗಿ ಬಹುಮುಖ ಸ್ಪರ್ಧೆ ಏರ್ಪ ಟ್ಟಿದೆ. ಕಾಂಗ್ರೆಸ್(ಐ) 75 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದ್ದು ಉಳಿದ 12 ಕ್ಷೇತ್ರಗಳನ್ನು ಎ.ಐ.ಎ.ಡಿ.ಎಂ.ಕೆ. ಪಕ್ಷಕ್ಕೆ ಬಿಟ್ಟುಕೊಟ್ಟಿದೆ. ಜನತಾದಳ 76 ಕ್ಷೇತ್ರಗಳಲ್ಲಿ ಸ್ಪರ್ಧಿಸು ತ್ತಿದ್ದು ಡಿ.ಎಂ.ಕೆ. ಮತ್ತು ಸಿ.ಪಿ.ಐ ಪಕ್ಷ ಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅನುಕ್ರಮ ವಾಗಿ ತಲಾ 5 ಹಾಗೂ 6 ಸ್ಥಾನಗಳನ್ನು ಬಿಟ್ಟುಕೊಟ್ಟಿರುತ್ತದೆ. ಜನತಾ ಪಕ್ಷ ಎಲ್ಲಾ 87 ಸ್ಥಾನಗಳಿಗೂ ನೇರ ಸ್ಪರ್ಧೆಗಿಳಿದಿದ್ದು ಬಿ.ಜೆ.ಪಿ. 65 ಸ್ಥಾನಗಳಿಗೆ ಸ್ಪರ್ಧಿಸುತ್ತಿದೆ. ವಾಟಾಳ್ ಪಕ್ಷ 20 ಸ್ಥಾನಗಳಿಗೂ ಹಾಗೂ ಬಹುಜನ ಸಮಾಜ ಪಕ್ಷ (ಬಿ.ಎಸ್.ಪಿ.) ಪ್ರಥಮ ಬಾರಿಗೆ 14 ಸ್ಥಾನಗಳಿಗೆ ಸ್ಪರ್ಧಿಸುತ್ತಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 9 ಮಂದಿ ಅಭ್ಯರ್ಥಿ ಗಳು ಸ್ವತಂತ್ರವಾಗಿ ಚುನಾವಣಾ ಕಣಕ್ಕಿಳಿ ದಿದ್ದಾರೆ. ಇನ್ನು ಪಕ್ಷೇತರರು ಹಾಗೂ ಬಂಡಾಯ ಅಭ್ಯರ್ಥಿಗಳೂ ಸಹ ಸಾಕಷ್ಟು ಸಂಖ್ಯೆಯಲ್ಲಿರುತ್ತಾರೆ. ಕಾಂಗ್ರೆ ವಲಯ ದಲ್ಲಿ ಬಂಡಾಯಗಾರರ ಒತ್ತಡ ಹೆಚ್ಚಾಗಿ ರುವಂತೆಕಾಣುತ್ತಿದೆ. ಬಿನ್ನಿಪೇಟೆ ಡಿವಿಜನ್‌ಗೆ ನಾಮಪತ್ರ ಸಲ್ಲಿಸುವಾಗಲೇ ಇಬ್ಬರು ಕಾಂಗ್ರೆ ಬೆಂಬಲಿಗ ಅಭ್ಯರ್ಥಿಗಳು ಪರಸ್ಪರ ಘರ್ಷಣೆಗಿಳಿದರು. ಟಿಕೆಟ್ ಸಿಗದೆ ನಿರಾಶ ರಾದ ಕೆಲವರು ಪಕ್ಷದ ಕಛೇರಿಯ ಮುಂದೆ ಸೀಮೆಎಣ್ಣೆ ಸುರಿದುಕೊಂಡು ಆತ್ಮಹುತಿಯ ವಿಫಲಯತ್ನ ನಡೆಸಿದರು. ಮತ್ತೆ ಕೆಲವರು ಧರಣಿ ಸತ್ಯಾಗ್ರಹಗಳನ್ನು ಹೂಡಿದರು. ಜನತಾದಳ ಸಹ ಬಂಡಾಯ ಅಭ್ಯರ್ಥಿಗಳು ಸಮಸ್ಯೆಯನ್ನು ಎದುರಿ ಸುತ್ತಿದೆ ಜನತಾ ಪಕ್ಷದಲ್ಲೂ ಸಹ ಬಹಿ ರಂಗ ದೋಷಾರೋಪಣೆಗಳು ವರದಿ ಯಾಗಿದೆ.

ಕೇಂದ್ರದಲ್ಲಿ ರಾಷ್ಟ್ರೀಯರಂಗ ಸರ್ಕಾರ ಹಾಗೂ ರಾಜ್ಯದಲ್ಲಿ ಕಾಂಗ್ರೆ ಸರ್ಕಾರ ಅಧಿಕಾರಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಮಹಾನಗರಪಾಲಿಕೆ ಚುನಾವಣೆಗಳು ಹೆಚ್ಚಿನ ಕುತೂಹಲ ಕೆರಳಿಸಿದೆ. ಜನತಾದಳ ಕಾಂಗ್ರೆ ವಿರೋಧಿ ಮತಗಳು ಹಂಚಿ ಹೋಗದಂತೆ ಇನ್ನೂ ಹೆಚ್ಚಿನ ಮುತು ವರ್ಜಿವಹಿಸಬಹುದಿತ್ತು. ಪ್ರಾರಂಭದಿಂದಲೂ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾತುಕತೆ ಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ ಜನತಾ ದಳದ ನಾಯಕರು ಎಡಪಕ್ಷಗಳ ಬಗ್ಗೆ ತಾತ್ಸಾರ ಮನೋಭಾವನೆ ತಳೆದರು. ಕೊನೆಯ ಕ್ಷಣಗಳಲ್ಲಿ ಸಿಪಿಐ ಒಡಂಬಡಿಕೆ ಮಾಡಿಕೊಂಡರೂ ಸಿ.ಪಿ.ಐ.(ಎಂ) ನೊಂದಿಗಿನ ಮಾತುಕತೆ ಮುರಿದು ಬಿತ್ತು. ತಮಗೆ ಇಚ್ಛೆ ಬಂದ ನಾಲ್ಕು ಕ್ಷೇತ್ರಗಳನ್ನು ಮಾತ್ರ ಬಿಟ್ಟುಕೊಡುವುದಾಗಿ ಹೇಳಿದ ಜನತಾದಳದ ನಾಯಕರ ಹಿರಿಯಣ್ಣನ ನಿಲುಮೆಯೇ ಇದಕ್ಕೆ ಮುಖ್ಯ ಕಾರಣ ವಾಗಿದೆ. ಇನ್ನೊಂದೆಡೆ ಕ್ಷೇತಗಳ ಆಯ್ಕೆ ವಿಚಾರದಲ್ಲಿ ತಲೆ ದೋರಿದ ಭಿನ್ನಾಭಿ ಪ್ರಾಯಗಳಿಂದಾಗಿ ಬಿ.ಜೆ.ಪಿ. ಯೊಂದಿಗಿನ ಮಾತುಕತೆ ಮುರಿದು ಬಿದ್ದ ನಂತರವೂ ಸಹ ಜನತಾದಳದ ನಾಯಕರು ತಮ್ಮ ಅಸಹಕಾರ ಮನೋಭಾವನೆಯನ್ನು ಬದ ಲಾಯಿಸದಿರುವುದು ಗಮನಾರ್ಹವಾಗಿದೆ. ಜನತಾ ಪಕ್ಷದೊಂದಿಗೆ ಯಾವುದೇ ಹೊಂದಾಣಿಕೆಗೆ ನಗರ ಜನತಾದಳದ ವಲಯದಲ್ಲಿ ತೀವ್ರ ವಿರೋಧವಿದೆ. ಒಟ್ಟಾರೆ ಕಾಂಗ್ರೆಸ್(ಐ) ವಿರುದ್ಧ ಇನ್ನೂ ಹೆಚ್ಚಿನ ಪರಿಣಾಮಕಾರಿಯಾದ ಸ್ಪರ್ಧೆ ಯನ್ನು ನೀಡುವ ಮೂಲಕ ರಾಜ್ಯದ ರಾಜಕೀಯಕ್ಕೆ ಹೊಸ ತಿರುವು ನೀಡ ಬಹುದಾದ ಸದವಕಾಶವನ್ನು ಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲವೆಂದು ಹೇಳ ಬಹುದು. ಎಡ ಮತ್ತು ಜಾತ್ಯಾತೀತ ಶಕ್ತಿಗಳನ್ನು ಅಣಿಸೆರಿಸುವ ಬದಲು ಜನತಾ ದಳದ ನಾಯಕರು ಬಿಜೆಪಿ ಯಂತಹ ಮತೀಯ ಶಕ್ತಿಗಳನ್ನು ಒಲೈಸಿ ಹೇಗಾ ದರೂ ಮಹಾನಗರಪಾಲಿಕೆಯ ಅಧಿಕಾರದ ಗದ್ದುಗೆಯನ್ನೇರಲು ಹವಣಿಸಿದರು.

ಏನೇ ಆದರೂ ರಾಷ್ಟ್ರೀಯ ರಂಗ ಸರ್ಕಾರವು ಹೊಸ ಭರವಸೆಗಳನ್ನು ಮೂಡಿಸಿ ರುವ ಹಿನ್ನೆಲೆಯಲ್ಲಿ ದೇಶದಲ್ಲಿನ ಬದ ಲಾದ ರಾಜಕೀಯ ಪರಿಸ್ಥಿತಿಯ ಪ್ರಭಾವ ಬೆಂಗಳೂರು ನಗರದಮತದಾರರ ಮೇಲೂ ಪರಿಣಾಮ ಬೀರುವ [illegible] ಕಾಂಗ್ರೆಸ್(ಐ) ತಾನು ನಿರೀಕ್ಷಿಸಿದಷ್ಟು ಸುಲಭವಾಗಿ ಜಯಗಳಿಸಲಾರದು. ಹಿಂದಿನ ಜನತಾದಳದ ಸರ್ಕಾರದ ಕೆಲವೊಂದು ವೈಫಲ್ಯಗಳ ಕಾರಣ ಬೇಸತ್ತು ಕಾಂಗ್ರೆಗೆ ನಕಾರಾತ್ಮಕ ಬೆಂಬಲ ನೀಡಿದ ಮತದಾರರು ತಮ್ಮ ಒಲವನ್ನು ಬದಲಿಸ ಬಹುದಾಗಿದೆ.

ಸಿ.ಪಿ.ಐ.(ಎಂ)ಅಭ್ಯರ್ಥಿಗಳು

ಮಹಾನಗರ ಪಾಲಿಕೆಯ ಚುನಾವಣಾ ಕಣದಲ್ಲಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಮೇದುದಾರರ ವಿವರ ಕೆಳ ಕಂಡಂತಿದೆ.

1) **ಲಕ್ಕಸಂದ್ರ:** ಮೈಕೋ ಕಾರ್ಮಿಕ ಸಂಘ ಹಾಗೂ ಪಕ್ಷದ ಸಕ್ರಿಯ ಕಾರ್ಯ ಕರ್ತರಾದ ಕಾಂ. ಮುನಿಸ್ವಾಮಿ ಅಭ್ಯರ್ಥಿ ಯಾಗಿರುತ್ತಾರೆ.

2) **ಕಾಟನ್ ಪೇಟೆ:** ಬಿನ್ನಿಮಿಲ್ ಕಾರ್ಮಿಕರ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ ಸಂಘದ ಮುಂದಾಳುಗಳಲ್ಲೊ ಬ್ಬರಾದ ಕಾ.ವೀರಮಣಿಸ್ಪರ್ಧೆಗಿಳಿದಿದ್ದಾರೆ.

3) **ಪಾದರಾಯನಪುರ:** ಆಟೋರಿಕ್ಷಾ ಚಾಲಕರ ಸಂಘದ ನೂತನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಪಕ್ಷದ ಸಕ್ರಿಯ ಕಾರ್ಯಕರ್ತರಲ್ಲೊಬ್ಬ ರಾದ ಎಸ್. ನಾರಾಯಣಮೂರ್ತಿ ಉಮೇದುವಾರರಾಗಿರುತ್ತಾರೆ.

4) **ಗಾಂಧಿನಗರ:** ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಪ್ರಧಾನಕಾರ್ಯದರ್ಶಿಯಾಗಿ ಅಸಂಘಟಿತ ಕಾರ್ಮಿಕರ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಕಾಂ। ಇ.ಕೆ. ಎನ್. ರೌಜನ್ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಇವರು ಪಕ್ಷದ ಶಾಖಾ ಕಾರ್ಯದರ್ಶಿ ಯಾಗಿ ಹಾಗೂ ಪೂರ್ಣಕಾಲ ಕಾರ್ಯ ಕರ್ತರಾಗಿ ಸಹ ದುಡಿಯುತ್ತಿದ್ದಾರೆ.

5) **ಭಾಷ್ಯಂ ನಗರ:** ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಜಿಲ್ಲಾ ಘಟಕದ ಅಧ್ಯಕ್ಷ ರಾದ ಕಾಂ। ಗೋಪಾಲಕೃಷ್ಣ ಭಾಷ್ಯಂ ನಗರ ವಿಭಾಗದಲ್ಲಿ ಪಕ್ಷದ ಹುರಿಯಾಳಾಗಿ ಸ್ಪರ್ಧಿಸಿರುತ್ತಾರೆ. ಈ ಪ್ರದೇಶದಲ್ಲಿ ನಾಗ ರೀಕರ ಕುಂದುಕೊರತೆಗಳ ಬಗ್ಗೆ ಮುತು ವರ್ಜಿ ವಹಿಸಿ ಕೆಲವೊಂದು ಕಾರ್ಯ

ಅರ್ಜಿ ಸಲ್ಲಿಸಿದ್ದರೆ, ಅವರ ಹೆಸರನ್ನು ಕಾಂಗ್ರೆಸ್ ಕೈಗೊಂಬೆ ತಹಶೀಲದಾರರು ಸೇರಿಸದಿದ್ದಾಗ, ಜನವರಿ 30 ರಂದು ನೂರಾರು ಕಾರ್ಮಿಕರು ಘೋಷಣೆ ಕೂಗುತ್ತ ತಹಶೀಲದಾರ ಕಚೇರಿ ಮುಂದೆ ಮತ ಪ್ರದರ್ಶನ ನಡೆಸಿದರು. ಅದರ ಪರಿಣಾಮವಾಗಿ ರಾಮಾಂಜನೇಯಲು ಅವರ ಹೆಸರು ಮತದಾರ ಪಟ್ಟಿಯಲ್ಲಿ ಸೇರಿಸಲ್ಪಟ್ಟಿತು. ಕಾಂಗ್ರೆಸ್ ತಮ್ಮ ಪರ ಅಧಿಕಾರಿಗಳನ್ನು ಯಾವ ರೀತಿ ದುರುಪಯೋಗ ಮಾಡಿಕೊಂಡು ಚುನಾವಣೆಗಳಲ್ಲಿ ಗೆಲ್ಲುತ್ತಾರೆಂಬುದಕ್ಕೆ ಇದೊಂದು ಉದಾಹರಣೆ

ಮೈಸೂರು:

ಮೈಸೂರು ಜಿಲ್ಲೆಯ ಮೈಸೂರು(6), ಹುಣಸೂರು(2), ಹೆಗ್ಗಡ ದೇವನ ಕೋಟೆ (4) ಚಾಮರಾಜ ನಗರ (1) ಗಳಲ್ಲಿ ಒಟ್ಟು 13 ಸಿಪಿಐ(ಎಂ) ಸ್ಪರ್ಧಿಗಳು ಚುನಾವಣಾ ಕಣದಲ್ಲಿದ್ದಾರೆ. ಮೈಸೂರಿನಲ್ಲಿ ಕಾರ್ಮಿಕ ಮುಖಂಡ ಮೋಹನಕುಮಾರ ಮೊದಲಾದವರು ಸ್ಪರ್ಧಿಗಳಾಗಿದ್ದಾರೆ.

ಗುಲ್ಬರ್ಗ:

ಗುಲ್ಬರ್ಗ ಜಿಲ್ಲೆಯ ಗುಲ್ಬರ್ಗ (3) ಆಳಂದ (2) ಸುರಪುರ (1), ಶಹಾಬಾದ 13 ಸ್ಥಾನಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ. ಗುಲ್ಬರ್ಗದಲ್ಲಿ ಕಾರ್ಮಿಕ ಮುಖಂಡ, ಹಿಂದಿನ ಕಾರ್ಪೊರೇಟರ ಸಿ.ಎ. ಪಾಟೀಲ, ಹಿರಿಯ ಮುಖಂಡ ಗುಲಾಮ ಇಬ್ರಾಹಿಂ ಸ್ಪರ್ಧಿಸುತ್ತಿದ್ದಾರೆ. ಕಾರ್ಮಿಕರ ಭದ್ರಕೋಟೆಯಾದ ಶಹಾಬಾದಿನಲ್ಲಿ 19 ಸ್ಥಾನಗಳ ಪೈಕಿ 13 ಸ್ಥಾನಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ.

ದಾಂಡೇಲಿ:

ದಾಂಡೇಲಿ ಪುರ ಸಭೆಯಲ್ಲಿ ನಾಲ್ಕು ವರ್ಷ ಹಲವಾರು ಅಡೆತಡೆಗಳನ್ನೆದುರಿಸಿ ಆಡಳಿತ ನಡೆಸಿದ ಸಿಪಿಐ(ಎಂ) ಈ ಸಲ 19 ಸ್ಥಾನಗಳ ಪೈಕಿ 18 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಇವರ ಪೈಕಿ ಹಿಂದಿನ ಸಲ ಆಡಳಿತೆಯಲ್ಲಿ ಅನುಭವ ಪಡೆದವರಲ್ಲದೆ, ಕಾರ್ಮಿಕರ ಹೋರಾಟಗಳಲ್ಲಿ ನುರಿತ ಹೊಸಬರೂ ಸ್ಪರ್ಧೆಗಿಳಿದಿದ್ದಾರೆ.

ಹುಬ್ಬಳ್ಳಿ-ಧಾರವಾಡ:

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷದಿಂದ 6 ಜನ ಸ್ಪರ್ಧಿಸುತ್ತಿದ್ದಾರೆ. ಪೂಜಾರಿ, ಕಟ್ಟಿ ಮೊದಲಾದ ಕಾರ್ಮಿಕ ಮುಖಂಡರು ಕಣದಲ್ಲಿದ್ದಾರೆ.

ಹರಿಹರ:

ಹರಿಹರದಲ್ಲಿ 7 ಸಿಪಿಐ(ಎಂ) ಸ್ಪರ್ಧಿಗಳಿದ್ದಾರೆ. ಹಾಸನ-1, ಚಿಕ್ಕಮಗಳೂರು-1, ಸ್ಪರ್ಧಿಗಳು.

ದೊಡ್ಡ ಬಳ್ಳಾಪುರ

2ನೇ ಡಿವಿಜನ್‌ಟಿ : ಕೆ.ಸಿ.ಗೋಪಾಲ್ ಮತ್ತು ರಾಮಾಂಜನೇಯ

೪ನೇ ವಾರ್ಡ್ : ಸಿ. ರಾಮಭದ್ರಯ್ಯ

ಇತರೆಡೆ ಸಿ.ಪಿ.ಐ.(ಎಂ) ಅಭ್ಯರ್ಥಿಗಳು ಪುಟ 6 ನೋಡಿ

...ದ್ಧವಾಗಿದ್ದ ಪೌರ ಚುನಾವಣೆಯ ... ಸರ್ಕಾರ ಯಾವ ಚುನಾವಣೆಗಳ ... ಚುನಾವಣೆಗಳ ಬಗ್ಗೆ ತೋರಿಸಿದ ... ಬದ್ಧತು. ...ಹುದು ಎಂದು ಕಾದ ಮತದಾರ ... ಸ್ಪರ್ಧಿಗಳನ್ನು ಇನ್ನು ಡೋಲಾಯ... ೨೯ ಚುನಾವಣೆಗಳು ನಡೆಯ... ಅಪಹಾಸ್ಯದ ಸ್ಥಿತಿಗೆ ಪುರಸಭಾ...ಕ್ಕೆ ಖಂಡನೆಯಿರಲಿ.

6) **ಯಶವಂತಪುರ:** ಮೈಸೂರು ಲ್ಯಾಂಪ್ಸ್ ಕಾರ್ಮಿಕರ ಸಂಘದ ನೂತನ ಪ್ರಧಾನಕಾರ್ಯದರ್ಶಿಯಾಗಿ ಚುನಾಯಿತ ವಾಗಿರುವ ಕಾಂ। ಹೆಚ್. ಆರ್. ಪ್ರಭಾಕರ್ ಪಕ್ಷದ ಉಮೆದುವಾರನಾಗಿ ಸ್ಪರ್ದಿ ಸಿರುತ್ತಾರೆ.

7) **ಶಿವನೆ ಚೆಟ್ಟಿಗಾರ್ಡನ್:** ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷದ ಪ್ರಚಾರ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದ ಕ್ರಿಯಾಶೀಲ ಯುವ ವಕೀಲರಾದ ರವೀಂದ್ರಕುಮಾರ್ ಅಭ್ಯರ್ಥಿಯಾಗಿರುತ್ತಾರೆ.

8) **ಮಾರುತಿ ಸೇವಾ ನಗರ:** ಮಹಿಳಾ ಮೀಸಲು ಕ್ಷೇತ್ರವಾದ ಮಾರುತಿ ಸೇವಾ ನಗರ ವಿಭಾಗದಲ್ಲಿ ಐ.ಟಿ.ಸಿ. ಕಾರ್ಮಿಕರ ಕುಟುಂಬವೊಂದರ ಶ್ರೀಮತಿ ಸತ್ಯ ಶೇಖರನ್ ಅಭ್ಯರ್ಥಿಯಾಗಿರುತ್ತಾರೆ. ಕಳೆದ ಸಾರ್ವತ್ರಿಕ ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಇವರು ಎ.ಐ.ಡಿ.ಡಬ್ಲ್ಯು.ಎ. ಕಾರ್ಯಕರ್ತೆಯಾಗಿರುತ್ತಾರೆ.


9) **ಅಲಸೂರು:** ಐ.ಟಿ.ಸಿ. ಕಾರ್ಮಿಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಹಾಗೂ ಸಮರಶೀಲ ಕಾರ್ಯಕರ್ತರಲ್ಲೊಬ್ಬರಾದ ಕಾ. ಕೋದಂಡರಾಮನ್ ಅಲಸೂರು ವಿಭಾಗದಲ್ಲಿ ಪಕ್ಷದ ಉಮೇದುವಾರರಾಗಿರುತ್ತಾರೆ.

ಪಕ್ಷದ ಚಟುವಟಿಕೆಗಳು:

ಕಳೆದ ಐದು ವರ್ಷಗಳ ಅವಧಿಯಲ್ಲಿ ಪಕ್ಷವು ನಗರದ ಜನತೆಯ ಕೆಲವೊಂದು ಸಮಸ್ಯೆಗಳನ್ನು ಕೈಗೆತ್ತಿಕೊಂಡು ಕಾರ್ಯಾಚರಣೆ ನಡೆಸಿರುವುದನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ಉದಾಹರಣೆಗಾಗಿ ರಿವಿನ್ಯೂ ನಿವೇಶನದಾರರ ಸಮಸ್ಯೆ, ನೀರು ಸರಬರಾಜು, ರೇಷನ್ ಕಡಿತ, ಬೆಲೆ ಏರಿಕೆ, ಬಸ್ ಪ್ರಯಾಣ ದರ, ವಿದ್ಯುತ್ ಮತ್ತು ಹಾಲಿನ ದರಗಳ ಏರಿಕೆ, ಮಳೆ ಸಂತ್ರಸ್ತರಿಗೆ ನೆರವು, ಇತ್ಯಾದಿ ಪ್ರಶ್ನೆಗಳ ಮೇಲೆ ಹೋರಾಟಗಳನ್ನು ಹಮ್ಮಿಕೊಳ್ಳಲಾಗಿತ್ತು. ಬಹುತೇಕ ರಾಜಕೀಯ ಕಾರ್ಯಾಚರಣೆಗಳಲ್ಲಿ ಸಕ್ರಿಯ ಪಾತ್ರವಹಿಸುತ್ತಾ ಬಂದಿದೆ. ಸಂಘಟಿತ, ಅಸಂಘಟಿತ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ಸಹ ದನಿಯೆತ್ತಿದೆ. ರೈತರ ಚಳುವಳಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಲಾಗಿದೆ. ನಗರದ ಕಾರ್ಮಿಕ ವರ್ಗದ ನಡುವೆ ಸಾಮಾನ್ಯ ಪ್ರಭಾವ ಹೊಂದಿದ್ದರೂ ಹಾಗೂ ಪ್ರದೇಶಗಳಲ್ಲಿ ಪಕ್ಷದ ಚಟುವಟಿಕೆಯನ್ನು ವಿಸ್ತರಿಸುವ ಅವಶ್ಯಕತೆ ಬಹಳ...

...ವಾಗಿದೆ. ಸ್ಥಳೀಯ ನಾಗರೀಕ ಸಮಸ್ಯೆಗಳ ಪರಿಹಾರಕ್ಕಾಗಿ ವಿಶಾಲ ಸ್ವರೂಪದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ನಾಗರೀಕ ಆಂದೋಲನವನ್ನು ಬಲಪಡಿಸಬೇಕಾಗಿದೆ. ಮಹಾನಗರ ಪಾಲಿಕೆ ಚುನಾವಣೆಗಳು ಈ ನಿಟ್ಟಿನಲ್ಲಿ ಒಂದು ಹೊಸ ತಿರುವನ್ನು ನೀಡಬಹುದಾಗಿದೆ. ಪಕ್ಷದ ಕೆಲವು ಉಮೇದುವಾರರಾದರೂ ಆರಿಸಿ ಬಂದಲ್ಲಿ ಈ ಪ್ರಕ್ರಿಯೆಗೆ ಚಾಲನೆ ದೊರೆಯಬಹುದಾಗಿದೆ.

ಫೆಬ್ರವರಿ ೨೭ರಂದು ಜರುಗಿದ ವಿಧಾನಸಭಾ ಚುನಾವಣೆಗಳಲ್ಲಿ ಬಹುತೇಕ ರಾಜ್ಯಗಳಲ್ಲಿ ಕಾಂಗ್ರೆಸ್(ಐ) ಧೂಳೀಪಟವಾಗಿದೆ ಇದರೊಂದಿಗೆ ವೀರೇಂದ್ರಪಾಟೀಲರ ಕುಂಭಕರ್ಣ ಸರ್ಕಾರ ಜನವಿರೋಧಿ ಮುಂಗಡ ಪತ್ರ ಸರ್ಕಾರಿ ನೌಕರರ ಮುಷ್ಕರವನ್ನು ಹತ್ತಿಕ್ಕಿದ ಕುತಂತ್ರ ವಿಧಾನ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನೂ ಅನವಶ್ಯಕವಾಗಿ ಮುಂದೂಡಿದ ನಿರ್ಧಾರ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಬಯಲಿಗೆಳೆದಿದೆ. ಪಾಟೀಲರ ತೋಘಲಕ್ ಸರ್ಕಾರದ ಅದಕ್ಷತೆ ಮನೆಮಾತಾಗಿದೆ. ಇವೆಲ್ಲವೂ ಈಗಾಗಲೇ ಧೃತಿಗೆಟ್ಟಿರುವ ಕಾಂಗ್ರೆಸ್(ಐ) ಪಕ್ಷಕ್ಕೆ ಮತ್ತಷ್ಟು ಗೊಂದಲಗಳನ್ನು ಸೃಷ್ಟಿಸಿದ್ದು, ಮತದಾರರ ಮಾನಸ ಸರೋವರ ದಲ್ಲೂ ಹೊಸ ಅಲೆಗಳನ್ನು ಎಬ್ಬಿಸಬಹುದಾಗಿದೆ. ಚುನಾವಣೆಗಳನ್ನು ಮುಂದೂಡುವ ಮೂಲಕ ಲಾಭ ಪಡೆಯ ಬಹುದೆಂಬ ಪಾಟೀಲರ ಲೆಕ್ಕಾಚಾರ ವಿರುದ್ಧವಾಗುವ ಸಂಭವವಿದೆ.



ಐತಿಹಾಸಿಕ ಬದಲಾವಣೆಯ ಹೊಸ್ತಿಲಲ್ಲಿ ನಿಂತಿದೆ ನೇಪಾಳ

ಫೆಬ್ರುವರಿ ೧೮ ರಂದು ಆರಂಭವಾದ ಬಹುಪಕ್ಷ ಸಂಸದೀಯಪ್ರಜಾಪ್ರಭುತ್ವ ಆಂದೋಲನ ರಾಜಪ್ರಭುತ್ವದಕ್ಕಾಗಿ ದಮನದಬ್ಬಾಳಿಕೆಗಳನ್ನು ಲೆಕ್ಕಿಸದೆ ವ್ಯಾಪಕ ಹಾಗೂ ಯಶಸ್ವೀ ನೇಪಾಳ ಬಂದ್‌ನೊಂದಿಗೆ ಎರಡನೇ ಹಂತ ಪ್ರವೇಶಿಸಿದೆ.

ನೇಪಾಳೀ ಕಾಂಗ್ರೆಸ್ ಹಾಗೂ ಸಂಯುಕ್ತ ಎಡರಂಗದ ನೇತೃತ್ವದಲ್ಲಿ ಆರಂಭವಾದ ಈ ಆಂದೋಲನ ಒಂದೇ ತಿಂಗಳೊಳಗೆ ಇಡೀ ದೇಶವನ್ನೇ ವ್ಯಾಪಿಸಿದೆ. ಎಲ್ಲಾ ಜನ ವಿಭಾಗಗಳನ್ನು ವ್ಯಾಪಿಸಿದೆ. ಆಂದೋಲನ ಆರಂಭವಾಗುವ ಮೊದಲೇ ಸಂಯುಕ್ತ ಎಡರಂಗದ ಅಧ್ಯಕ್ಷೆ ಸಹನಾ ಪ್ರಧಾನ್, ನೇಪಾಳ ಕಮ್ಯುನಿಸ್ಟ್ ಪಕ್ಷದ ಮುಖಂಡರು ಹಾಗೂ ನೇಪಾಳೀ ಕಾಂಗ್ರೆಸ್‌ನ ಮುಖಂಡರನ್ನು ಬಂಧಿಸಿದರೂ, ಆಂದೋಲನದ ಮೊದಲನೇ ದಿನ ೧೦ ಸಾವಿರ ಮಂದಿಯನ್ನು, ೨ನೇ ದಿನ ೫೦೦೦ ಮಂದಿಯನ್ನು ಬಂಧಿಸಿದರೂ, ೨ನೇ ದಿನ ಗೋಲೀಬಾರಿನಲ್ಲಿ ೧೦ ಜನರನ್ನು, ಮೂರನೇ ದಿನ ಇನ್ನೂ ೫ ಮಂದಿಯನ್ನು ಕೊಂದರೂ ಆಂದೋಲನ ಹಿಮ್ಮೆಟ್ಟಲಿಲ್ಲ. ಬದಲಿಗೆ ದ್ವಿಗುಣ ಚೈತನ್ಯದಿಂದ ಮುಂದುವರೆಯಿತು.ಪತ್ರಕರ್ತರು, ವಕೀಲರು, ಡಾಕ್ಟರು, ಇಂಜನಿಯರುಗಳು, ಮಹಿಳೆಯರು, ಅಧ್ಯಾಪಕರು ವಿದ್ಯಾರ್ಥಿಗಳು ಹೀಗೆ ಒಂದೊಂದಾಗಿ ಎಲ್ಲಾ ಜನ ವಿಭಾಗಗಳೂ ರಾಜಪ್ರಭುತ್ವದ ಅಂತ್ಯ ಹಾಗೂ ಪ್ರಜಾಸತ್ತೆಯ ಹೋರಾಟದಲ್ಲಿ ಧುಮುಕುತ್ತಾ ಅದನ್ನು ವ್ಯಾಪಕಗೊಳಿಸಿ ದ್ದಾರೆ. ಸಂಯುಕ್ತ ಎಡರಂಗದ ನೇತೃತ್ವದಲ್ಲಿ ಕಾರ್ಮಿಕರು, ರೈತರಂತೂ ಮೊದಲೇ ಹೋರಾಟದ ಕಣದಲ್ಲಿದ್ದರು.

ಎರಡನೇ ಘಟ್ಟದಲ್ಲಿನ ಹೋರಾಟದ ತೀವ್ರತೆ ರಾಜಪ್ರಭುತ್ವದ ಪ್ರಜಾಸತ್ತೆಯ ಮುಖವಾಡದಂತಿರುವ ರಾಷ್ಟ್ರೀಯ ಪಂಚಾಯತ್ ಪರ ಶಕ್ತಿಗಳಲ್ಲೇ ತೀವ್ರ ಒಡಕು ತಂದಿದೆ. ಮಾರ್ಚ್ ೮ ಅಂತರ ರಾಷ್ಟ್ರೀಯ ಮಹಿಳಾ ದಿನದಂದು ರಾಜ ಪ್ರಭುತ್ವ ನಡೆಸಿದ ಅಮಾನುಷ ದಬ್ಬಾಳಿಕೆಯ ಪ್ರತಿಧ್ವನಿ ಅಲ್ಲೂ ಮೂಡಿತು. ಒಬ್ಬ ಮಂತ್ರಿಯನ್ನು ಬರ್ಖಾಸ್ತು ಮಾಡಲಾಯಿತು. ಮೂವರು ಮಾಜಿ ಪ್ರಧಾನ ಮಂತ್ರಿಗಳು ವಿರೋಧ ಪಕ್ಷಗಳೊಡನೆ ಮಾತುಕತೆ ನಡೆಸಿ ಎಂದು ಹೇಳಿದರು. ಈಗ ಏಪ್ರಿಲ್ ೧ ರಂದು ಮಾತುಕತೆ ನಡೆಸಬೇಕೆನ್ನುವ ನಾಲ್ಕು ಮಂತ್ರಿಗಳನ್ನು ತೆಗೆದು ಹಾಕಲಾಗಿದೆ.

ಐತಿಹಾಸಿಕ ಹಿನ್ನೆಲೆ

ತಾನು ದೇವರ ಪ್ರತಿನಿಧಿಯೆನ್ನುವ ರಾಜನ ಪ್ರಭುತ್ವ ಇನ್ನೂ ಇರುವ ದೇಶ ನೇಪಾಳ. ಪ್ರತಿಭಟನೆ ಎಂಬ ಪದವೇ ಈ ರಾಜನ ಪದಕೋಶದಲ್ಲಿ ಇಲ್ಲ. ತನ್ನ ರಾಜ ಪ್ರಭುತ್ವಕ್ಕೆ ಪ್ರಜಾಸತ್ತೆಯ ಮುಖವಾಡ ತೊಡಗಿಸಲು ಪಕ್ಷರಹಿತ ರಾಷ್ಟ್ರೀಯ ಪಂಚಾಯತ್ ಇಟ್ಟುಕೊಂಡಿದ್ದಾನೆ.

೧೯೫೦ ರ ಫೆಬ್ರುವರಿ ೧೮ ರಂದು ಈ ದೇಶದಲ್ಲೊಂದು ಪ್ರಜಾಸತ್ತಾತ್ಮಕ ಕ್ರಾಂತಿ ನಡೆಯಿತು. (ಆದ್ದರಿಂದಲೇ ಇದೇ ದಿನದಂದು ಈ ಬಾರಿ ಪ್ರಜಾಸತ್ತೆಯ ಆಂದೋಲನ ಆರಂಭಿಸಲಾಯಿತು) ೧೯೬೦ ರಲ್ಲಿ ದೊರೆ ಬೀರೇಂದ್ರ ಸಂಸದೀಯ ವ್ಯವಸ್ಥೆಯನ್ನು ಕಿತ್ತೆಸೆದ. ಬಿ.ಪಿ. ಕೊಯಿರಾಲಾ ಸರ್ಕಾರವನ್ನು ಬರ್ಖಾಸ್ತು ಮಾಡಿದ. ಎಲ್ಲಾ ರಾಜಕೀಯ ಪಕ್ಷಗಳನ್ನು ನಿರ್ಬಂಧಿಸಿದ. ಅಂದಿನಿಂದಲೇ ಪ್ರಜಾಸತ್ತೆಯ ಆಂದೋಲನ ಮತ್ತೆ ಆರಂಭವಾಯಿತು. ಆದ್ದರಿಂದಲೇ ಈಗ ಬಹುಪಕ್ಷ ಸಂಸದೀಯ ವ್ಯವಸ್ಥೆಯ ಮರುಸ್ಥಾಪನೆ ಈ ಆಂದೋಲನದ ಕೇಂದ್ರ ಘೋಷಣೆ.

೧೯೮೦ ರ ಮತ ಗಣನೆಯಲ್ಲಿ ಜನ ಈಗಿನ ಪಕ್ಷ ರಹಿತ ರಾಷ್ಟ್ರೀಯ ಪಂಚಾಯತ್ ವ್ಯವಸ್ಥೆಗೆ ಬೆಂಬಲ ನೀಡಿದ್ದಾರೆ ಎಂದು ರಾಜ ಹೇಳಿಕೊಳ್ಳುತ್ತಾನೆ. ಆದರೆ ಈ ಮತದಾನ ನಡೆಯುವ ಮೊದಲು ಎಡಪಕ್ಷಗಳು ಐದು ಶರತ್ತುಗಳನ್ನು ಹಾಕಿದ್ದವು. ಇವನ್ನು ದೊರೆ ಒಪ್ಪದ್ದರಿಂದ ವಿರೋಧ ಪಕ್ಷಗಳು ಈ ಮತಗಣನೆಯನ್ನು ಬಹಿಷ್ಕರಿಸಿದ್ದವು. ಆದ್ದರಿಂದ ಈ ಮತಗಣನೆಗೆ ಯಾವ ಅರ್ಥವೂ ಇಲ್ಲ. ಈ ಮತಗಣನೆ ಫಲಿತಾಂಶದ ನಂತರ ಎಡ ಪಕ್ಷಗಳು ಸವಾಲೆಸೆದುದರಿಂದ ಕೆಲವು ಸುಧಾರಣೆಗಳನ್ನು ತರುವುದಾಗಿ ದೊರೆ ಭರವಸೆ ನೀಡಿದ. ಆದರೆ ಅವಿನ್ನೂ ಕೇವಲ ಭರವಸೆಗಳು.

ಸಹಜವಾಗಿಯೇ ಜನಗಳಿಗೆ ರಾಜ ಪ್ರಭತ್ವದ ಮೇಲೆ ಈಗ ಯಾವ ನಂಬಿಕೆಯೂ ಇಲ್ಲ, ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯನ್ನು ಅವರು ಕಾಣ ಬಯಸುತ್ತಿದ್ದಾರೆ. ತಮ್ಮ ಆರ್ಥಿಕ ಸಂಕಷ್ಟಗಳನ್ನು ರಾಜ ಕೀಯ ಅಡಿಯಾಳುತನವನ್ನು, ಸಾಮಾಜಿಕ ಅವಮಾನವನ್ನು ಹೋಗಲಾಡಿಸುವ ರಾಜಕೀಯ ವ್ಯವಸ್ಥೆ ಬಯಸುತ್ತಿದ್ದಾರೆ. ಆದ್ದರಿಂದಲೇ ಪ್ರಜಾಸತ್ತೆಯ ಆಂದೋಲನ ಇಷ್ಟು ಬೇಗನೇ ಅಷ್ಟೊಂದು ಹರಡಲು ಸಾಧ್ಯವಾಗಿದೆ.

> ಈ ವರ್ಷ ಫೆಬ್ರುವರಿ ೧೮ ರಂದು ನೇಪಾಳೀ ಕಾಂಗ್ರೆಸ್ ಸಂಯುಕ್ತ ಎಡರಂಗ ಮಿತ್ರ ಕೂಟದ ನೇತೃತ್ವದಲ್ಲಿ ಆರಂಭಗೊಂಡ ಪ್ರಜಾಸತ್ತೆಯ ಆಂದೋಲನ ಈಗ ಯಶಸ್ವಿಯಾಗಿ ಎರಡನೇ ಹಂತತಲುಪಿದೆ. ಸ್ವಾತಂತ್ರ್ಯ, ಪ್ರಜಾಸತ್ತೆ, ಮಾನವ ಹಕ್ಕು, ಮಾನವ ಘನತೆ ಮತ್ತು ಉತ್ತಮಜೀವನಕ್ಕಾಗಿ ನಡೆ... ಆಂದೋಲನವಿದು.

ಮುಕ್ತ ಪತ್ರಿಕಾರಂಗ ನೇಪಾಳಕ್ಕೆ ಬೇಡ ಎನ್ನುತ್ತದೆ ರಾಜ ಪ್ರಭುತ್ವ. ಇತರ ಮೂಲ ಭೂತ ಸ್ವಾತಂತ್ರ್ಯಗಳು, ನಾಗರಿಕ ಸ್ವಾತಂತ್ರ್ಯಗಳೂ ಈ ಪ್ರಭುತ್ವದಲ್ಲಿಲ್ಲ. ಜನತೆಯ ಪ್ರಜಾಪ್ರಭುತ್ವ ಅಧಿಕಾರಗಳನ್ನು, ಮಾನ್ಯಮಾಡಬೇಕು ಎಂಬುದು ಈ ಆಂದೋಲ ನದ ಒಂದು ಪ್ರಮುಖ ಘೋಷಣೆ.

ದೊರೆ ಹೇಳಿದ್ದೇ ಕಾನೂನು. ರಾಜ ಮನೆತನದ ಬಗ್ಗೆ ನ್ಯಾಯಾಲಯದಲ್ಲಾಗಲಿ, ರಾಷ್ಟ್ರೀಯ ಪಂಚಾಯತಿನಲ್ಲಾಗಲೀ ಏನೂ ಹೇಳುವಂತಿಲ್ಲ. ಇದು ಕೊನೆಗೊಳ್ಳಬೇಕೆಂಬುದು ಆಂದೋಲನದ ಇನ್ನೊಂದು ಬೇಡಿಕೆ.

ದೊರೆ ಈ ದೇಶದಲ್ಲಿ ಭೂಮಾಲಕರ, ದಳ್ಳಾಳಿ ಬಂಡವಳಿನರ, ಲಾಭಕೋರರ, ಕಾಳಸಂತೆ ಕೋರರ, ಸ್ಮಗ್ಲರ್‌ಗಳ, ಕಮಿಶನ್ ಏಜೆಂಟರ ರಕ್ಷಕ. ಹಿಡಿಯಷ್ಟು ಶ್ರೀಮಂತರು ಮತ್ತು ಬಡವರ ನಡುವಿನ ದೊಡ್ಡ ಕಂದರ ಎಷ್ಟೋ ವರ್ಷದಿಂದ ಆಳಗೊಳ್ಳುತ್ತಲೇ ಸಾಗಿದೆ. ೬೦ ಶೇಕಡಾಕ್ಕೂ ಹೆಚ್ಚು ಮಂದಿ ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಈ ರೇಖೆಯ ಮೇಲಿರುವ ಬಹುಪಾಲು ಜನರದ್ದೂ ಹತ್ತಾರು ಸಮಸ್ಯೆಗಳು. ಆಂದೋಲನ ವ್ಯಾಪಕ ಬೆಂಬಲ ಪಡೆಯಲು ಇದು ಇನ್ನೊಂದು ಕಾರಣ. ಹಿಡಿಯಷ್ಟು ಶ್ರೀಮಂತರ, ದೊರೆಯ ಕೃಪಾ ಪಾತ್ರರ ವಿರುದ್ಧ ಜನರ ಸಿಟ್ಟು ಪ್ರಸಕ್ತ ಪ್ರಜಾಪ್ರಭುತ್ವ ಆಂದೋಲನದ ಚಾಲಕ ಶಕ್ತಿಯೆನ್ನಬಹುದು. ಸಂಯುಕ್ತ ಎಡರಂಗ ಭೂಮಿಯ ದ್ವಿಮುಖ ಮಾಲಕತ್ವ ಅಂತ್ಯಗೊಳ್ಳಬೇಕು, ಕಾರ್ಮಿಕರ, ನೌಕರರ ಸಂಬಳ ಹೆಚ್ಚಬೇಕು, ಎಲ್ಲರಿಗೂ ಉದ್ಯೋಗದ ಭರವಸೆಯು ಬೇಕು ಎಂಬ ಬೇಡಿಕೆಗಳನ್ನು ಇತರ ಪ್ರಜಾಸತ್ತೆಯ ಬೇಡಿಕೆಗಳೊಂದಿಗೆ ಎತ್ತಿದೆ.

ಎಲ್ಲ ಕಡೆಯಿಂದಲೂ ತೀವ್ರ ಪ್ರತಿಭಟನೆ ಎದುರಿಸುತ್ತಿರುವ ರಾಜ ಪ್ರಭುತ್ವ ಜನರನ್ನು ತಪ್ಪು ದಾರಿಗೆಳೆಯಲು ಭಾರತದ ವಿರುದ್ಧ ಸಂಕುಚಿತ ರಾಷ್ಟ್ರೀಯ ಭಾವೋದ್ರೇಕ ಎಬ್ಬಿಸಲು ಪ್ರಯತ್ನಿಸುತ್ತಿದೆ. ಆದರೆ ಐ.ಎಂ.ಎಫ್. ವಿಶ್ವ ಬ್ಯಾಂಕ್ ಆದೇಶಗಳಿಗೆ ಶರಣಾಗುವ ದೊರೆಯ ರಾಷ್ಟ್ರ ಪ್ರೇಮ ಎಷ್ಟು ನಿಜವೆಂಬುದನ್ನು ಅರಿತ ಜನ ಈ ಮೋಸಕ್ಕೆ ಬಲಿಯಾಗಲು ನಿರಾಕರಿಸುತ್ತಿದ್ದಾರೆ.

ಒಟ್ಟಿನಲ್ಲಿ ಈಗ ನೇಪಾಳದಲ್ಲಿ ನಡೆಯುತ್ತಿರುವ ಆಂದೋಲನ ಸ್ವಾತಂತ್ರ್ಯ, ಪ್ರಜಾಸತ್ತೆ, ಮಾನವ ಹಕ್ಕುಗಳು, ಮಾನವ ಘನತೆ ಹಾಗೂ ಉತ್ತಮ ಜೀವನಕ್ಕಾಗಿ ನಡೆಯುತ್ತಿರುವ ಆಂದೋಲನ. ರಾಜ ಪ್ರಭುತ್ವ ಹೋಗಿ ಹೊಸದೊಂದು ಸರ್ವಪಕ್ಷ ಸರಕಾರ ಮುಕ್ತ, ನ್ಯಾಯ ಚುನಾವಣೆ ನಡೆಸುವವರೆಗೆ ಈ ಚಳುವಳಿ ನಿಲ್ಲುವುದಿಲ್ಲ ಎಂದು ಇದಕ್ಕೆ ನೇತೃತ್ವ ನೀಡುತ್ತಿರುವ ನೇಪಾಳೀ ಕಾಂಗ್ರೆಸ್ ಸಂಯುಕ್ತ ಎಡರಂಗ ಮಿತ್ರ ಕೂಟ ಸ್ಪಷ್ಟಪಡಿಸಿದೆ. ಆಂದೋಲನದ ವಿಸ್ತಾರ ಅತಿ ವ್ಯಾಪಕ ಗೊಳ್ಳುತ್ತಿದೆ. ತನ್ನ ಇತಿಹಾಸದಲ್ಲಿ ಭಾರೀ ಬದಲಾವಣೆಯ ಹೊಸ್ತಿಲಲ್ಲಿ ನಿಂತಿದೆ ಈಗ ನೇಪಾಳ.

ಧಾರವಾಡದಲ್ಲಿ ಕಾರ್ಮಿಕರ ಮುಷ್ಕರ

ಸಿಐಟಿಯುಗೆ ಸೇರಿದ ಧಾರವಾಡ ಜಿಲ್ಲಾ ಜನರಲ್ ಎಂಪ್ಲಾಯಿಸ್ ಯೂನಿಯನ್ನಿಗೆ ಸೇರಿದ, ಕಲಘಟಗಿಯ, ಹಿಂದ್ ಮಾತಾ ಕಂಪನಿಯ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಲು ತಾ ೧೮-೧-೯೦ರಂದು ಬೇಡಿಕೆಯನ್ನು ಸಲ್ಲಿಸಿದರು. ಆದರೆ ಈ ಬೇಡಿಕೆಯನ್ನು ತಿರಸ್ಕರಿಸಿದ ನಂತರ ಕಾರ್ಖಾನೆಯ ಕಾರ್ಮಿಕರು ಅನಿವಾರ್ಯವಾಗಿ ತಾ ೨೨-೩-೯೦ ರಿಂದ ಅನಿರ್ದಿಷ್ಟ ಅವಧಿಯ ಮುಷ್ಕರದ ಮೇಲಿದ್ದಾರೆ. ತಮ್ಮ ಮುಖ್ಯ ಬೇಡಿಕೆಗಳಾದ ವೇತನ ಹೆಚ್ಚಳ, ವೇತನ ಶ್ರೇಣಿ, ಟಿ.ಎ., ಡಿ.ಎ., ಮತ್ತು ಬದಲಾಗುತ್ತಿರುವ ತುಟ್ಟಿಭತ್ಯೆ ಸಿಗುವವರೆಗೂ ಹೋರಾಟ ಮುಂದುವರೆಯುವುದೆಂದು ಯೂನಿಯನ್ನಿನ ಉಪಾಧ್ಯಕ್ಷರಾದ ಎಸ್.ಆರ್. ವೀರಪ್ಪನವರು ತಿಳಿಸಿದ್ದಾರೆ.

ಕುಡಿಯುವ ನೀರು ಪೂರೈಕೆಗಾಗಿ ಒತ್ತಾಯ

ಬಂಟ್ವಾಳ ಪುರಸಭಾ ಪ್ರದೇಶಗಳಲ್ಲಿ ದಶಕಗಳಿಂದ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಜಟಿಲವಾಗುತ್ತಿದ್ದು ಬೇಸಿಗೆಕಾಲದಲ್ಲಿ ಕುಡಿಯುವ ನೀರಿಗಾಗಿ ಜನ ಸಾಮಾನ್ಯರ ಪರದಾಟ ಕರುಣಾಮಯವಾಗಿದೆ.

ಪುರಸಭಾ ಪ್ರದೇಶದ ಎತ್ತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಯೋಜನೆಯೊಂದನ್ನು ೧೯೮೭ರಲ್ಲಿ ತಯಾರಿಸಿ ಇದೀಗ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಮಂಜೂರಾತಿಗಾಗಿ ಕಾಯುತ್ತಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿಯ ವತಿಯಿಂದ ಕಾರ್ಯದರ್ಶಿ ಶ್ರೀಬಿ.ವಾಸುಗಟ್ಟಿಯವರು ದ.ಕನ್ನಡ ಜಿಲ್ಲಾಧಿಕಾರಿಯವರಿಗೆ ಮನವಿಯೊಂದನ್ನು ಸಲ್ಲಿಸಿ ಬಂಟ್ವಾಳ ಪುರಸಭಾ ಪ್ರದೇಶಕ್ಕೆ ಸಧ್ಯ ಕುಡಿಯುವ ನೀರಿನ ಪೂರೈಕೆಯನ್ನು ಊರಿಗೆಟ್ಯಾಂಕರ್ ಜೋಡಣೆ ಮಾಡಿ ಜನಸಾಮಾನ್ಯರಿಗೆ ಪೂರೈಸಬೇಕೆಂದು ಕೇಳಿ ಕೊಂಡಿದ್ದಾರೆ.

ಬಂಟ್ವಾಳ ಪುರಸಭಾ ಪ್ರದೇಶಕ್ಕೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸಿದ್ಧಪಡಿಸಿದ ಯೋಜನೆಗೆ ಕರ್ನಾಟಕ ಸರ್ಕಾರವು ಕೂಡಲೇ ಮಂಜೂರಾತಿ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಲಾಗಿದೆ.

ಕುಡಿಯುವ ನೀರಿಗಾಗಿ ಮಹಿಳಾ ನಿಯೋಗ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ೫ನೇ ವಿಭಾಗದ ವಿದ್ಯಾನಗರ ಶಾಖೆ, ಕೆ.ಎಚ್.ಬಿ.ಈ ಡಬ್ಲ್ಯು.ಎಸ್. ಶಾಖೆಯ ನೂರಾರು ಮಹಿಳೆಯರು ಇಂದು ತಮ್ಮ ವಿಭಾಗದಲ್ಲಿರುವ ನೀರಿನ ಅಸಮರ್ಪಕ ವಿತರಣೆ, ಮಲಿನ ನೀರು ಮುಂತಾದ ಸಮಸ್ಯೆಗಳ ಪರಿಹಾರಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ತಮ್ಮ ಬಡಾವಣೆಯ ಕೊರತೆಗಳನ್ನು ಬೇಗನೆ ನೀಗಿಸಲು ಕೋರಿದರು.

ಈ ಬಡಾವಣೆಗೆ ಸರಬರಾಜಾಗುವ ನೀರನ್ನು ವಿದ್ಯಾನಗರದ ಭೀಮನ ಬಾವಿಯಿಂದ ಪಡೆಯಲಾಗುತ್ತಿದ್ದು ಇದರಲ್ಲಿ ಸಾಕಷ್ಟು ಹೂಂಡು ತುಂಬಿದೆಯಲ್ಲದೆ, ಕೆಲಜನರು ಬಾವಿಯಲ್ಲಿ ಇಳಿದು ನೀರನ್ನು ಮಲಿನ ಮಾಡುವುದರಿಂದ ನೀರು ಕುಡಿಯಲು ಅಯೋಗ್ಯವಾಗಿದ್ದು ಶೀಘ್ರವೇ ಇದರ ಬಗ್ಗೆ ಸೂಕ್ತ ಕ್ರಮಗಳಿಗೆ ಆದೇಶ ನೀಡಬೇಕೆಂದು ಕೋರಿದ್ದಾರೆ.

ಅಂದೇ ಸಂಜೆ ಕಮೀಷನರು ಬಂದು ಬೋರ್ ನೀರನ್ನು ಎಲ್ಲ ಮನೆಗಳಿಗೂ ಸರಬರಾಜು ಮಾಡಿದ್ದು, ಮತ್ತು ಮುಂದಿನ ಕಾರ್ಯವನ್ನು ಕೈಗೊಂಡಿದ್ದಾರೆ. ಇದನ್ನು ಮಹಿಳಾ ನಿಯೋಗದ ಜಯವೆಂದು ಭಾವಿಸಲಾಗಿದೆ.

೬೦ ಕಿ.ಮೀ. ಕ್ರಮಿಸಿದ ಯುವಕರ ಸೈಕಲ್ ಜಾಥಾ
ಬೆಂಗಳೂರಿನಲ್ಲಿ ನಿರುದ್ಯೋಗ ವಿರೋಧಿ ದಿನಾಚರಣೆ

ಡಿ.ವೈ.ಎಫ್.ಐ.ನ ಕೇಂದ್ರ ಹಾಗೂ ರಾಜ್ಯ ಸಮಿತಿಗಳ ಕರೆಯ ಮೇರೆಗೆ ಬೆಂಗಳೂರು ಜಿಲ್ಲಾ ಸಮಿತಿಯು ಈ ಬಾರಿ ಸೈಕಲ್ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ ಮಾರ್ಚ್ ೨೮ ರಂದು ನಿರುದ್ಯೋಗ ವಿರೋಧಿ ದಿನಾ ಚರಣೆಯನ್ನು ಯಶಸ್ವಿಯಾಗಿನಡೆಸಿತು.

ಮಾರ್ಚ್ ೨೮ನೇ ಬುಧವಾರ ಬೆಳಗ್ಗೆ ೧೦. ಗಂಟೆಯ ಸುಮಾರಿಗೆ ಕೆಂಪೇಗೌಡ ನಗರ, ಶ್ರೀರಾಮಪುರ ಇತ್ಯಾದಿ ಘಟಕ ಗಳಿಂದ ಸೈಕಲ್ ಸವಾರರು ದಾಸರ ಹಳ್ಳಿಯನ್ನು (ತುಮಕೂರು ರಸ್ತೆ) ಬಂದು ತಲುಪಿದರು.

ಜಿಲ್ಲಾ ಕಾರ್ಯದರ್ಶಿ ಟಿ. ಶಿವರಾಂ ಜಾಥಾದ ಉದ್ದಿಶ್ಯ ಕುರಿತು ಸಾರ್ವಜನಿಕರನ್ನು, ಹಾಗೂ ಡಿ.ವೈ.ಎಫ್.ಐ. ಕಾರ್ಯಕರ್ತರನ್ನು ಕುರಿತು ಭಾಷಣ ಮಾಡುವುದರ ಮುಖಾಂತರ ಜಾಥಾವನ್ನು ಉದ್ಘಾಟಿಸಿದರು.

ಜಾಥಾ ಹೋಗುವಾಗ ವಿಶೇಷವಾಗಿ ಕನಿಷ್ಠ ಕೂಲಿ ರೂ. ೧೦೫೦ ಜಾರಿಗೆ ಬರಲಿ. ಉದ್ಯೋಗದ ಹಕ್ಕು ಮೂಲ ಭೂತ ಹಕ್ಕಾಗಲಿ ಇತ್ಯಾದಿ ಘೋಷಣೆಗಳನ್ನು ಕೂಗುವುದರ ಮುಖಾಂತರ ಅಸಂಘಟಿತ ಕಾರ್ಮಿಕರಿಗೆ ಜಾಥಾದ ಪರಿಚಯ ಮಾಡಿಕೊಡಲಾಯಿತು.

ಸುಂಕದಕಟ್ಟೆ, ಕಾಮಾಕ್ಷಿಪಾಳ್ಯ, ಗೋವಿಂದ ರಾಜನಗರ ವಿಜಯನಗರ ಮಾರ್ಗವಾಗಿ ಗಂಗೊಂಡನ ಹಳ್ಳಿಯನ್ನು ತಲುಪಿತು.

ಮಾರ್ಗದುದ್ದಕ್ಕೂ ದುಡಿಯುವ ಹಕ್ಕು ಮೂಲಭೂತ ಹಕ್ಕಾಗಲಿ, ದುಡಿಯುವ ಕೈಗೆ ಕೆಲಸಬೇಕು, ಉದ್ಯೋಗ ಕೊಡಿ ಇಲ್ಲವೆ ನಿರುದ್ಯೋಗ ಭತ್ಯೆ ಕೊಡಿ, ವರದಕ್ಷಿಣೆ ಪದ್ಧತಿಗೆ ಧಿಕ್ಕಾರ, ಮಂಗಳೂರು ಶೈಲಾಗಾರ ವಿಜಯ ನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಿ ಎಂಬ ಇತ್ಯಾದಿ ಬೇಡಿಕೆಗಳ ಘೋಷಣೆಗಳು ಮೊಳಗಿ ಮಾರ್ಗದುದ್ದಕ್ಕೂ ಸಾರ್ವಜನಿಕರೂ, ಮಕ್ಕಳು, ಯುವಜನರು ಆಶ್ಚರ್ಯದಿಂದ ಜಾಥಾವನ್ನು ನೋಡುತ್ತ ಘೋಷಣೆಗಳನ್ನು ಆಲಿಸುತ್ತ ಜಾಥಾ ಕಣ್ಣಿಗೆ ಕಾಣುವವರೆವಿಗೂ ವೀಕ್ಷಿಸುತ್ತಿದ್ದು ಸರ್ವೇ ಸಾಮಾನ್ಯವಾಗಿತ್ತು. ಜನ ಸಂದಣಿ ಇರುವ ಕಡೆಗಳಲ್ಲಿ ಕ್ರಾಂತಿಗೀತೆ, ಭಾಷಣಗಳನ್ನು ಮಾಡುತ್ತ ಹುರುಪು ಉತ್ಸಾಹದಿಂದ ಜಾಥಾ ಮುಂದೆ ಸಾಗಿತು.

ಗಂಗೊಂಡನ ಹಳ್ಳಿಗೆ ಬಂದಾಗ ಬಿಸಿಲಿನ ಝಳ ಜಾಸ್ತಿಯಾಗಿತ್ತು.

ಗಂಗೊಂಡನ ಹಳ್ಳಿ ಮುಸ್ಲೀಮ್ ಹೆಚ್ಚಾಗಿರುವ ಪ್ರದೇಶ. ಸಣ್ಣ ಸಣ್ಣ ಮನೆಗಳೂ ಗುಡಿಸಲುಗಳು, ಸರಿಯಾದ ರಸ್ತೆ ಮೋರಿ ಕಾಣದ ಬಡತನದ ಚಿತ್ರಣ ಮನೆಗಳ ಮೊಸಲು ಬಣ್ಣದಿಂದ ಕೊಳಚೆ ಪ್ರದೇಶಗಳಿಂದ ಎದ್ದು ಕಾಣುತ್ತಿತ್ತು.

ಜಾಥಾ ತಲುಪಿದ ಕೆಲವೇ ಕ್ಷಣಗಳಲ್ಲಿ ಹತ್ತಿಪ್ಪತ್ತು ಮುಸ್ಲಿಂ ಯುವಕರು ಬಂದು ಹಲವಾರು ಪ್ರಶ್ನೆಗಳನ್ನು ಹಾಕಿದರು.

ಈ ಪರಿಸ್ಥಿತಿಯನ್ನು ಅರಿತು ಈ ಮುಸ್ಲಿಂ ಯುವಕರಿಗೆ ಹಾಗೂ ಸಾರ್ವಜನಿಕರಿಗೆ ನಮ್ಮ ಸಂಘಟನೆಯ ಧ್ಯೇಯೋದ್ದೇಶಗಳನ್ನು ಪರಿಚಯಿಸಿ ವಿಶ್ವಾಸಗಳಿಸಿ ಆ ಜನರಿಗೆ ಸಲಾಮು ಹೇಳುವುದರ ಮೂಲಕ ಜಾಥಾ ಮುಂದೆ ಸಾಗಿತು.ಅಲ್ಲಿಂದ ಜಾಥಾವು ಚಾಮರಾಜಪೇಟೆಯ ಮುಖಾಂತರ ಕೆಂಪೇಗೌಡ ನಗರ ಪ್ರದೇಶವನ್ನು ಮಡಿವಾಳ ಮಾಚಿದೇವರ ದೇವಸ್ಥಾನದ ಅಂಗಳವನ್ನು ತಲುಪಿ ಮುಕ್ತಾಯ ಭಾಷಣ ಮಾಡಿ, ಕಾರ್ಯಕರ್ತರಿಗೆ ವಂದನೆಗಳನ್ನು ತಿಳಿಸಿ ಸೈಕಲ್ ಜಾಥಾ ಕಾರ್ಯಕ್ರಮವನ್ನು ಕೊನೆಗೊಳಿಸಲಾಯಿತು.

ಆನಂತರ ಕೆಂಪೇಗೌಡ ನಗರ ಘಟಕ ಕಾರ್ಯಕರ್ತರಿಗೆ ನಿಂಬೇ ಹಣ್ಣಿನ ಪಾನಕವನ್ನು ನೀಡಿ ದಣಿದು ಬಂದಿದ್ದವರಿಗೆ ಸಂತೈಸಿತು.

ಈ ಜಾಥಾದಲ್ಲಿ ಭಾಗವಹಿಸಿದ ಅತಿ ಕಡಿಮೆ ಕಾರ್ಯಕರ್ತನ ವಯಸ್ಸು ೯-೧೦ ವರ್ಷ, ಅತಿ ಹಿರಿಯ ಕಾರ್ಯಕರ್ತನ ವಯಸ್ಸು ೩೦ ರಿಂದ ೩೨ ವರ್ಷ.

ಜಿಲ್ಲಾ ಖಜಾಂಚಿ ನಾಗಪ್ಪನವರು ಅನಾರೋಗ್ಯದಿಂದದ್ದರೂ ಸಹ ಜಾಥಾದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೈಕಲ್ ತುಳಿದದ್ದು ಪ್ರಶಂಸನೀಯ. ಈ ಜಾಥಾವು ಸುಮಾರು ೬೦ ಕಿ. ಮೀಟರ್ ದೂರವನ್ನು ಮೊದಲ ಬಾರಿಗೆ ಕ್ರಮಿಸಿ ಸಾಹಸ ಕಾರ್ಯವನ್ನು ಯಶಸ್ವಿ ಯಾಗಿ ನಿರ್ವಹಿಸಿದೆ.

ಜನತಾ ಬಟ್ಟೆಯ ತಯಾರಿಕೆ ನಿಲ್ಲಿಸಿರುವುದರ ವಿರುದ್ಧ ಪ್ರತಿಭಟನೆ

ಕರ್ನಾಟಕದ ಕಾಂಗ್ರೆಸ್ ಸರ್ಕಾರ ಜನತಾ ಬಟ್ಟೆ ತಯಾರಿಕೆ ನಿಲ್ಲಿಸುವುದರಿಂದ ಇದನ್ನು ನಂಬಿಕೊಂಡಿದ್ದ ರಾಜ್ಯದ ೩೦ ಸಾವಿರ ಕೈ ಮಗ್ಗದ ನೇಕಾರರು ಬೀದಿ ಪಾಲಾಗಿದ್ದಾರೆ. ಹಿಂದಿನ ಜನತಾ ಸರ್ಕಾರವು ಬಡವರಿಗೆ ಸಬ್ಸಿಡಿ ದರದಲ್ಲಿ ಸೀರೆ, ಪಂಚೆ, ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆಯನ್ನು ಜಾರಿ ಮಾಡಿದ್ದರಿಂದ ಕೈ ಮಗ್ಗ ನೇಕಾರರಿಗೆ ಉದ್ಯೋಗ ಸಿಗುತ್ತಿತ್ತು. ಆದರೆ ಈಗಿನ ಸರ್ಕಾರ ತನ್ನ ಕಾರ್ಮಿಕ ವಿರೋಧಿ ನೀತಿಯಿಂದ ತಾಳಿರುವ ಧೋರಣೆಯನ್ನು ಖಂಡಿಸಿ, ರಾಣೆ ಬೆನ್ನೂರು ನೇಕಾರ ಕಾರ್ಮಿಕರ ಸಂಘ (ಸಿಐಟಿಯು) ಸಮಾರು ೩೦೦ ಕಾರ್ಮಿಕರು ತಾ|| ೨೩-೩-೯೦ ರಂದು ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ಸ್ಥಳೀಯ ಯೋಜನಾಧಿಕಾರಿಗೆ ಹಾಗೂ ತಹಶಿಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಿದರು. ಮೆರವಣಿಗೆಯ ನಂತರದ ಸಭೆಯಲ್ಲಿ ಕಾ|| ಅತಡಕರ್, ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ಕಾಂ|| ಅತಡಕರ್, ಕಾಂ||ದೇವರೆಡ್ಡಿ ವಹಿಸಿದ್ದರು.

ಹರಾಜನ್ನು ರದ್ದು ಪಡಿಸಲು ಸತ್ಯಾಗ್ರಹ.

ಸಿಂಧನೂರು ಪುಟ್ಟ ವ್ಯಾಪಾರಿಗಳ ಸಂಘವು, ದಿನದ ಮಾರುಕಟ್ಟೆ ಹರಾಜನ್ನು ರದ್ದು ಪಡಿಸಿ ಧರಣಿ ಸತ್ಯಾಗ್ರಹವನ್ನು ಏರ್ಪಡಿಸಿದೆ. ಈ ಹರಾಜಿನಿಂದ ಪುರಸಭೆಗೆ ಆಗುವ ಆದಾಯ ಕಡಿಮೆಯಾಗ ಬಹುದೆಂದು, ಇದರಿಂದ ವ್ಯಾಪಾರಿಗಳಿಗೆ ಗುತ್ತಿಗೆದಾರರಿಂದ ಕಿರುಕುಳ ಆಗುವ ಹಿನ್ನೆಲೆಯಲ್ಲಿ ತಾ|| ೨೯-೩-೯೦ರಿರಂದ ಧರಣಿ ಸತ್ಯಾಗ್ರಹವನ್ನು ಪ್ರಾರಂಭಿಸಲಾಗಿದೆ.

ಇತರೆಡೆ ಸಿ.ಪಿ.ಐ.(ಎಂ) ಅಭ್ಯರ್ಥಿಗಳು

ಮಂಗಳೂರು ಮಹಾನಗರ ಪಾಲಿಕೆ

೫೧ ಸ್ಥಾನಗಳಿರುವ ಈ ಮಹಾನಗರ ಪಾಲಿಕೆಯಲ್ಲಿ ಸಿ.ಪಿ.ಐ.(ಎಂ) ಸಿ.ಪಿ.ಐ. ಮತ್ತು ಜನತಾದಳದೊಂದಿಗೆ ಸ್ಥಾನಗಳ ಹೊಂದಾಣಿಕೆಯಿಂದ ಸ್ಪರ್ಧಿಸಲಾಗುತ್ತಿದೆ. ಸಿ.ಪಿ.ಐ(ಎಂ) ಆರು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ಪಕ್ಷದ ಅಭ್ಯರ್ಥಿಗಳು: ಜೆ ಸದಾಶಿವ ಶೆಟ್ಟಿ, ಲೋಕಯ್ಯ ಶೆಟ್ಟಿ ಕಮಲಾಕ್ಷ ಬಂಗೇರ, ಜಿ. ರವೀಂದ್ರ, ಕೆ. ರವೀಂದ್ರ, ಕೆ.ಟಿ. ಭಂಡಾರಿ ಬಾಬು ಕೆ. ದೇವಾಡಿಗ

ಕುಂದಾಪುರ ಪುರಸಭೆ

ಕುಂದಾಪುರ ಪುರಸಭಾ ಚುನಾವಣೆಗಳಲ್ಲಿ ೧೯ ಸ್ಥಾನಗಳ ಪೈಕಿ ೧೬ ರಲ್ಲಿ ಪಕ್ಷ ಸ್ಪರ್ಧಿಸಲಿದೆ. ೫ನೇ ಡಿವಿಜನ್ನಿನ ಒಂದು ಕ್ಷೇತ್ರದಲ್ಲಿ ಪಕ್ಷೇತ್ರರ ಅಭ್ಯರ್ಥಿಯನ್ನು ಪಕ್ಷವು ಬೆಂಬಲಿಸಲಿದೆ.

ಉಮೇದುವಾರರು

ಕೃಷ್ಣ ಜಿ. ಮೆಂಡನ್, ರಾಧಾಕೃಷ್ಣ ಸಾರಂಗ, ಎಂ. ಬಸವ ಖಾರ್ವಿ, ವಿಜಯ, ಪುರುಷೋತ್ತಮ, ವಿ. ನಾಗ, ಎಸ್. ಆರ್. ಲೀಲಾವತಿ ಆರ್. ಜಯಕುಮಾರ್ (ಮಹಿಳಾ ಮೀಸಲು), ಕೆ. ಶಂಕರ್, ಎಚ್.ನರಸಿಂಹ, ಅಬ್ರಹಾಂ ಕರ್ಕಡ, ವಿ. ನರಸಿಂಹ, ವಿ. ಆನಂದ್ ಟಿ. ಗುಲಾಬಿ (ಮಹಿಳಾ ಮೀಸಲು), ವಿ.ಎಂ. ನಾರಾಯಣ, ಕಾಳ ಮರಕಾಲ, ಕೆ. ಬಾಬು

ಕಳೆದ ಬಾರಿ ೬ ಸ್ಥಾನಗಳಲ್ಲಿ ಸ್ಪರ್ಧಿಸಿ ಐದು ಸ್ಥಾನಗಳನ್ನು ಪಕ್ಷ ಪಡೆದಿತ್ತು.

ಬಂಟ್ವಾಳ ಪುರಸಭೆ

ಚೆನ್ನಪ್ಪ ಬಂಗೇರ, ಚಂದು ನ್ಯಾಕ್, ಸಂಜೀವ ಬಂಗೇರ, ವಿಮಲ

೧೯ ಸ್ಥಾನಗಳಿರುವ ಈ ಪುರಸಭೆಗೆ ಸಿಪಿಐ(ಎಂ), ಸಿ.ಪಿ.ಐ. ಜನತಾದಳ ಮತ್ತು ಪಕ್ಷೇತರರಿರುವ ಪೌರ ಸಮಿತಿ ೮ [illegible] ಎಲ್ಲಾ ಸ್ಥಾನಗಳಿಗೂ ಸ್ಪರ್ಧಿಸಲಾಗುತ್ತಿದೆ.

ಉಡುಪಿ ಪುರಸಭೆ

ಚರಡಪ್ಪ ಸನಿಲ್

ಮೂಡಬಿದ್ರೆ ಪುರಸಭೆ

ರಮಣಿ

ಪುತ್ತೂರು ಪುರಸಭೆ

ಸತೀಶನ್

ಹೊಸಪೇಟೆ ನಗರ ಸಭೆ

ಚಂದ್ರಬಾಬು - ೯ನೇ ಡಿವಿಜನ್

ಸೋಮಪ್ಪ - ೬ನೇ ಡಿವಿಜನ್

ಬೆಂಬಲಿತ ಅಭ್ಯರ್ಥಿಗಳು

ಮೆಹಬೂಬ್ ಬೇಗ್ - ೧ನೇ ಡಿವಿಜನ್

ಸುಂದರಮ್ - ೨ನೇ ಡಿವಿಜನ್

ಓಬಳೇಶ್ - ೩ನೇ ಡಿವಿಜನ್

ಜೈನುಲ್ಲಾಬಳ್ಳಾರಿ - ೬ನೇ ಡಿವಿಜನ್ (ಹೋರಾಟ ದಿನ ಪತ್ರಿಕೆ ಕಾರ್ಯ ನಿರ್ವಾಹಕ ಸಂಪಾದಕರು)

ಅಂಬಿಕಾ ಜಾಲಗಾರ್ - ೬ನೇ ಡಿವಿಜನ್ (ಹೊಸಪೇಟೆ ಟೈಮ್ಸ್ ದಿನ ಪತ್ರಿಕೆ)

ಆರ್.ಎಸ್. ರವಿ - ೯ನೇ ಡಿವಿಜನ್

ಅಮರಾವತಿ ಪುರಸಭೆ

ಎಸ್.ಪಿ. ಕುಮಾರ್ - ೨ನೇ ಡಿವಿಜನ್ (ಮೀಸಲಾತಿ ಕ್ಷೇತ್ರ)

ಎಸ್.ಪಿ. ಕುಮಾರ್ - ೪ನೇ ಡಿವಿಜನ್ (ಸಾಮಾನ್ಯ ಕ್ಷೇತ್ರ)

ಚಂದ್ರಶೇಖರ್ ಎಲುಗೋಡು - ೪ನೇ ಡಿವಿಜನ್ ವಕೀಲರು (ಪಕ್ಷದ ಬೆಂಬಲಿತ ಅಭ್ಯರ್ಥಿಗಳು)

ಹೊಸಪೇಟೆ ತಾಲೂಕಿನ [illegible] (ಅಮರಾವತಿ ಹೊಸಪೇಟೆ) ಭಾಗಗಳಲ್ಲಿ ಒಟ್ಟು ೧೧ ಸ್ಥಾನಗಳಿಗಾಗಿ ಸ್ಪರ್ಧೆ ನಡೆಸಲು ಪಕ್ಷ ತೀರ್ಮಾನಿಸಿ ಕೆಲಸ ಪ್ರಾರಂಭಿಸಿದೆ.

ರಾಬರ್ಟ್‌ಸನ್ ಪುರಸಭೆ

೨೬ ಸ್ಥಾನಗಳಲ್ಲಿ ಪಕ್ಷ ೯ ಕಡೆ ಸ್ಪರ್ಧಿಸುತ್ತಿದೆ. ಒಬ್ಬ ಮಹಿಳಾ ಅಭ್ಯರ್ಥಿಯನ್ನು ಬೆಂಬಲಿಸುತ್ತಿದೆ.

೧ನೇ ಡಿವಿಜನ್ ರಾಮನ್

೨ನೇ ಡಿವಿಜನ್ ಜಯರಾಂ

ಆದಿಮೂಲಂ

ಉಮಾ ಶಿವರಾಮಯ್ಯ

೪ನೇ ಡಿವಿಜನ್ ಜ್ಯೋತಿನಾಯಗಂ

೬ನೇ ಡಿವಿಜನ್ ಟಿ.ಎಸ್. ಮಣಿ

ಎಸ್. ಸವರಿದಾಸ್

ಆನಂದ್ ರಾಜ್

ಪಕ್ಷ ಬೆಂಬಲಿಸಿದ ಮಹಿಳಾ ಅಭ್ಯರ್ಥಿ ಸುಗುಣ .

ಯಾವ ಪಕ್ಷಗಳ ನಡುವೆಯೂ ಹೊಂದಾಣಿಕೆಯಿಲ್ಲದ ಈ ಚುನಾವಣೆಗಳಲ್ಲಿ ಜನತಾದಳ ೧೪, ಕಾಂಗ್ರೆಸ್ ೧೬, ಎ.ಐ.ಡಿ.ಎಂ.ಕೆ. ೧೯, ಬಿ.ಜೆ.ಪಿ. ೧೯, ಡಿ.ಎಂ.ಕೆ. ೬, ಆರ್.ಪಿ.ಐ. ೩, ಜನತಾ ಪಕ್ಷ ೮ ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಬಂಗಾರ ಪೇಟೆ ಪುರಸಭೆ

೧೬ ಸ್ಥಾನಗಳುಳ್ಳ ಇಲ್ಲಿಯ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿ ಪಿ. ಶ್ರೀನಿವಾಸನ್ ೨ನೇ ಡಿವಿಜನ್ನಿನಲ್ಲಿ ಸ್ಪರ್ಧಿಸುತ್ತಿದ್ದಾರೆ.

ಮೈಸೂರು

ವಿಭಾಗ: ೬ - ಚಿಕ್ಕಮಾರಯ್ಯ, ವಿ: [illegible] ಮೋಹನ್‌ಕುಮಾರ್, ವಿ: ೪೨ - ಸೈಯದ್ ಅಲಿ, ವಿ: ೪೮ - ಶಾಂತಪ್ಪ, ವಿ: ೪೯ - ಪುಟ್ಟಸ್ವಾಮಿ.

ಶಹಾಬಾದ್ ಪುರಸಭೆ

೧೯ ಸ್ಥಾನಗಳಲ್ಲಿ ಪಕ್ಷ ೧೩ ಕಡೆ ಸ್ಪರ್ಧಿಸಿದೆ. ಇವರಲ್ಲಿ ಮೂವರು ಮಹಿಳೆಯರು. ಒಬ್ಬರು ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದಾರೆ.

ವಿಭಾಗ ೧ : ಮಲ್ಲಿಕಾರ್ಜುನ ಈರಣ್ಣ
ಅಬ್ದುಲ್ ಗಫಾರ್

ವಿಭಾಗ ೨ : ರಾಮಚಂದ್ರ ನರಸಪ್ಪ
ವಿಮಲಾ

ವಿಭಾಗ ೪ : ಶಾರದಾ ಬಾಯಿ
ಖಾಜಾಸಾಹೇಬ
ಶಂಕರ ಬಸಪ್ಪ

ವಿಭಾಗ ೫ : ಗುಲಾಮನಬಿ
ಅಝೂದ
ಬಸವರಾಜ ಕಣವೆ

ವಿಭಾಗ ೬ : ವೀರಭದ್ರಪ್ಪ
ದತ್ತಾತ್ರೇಯ ಗವಳಿ
ರತ್ನಾಬಾಯಿ
ಹಾಜಿ ಕರೀಮ

ತುಮಕೂರು

೪ನೇ ಡಿವಿಜನ್ : ವದೂದ್ ಖಾನ್ ಮತ್ತು ಬಿ. ಉಮೇಶ್

೫ನೇ ಡಿವಿಜನ್ : ಅಮಾನುಲ್ಲಾ ಖಾನ್

ಶಿರಾ

ಎಸ್. ಕೆ. ಹಬೀಬುಲ್ಲಾ

ನನ್ನ ಕಣ್ಣು ಅವರು

೧೯೮೦-೮೧ ಇರಬೇಕು. ಬೆಂಗಳೂರಿನಲ್ಲಿನ ಸೆನೆಟ್ ಹಾಲ್‌ನಲ್ಲಿನ ವಿಚಾರ ಸಂಕಿರಣದಲ್ಲಿ ಕಾ. ಇ.ಎಂ.ಎಸ್. ಭಾಗಿಯಾಗುವವರಿದ್ದರು. ಸಭೆಯ ಅಧ್ಯಕ್ಷತೆಯನ್ನು ಆಗಿನ ಅಡ್ವೋಕೇಟ್ ಜನರಲ್ ಶ್ರೀ ಬೈರಾರೆಡ್ಡಿ ವಹಿಸಬೇಕಿತ್ತು.

ಸಂಜೆ ೪ಗಂಟೆ ಹೊತ್ತಿಗೆಲ್ಲಾ ಪ್ರೇಕ್ಷಕರು ಸೇರ ತೊಡಗಿದ್ದರು. ಇ.ಎಂ.ಎಸ್. ಬಂದಿ ದ್ವಾರಾ ಎನ್ನುವ ಸಹಜಪ್ರಶ್ನೆ ಪ್ರೇಕ್ಷಕರೊಬ್ಬರಿಂದ ಬಂತು.

"ಇ.ಎಂ.ಎಸ್. ಎಂದರೆ ಕೇರಳದ ಇ.ಎಂ.ಎಸ್ಸಾ" ಅಲ್ಲೇ ಪಕ್ಕದಲ್ಲಿದ್ದ ವಾಚ್‌ಮನ್ ಕೇಳಿದ. ಅಷ್ಟರಲ್ಲೇ ಕಪ್ಪು ಬಣ್ಣದ ಅಂಬಾಸಿಡರ್ ಕಾರೊಂದು ಬಂದುನಿಂತಿತು. ಪಕ್ಷದ ರಾಜ್ಯ ಕಾರ್ಯದರ್ಶಿ, ಅಡ್ವೋಕೇಟ್ ಜನರಲ್ ಮತ್ತು ಕಾಂ.ಇ.ಎಂ.ಎಸ್ ಕಾರಿನಿಂದಿಳಿದು ವೇದಿಕೆಯತ್ತ ನಡೆದರು. ಕಾಂ. ಇ.ಎಂ.ಎಸ್. ರವರು ಬಾಗಿಲ ಬಳಿ ಬರುತ್ತಿದ್ದಂತೆಯೇ ವಾಚ್‌ಮನ್ ಮಿಲಿಟರಿಯವರ ರೀತಿ ನಿಂತ. ಮುಖವನ್ನು ದಿಟ್ಟಿಸಿದ ಇ.ಎಂ.ಎಸ್. ಆತ್ಮೀಯತೆಯಿಂದ ಹೆಗಲ ಮೇಲೆ ಕೈಹಾಕಿ "ನೀನು ಚೆನ್ನಾಗಿದ್ದೀಯಾ' ಎಂದು ಕೇಳಿದರು "ಚೆನ್ನಾಗಿದ್ದೇನೆ!" ಎಂದು ಅವನು ಉತ್ತರಿಸಿದ. ಎಲ್ಲರೂ ಒಳಗೆ ಹೋದರು.

ಕುತೂಹಲದಿಂದ ನಾನು ಆ ವಾಚ್ ಮನ್ ಅನ್ನು ಕೇಳಿದೆ ಹೇಗೆ ಪರಿಚಯ ಕಾ. ಇ.ಎಂ.ಎಸ್. ನಿನಗೆ? "ಅವರು ನನ್ನ ಈ ಕಣ್ಣುಗಳಂತೆ" ಎನ್ನುತ್ತಲೇ ಕಣ್ಣೀರು ತುಂಬಿ ಹರಿಯಿತು. ಆತ ನಿಜಕ್ಕೂ ಅತ್ಯಂತ ಅಭಿಮಾನದಿಂದ ಉದ್ವೇಗಗೊಂಡಿದ್ದ. ವಿಚಾರಿಸಲಾಗಿ ಹಿಂದೆ ಅವಿಭಜಿತ ಕಮ್ಯುನಿಸ್ಟ್ ಪಕ್ಷ ನಿಷೇಧಿಸಲ್ಪಟ್ಟಾಗ ಭೂಗತರಾಗಿದ್ದ ಕಾಂ. ಇ.ಎಂ.ಎಸ್. ರವರು ಈತನ ಮನೆಯಲ್ಲೇ ಇದ್ದರು. ಅವರನ್ನು ಸುರಕ್ಷಿಸುವ ಹೊಣೆ ಈತನ ಮೇಲೆಯೇ ಇತ್ತು. ಮುಂದುವರಿದು ಮತ್ತೆ ಹೇಳಿದ "ನನ್ನ ಮಗನನ್ನು [illegible]

ಪನಾಮಾದ ನೊಗಕ್ಕೆ ಕಟ್ಟಿದ ಜೋಡೆತ್ತುಗಳಂತೆ...

ಮಾರ್ಚ್ ೬ರಂದು ವಿಶ್ವಸಂಸ್ಥೆಯ ಮಾನವಾಧಿಕಾರಿಗಳ ಆಯೋಗ ಅಮೆರಿಕನ್ ಸರಕಾರದ ಒತ್ತಡ, ಪ್ರಭಾವಕ್ಕೆ ಮಣಿದು ಕ್ಯೂಬಾದ ವಿರುದ್ಧ ಒಂದು ನಿರ್ಣಯ ಅಂಗೀಕಾರವಾಗುವಂತೆ ಮಾಡಿತು. ಇದರ ಮೊದಲು ಅಮೆರಿಕಾ ಕ್ಯೂಬಾದಲ್ಲಿ ಕ್ರಾಂತಿ ವಿರೋಧಿಗಳ ಮೇಲೆ ಸೇಡು ತೀರಿಸಿಕೊಳ್ಳುವ ತೀವ್ರ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತೀವ್ರ ಅಪಪ್ರಚಾರ ನಡೆಸುವುದರ ಜತೆಗೆ ಒಂದು ರಾಕ್ಷಸೀ ರಾಜತಾಂತ್ರಿಕ ಒತ್ತಡ ಪ್ರಯೋಗಿಸಿತ್ತು. ಈ ನಿರ್ಣಯ ಸಂಪೂರ್ಣ ಅಸ್ವೀಕರಣೀಯ ಎಂದು ಆಯೋಗದಲ್ಲಿ ಕ್ಯೂಬಾದ ಪ್ರತಿನಿಧಿ ರಾವುಲ್ ರೋವಾ ಕೂರಿ ಹೇಳಿದ್ದಾರೆ. ಏಕೆಂದರೆ ಇದು ಕ್ಯೂಬಾದ ನಿಜ ಸ್ಥಿತಿಯನ್ನು ನೀಡುವಂತದಲ್ಲ. ಈ ನಿರ್ಣಯವನ್ನು ಮಂಡಿಸಿದ ಅಮೆರಿಕಾದಂತೆ ನಾಚಿಕೆ ಪಡಬಹುದಾದಂತಹ ಸ್ಥಿತಿ ತಮ್ಮ ದೇಶದಲ್ಲಿಲ್ಲ ಎಂದು ಅವರು ಹೇಳಿದ್ದಾರೆ. ಸಾಮ್ರಾಜ್ಯಶಾಹಿಗಳಿಗೆ ನಾಚಿಕೆಯೆಂಬುದೇನಾದರೂ ಇದ್ದಿದ್ದರೆ ತಮ್ಮ ದೇಶದ ಕರಿಯರು, ಚಿಕಾನೋ, ಇಂಡಿಯನ್, ಪ್ಯೂರ್ಟೋ ರಿಕಾನ್ ಅಲ್ಪ ಸಂಖ್ಯಾತರ ಸ್ಥಿತಿಗತಿ ಬಗ್ಗೆ ಅವರಿಗೆ ನಾಚಿಕೆಯಾಗಬೇಕಿತ್ತು ಎಂದು ಟೀಕಿಸಿದ ಅವರು, ಅಮೆರಿಕಾ ತಮ್ಮಿಂದ ಸಾಲಬೇಕಾಗಿದ್ದ ಮೂರನೇ ಜಗತ್ತಿನ ದೇಶಗಳ ಮೇಲೆ ರಾಕ್ಷಸೀ ರಾಜ ತಾಂತ್ರಿಕ ಒತ್ತಡ ತಂದರೂ ಆಯೋಗದ ಸದಸ್ಯರ ಅರ್ಧದಷ್ಟು ದೇಶಗಳ ಬೆಂಬಲ ಪಡೆಯಲು ಅದಕ್ಕಾಗಲಿಲ್ಲ ಎಂಬುದೂ ಮಹತ್ವದ ಸಂಗತಿ ಎಂದು ಕ್ಯೂಬಾ ಪ್ರತಿನಿಧಿ ಹೇಳಿದ್ದಾರೆ. ಅಮೆರಿಕಾದ ಜೊತೆಗೂಡಿ ಬ್ರಿಟನ್, ಜಪಾನ್, ಪಶ್ಚಿಮ ಜರ್ಮನಿ, ಬೆಲ್ಜಿಯಂ, ಪನಾಮಾ, ಜೆಕೊಸ್ಲೊವಾಕಿಯಾ ಮತ್ತು ಪೋಲಂಡ್ ಮಂಡಿಸಿದ ಈ ನಿರ್ಣಯಕ್ಕೆ ಪರವಾಗಿ ೧೯ ಮತಗಳು, ವಿರುದ್ಧವಾಗಿ ೧೨ ಮತಗಳು ಬಂದವು. ೧೨ ದೇಶಗಳು ಮತದಾನದಲ್ಲಿ ಭಾಗವಹಿಸಲಿಲ್ಲ.

ಈ ಬಾರಿಯ ನಿರ್ಣಯದಲ್ಲಿ ಸಾಮಾನ್ಯವಾಗಿ ಅಮೆರಿಕಾ ಕ್ಯೂಬಾದ ಬಗ್ಗೆ ಮಾಡುವ ಅಪಾದನೆಗಳಲ್ಲಿ, ಒಂದೊಂದಾಗಿ ಹಲವನ್ನು ಕೈ ಬಿಡಲಾಗಿತ್ತು. ಇದರ ಉದ್ದೇಶ ಸೌಜನ್ಯಕ್ಕಾಗಿಯಾದರೂ ಇಂತಹ ನಿರ್ಣಯಗಳನ್ನು ಹಿಂದೆ ವಿರೋಧಿಸಿದ್ದ ಅಥವಾ ತಟಸ್ಥವಾಗಿದ್ದ ದೇಶಗಳೂ ಈ ಬಾರಿ ನಿರ್ಣಯಕ್ಕೆ ಮತ ನೀಡಿ ಹೇಗಾದರೂ ಮಾಡಿ ಕ್ಯೂಬಾದ ವಿರುದ್ಧ ಒಂದು ನಿರ್ಣಯ ಅಂಗೀಕಾರವಾಗುವಂತೆ ಮಾಡುವುದೇ ಆಗಿತ್ತು ಎಂದು ಈ ನಾಚಿಕೆ ಗೇಡಿ ಪ್ರಯತ್ನದ ಬಗ್ಗೆ ಕ್ಯೂಬಾ ಅಧ್ಯಕ್ಷ ಫಿಡೆಲ್ ಕಾಸ್ಟ್ರೋ ಹೇಳಿದ್ದಾರೆ.

"ಸ್ವಾಭಾವಿಕವಾಗಿಯೇ ಈ ನಿರ್ಣಯವನ್ನು ಅಮೆರಿಕಾದೊಂದಿಗೆ ಹಲವು ನಾಟೋ ದೇಶಗಳೂ ಮಂಡಿಸಿದವು. ಆದರೆ ಎಲ್ಲಾ ನಾಟೋ ದೇಶಗಳೂ ಅಲ್ಲ. ಒಂದು ಭಾಗ ಮಾತ್ರ. ಆದರೆ ಕೆಲವು ತಿಂಗಳ ಹಿಂದಿನವರೆಗೆ ಸಮಾಜವಾದೀ ಬಣದಲ್ಲಿದ್ದ ಜೆಕೊಸ್ಲೊವಾಕಿಯಾ, ಪೋಲಂಡ್ ಕೂಡಾ ಈ ನಿರ್ಣಯವನ್ನು ಮಂಡಿಸುವವರ ಜತೆಗೆ ಇದ್ದವು. ಪನಾಮದಲ್ಲಿ ಮಿಲಿಟರಿ ಆಕ್ರಮಣ ನಡೆಸಿದ ಸರಕಾರದೊಂದಿಗೆ ಈ ದೇಶಗಳು ಈ ನಿರ್ಣಯವನ್ನು ಮಂಡಿಸಿದವು!

ಹಿಂದೆ ಇವು ಸ್ವಲ್ಪ ಸೌಜನ್ಯದಿಂದ, ಗೌರವದಿಂದ ವರ್ತಿಸುತ್ತಿದ್ದವು. ಆದರೆ ಈ ಬಾರಿ ಅವು ಪನಾಮಾದ ನೊಗಕ್ಕೆ ಕಟ್ಟಿದ ಜೋಡೆತ್ತುಗಳಂತೆ ಅಮೆರಿಕಾ ಹಾಗೂ ನಾಟೋದೊಂದಿಗೆ ಕ್ಯೂಬಾ ವಿರೋಧಿ ನಿರ್ಣಯವನ್ನು ಮಂಡಿಸಿದವು. ಇವು ಈ ನಿರ್ಣಯದ ಬಗ್ಗೆ ಮಾತನಾಡುವ ಅಗತ್ಯವೂ ಇಲ್ಲ. ಏಕೆಂದರೆ ಅವು ಈ ಆಯೋಗದ ಸದಸ್ಯರೂ ಅಲ್ಲ "ಎಂದು ಕಾಸ್ಟ್ರೋ ನಿರ್ಣಯದ ಮಂಡಕರನ್ನು ಗೇಲಿ ಮಾಡಿದ್ದಾರೆ.

ಇವಲ್ಲದೆ ಆಯೋಗದ ಸದಸ್ಯರಾದ ಇನ್ನೆರಡು ದೇಶಗಳು "ಇತ್ತೀಚಿನವರೆಗೆ ಕಮ್ಯುನಿಸ್ಟ್ ಎಂದು ಕರೆಸಿಕೊಂಡಿದ್ದ ಈಗ ಹೆಸರು ಬದಲಿಸಿಕೊಂಡ" ಪಕ್ಷಗಳಿರುವ ದೇಶಗಳು ಈ ನಿರ್ಣಯವನ್ನು ಬೆಂಬಲಿಸಿದವು. ಅವೆಂದರೆ ಹಂಗೇರಿ ಮತ್ತು ಬಲ್ಗೇರಿಯಾ. ಈ ಬಗ್ಗೆ ವಿಮರ್ಶಿಸುತ್ತಾ ಕಾಸ್ಟ್ರೋ" ನೋಡಿ, ಎಂತಹ ಬದಲಾವಣೆ, ಎಂತಹ ಸಾಧನೆ, ಎಂತಹ ಮಹಾನ್ ಕ್ರಾಂತಿಕಾರಿ ಸುಧಾರಣೆ ಅವರು ತಂದಿದ್ದಾರೆ! ಕೊನೆಗೆ ಅವು ಅಮೆರಿಕನ್ ಸಾಮ್ರಾಜ್ಯಶಾಹಿಯ ಮಡಿಲಿಗೇ ಬಂದು ಬಿದ್ದವು - ಕ್ರಾಂತಿಕಾರಿ ಆಂದೋಲನದ ವಿರುದ್ಧ ಅದರ ಪಿತೂರಿಗೆ ಬೆಂಬಲ ನೀಡಲು!" ಎಂದು ತನ್ನ ಗೇಲಿಯನ್ನು ಮುಂದುವರಿಸುತ್ತಾ "ಲ್ಯಾಟಿನ್ ಅಮೆರಿಕಾದ ದೇಶಗಳನ್ನು ಸಾಮ್ರಾಜ್ಯಶಾಹಿ ಬೆದರಿಸುತ್ತಿರುವ, ತನ್ನ ನಿರೀಕ್ಷೆಯಂತೆ ಸಾಗದಿದ್ದರೆ ನಿಕರಾಗುವಾವನ್ನೂ ಆಕ್ರಮಿಸುವ ಬೆದರಿಕೆ ಹಾಕುತ್ತಿರುವ, ಅಂತರಾಷ್ಟ್ರೀಯ ಕಾನೂನುಗಳ ಪ್ರಕಾರ ಸ್ಪಷ್ಟವಾಗಿ ನಮ್ಮದೇ ಆದ ಚಾನೆಲ್‌ಗಳನ್ನು ಬಳಸಿ ನಮ್ಮ ದೇಶದಲ್ಲಿ ಕ್ರಾಂತಿ-ವಿರೋಧಿ, ಬುಡಮೇಲು ಮಾಡುವ ಟಿ.ವಿ. ಕೇಂದ್ರ ಹೇರುವ ಬೆದರಿಕೆ ಹಾಕುತ್ತಿರುವ, ನಮ್ಮ ದೇಶದ ಮೇಲೆ ಮಿಲಿಟರಿ ಆಕ್ರಮಣ ನಡೆಸುವ ಬೆದರಿಕೆ ಹಿಂದೆಂದಿಗಿಂತಲೂ ಹೆಚ್ಚಿಸಿರುವ ಈ ಕ್ಷಣದಲ್ಲಿ ಪೋಲಂಡ್ ಮತ್ತು ಜೆಕೊಸ್ಲೊವಾಕಿಯಾ ನಿರ್ಣಯವನ್ನು ಅಮೆರಿಕಾದೊಂದಿಗೆ ಮಂಡಿಸುತ್ತವೆ, ಆಯೋಗದ ಸದಸ್ಯರಾದುದರಿಂದ ಹಂಗೆರಿ,, ಬಲ್ಗೇರಿಯಾ ಅಮೆರಿಕಾದೊಂದಿಗೆ ಕ್ಯೂಬಾದ ವಿರುದ್ಧ ಮತ ನೀಡುತ್ತವೆ. ಈ ಮೂಲಕ ಸಾಮ್ರಾಜ್ಯಶಾಹಿಗಳ ಆಕ್ರಮಣ, ಉನ್ಮಾದ, ಯುದ್ಧ ಕೋರತನಕ್ಕೆ ಪ್ರೋತ್ಸಾಹ ನೀಡುತ್ತವೆ ನಮ್ಮ ದೇಶದ ವಿರುದ್ಧ ಇನ್ನಷ್ಟು ಆಕ್ರಮಣಕೋರನಾಗಲು ನೆವಗಳನ್ನೂ ಒದಗಿಸುತ್ತವೆ!" ಎಂದು ಕಹಿಯಾಗಿ ನುಡಿದರು.

ಅವರು ಕ್ಯೂಬಾ ಮಹಿಳಾ ಒಕ್ಕೂಟದ ೫ನೇ ಮಹಾಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಪಶ್ಚಿಮ ಯುರೋಪಿನಲ್ಲಿ ೧.೨೫ ಕೋಟಿ ನಿರುದ್ಯೋಗಿಗಳು

ಪಶ್ಚಿಮ ಯುರೋಪಿನಲ್ಲಿ ೧೯೯೦ ರಲ್ಲಿ ನಿರುದ್ಯೋಗ ೬.೬% ಇರಬಹುದೆಂದು ಅಂದಾಜು ಮಾಡಲಾಗಿದೆ. ಅಂದರೆ ಸುಮಾರು ೧.೨೫ ಕೋಟಿ. ೧೯೮೯ ರಲ್ಲಿ ಇದು ೧.೨೭ ಕೋಟಿ. ೮೦ ರ ದಶಕದ ಆರಂಭದಿಂದ ನಿರುದ್ಯೋಗ ಕಡಿಮೆ ಮಾಡಲು ಯುರೋಪಿಯನ್ ಸಮುದಾಯದ ದೇಶಗಳ ಸರ್ಕಾರಗಳ ಪ್ರಯತ್ನಗಳು ವಿಶೇಷ ಫಲ ಕೊಟ್ಟಂತೆ ಕಾಣುವುದಿಲ್ಲ. ಆದರೆ ಮಧ್ಯ ಮತ್ತು ಯುರೋಪಿನ ಇತ್ತೀಚಿನ ಬೆಳವಣಿಗೆಗಳಿಂದಾಗಿ ತಮ್ಮ ದೇಶಗಳ ನಿರುದ್ಯೋಗವನ್ನು ಕಡಿಮೆ ಮಾಡಲು ಸಾಧ್ಯ ಎಂಬ ನಿರೀಕ್ಷೆ ಈ ಬಂಡವಾಳಶಾಹಿ ಪಶ್ಚಿಮ ಯುರೋಪಿನ ದೇಶಗಳ ಆಳರಸರಲ್ಲಿ ಮೂಡಿದೆ. ಅಂದರೆ ಆರ್ಥಿಕ ಹೊರೆಗಳನ್ನು ಪೂರ್ವ ಯುರೋಪಿಯನ್ ದೇಶಗಳ ಮೇಲೆ ವರ್ಗಾಯಿಸಬಹುದೆಂಬ ನಿರೀಕ್ಷೆ.

ಅಮೆರಿಕಾದಲ್ಲಿ ಆಳಗೊಳ್ಳುತ್ತಿರುವ ಆದಾಯ ಕಂದರ

೧೯೪೭ ರಿಂದ ಅಮೆರಿಕನ್ ಸರಕಾರ ಅತ್ಯಂತ ಶ್ರೀಮಂತರು ಹಾಗೂ ಅತ್ಯಂತ ಬಡವರ ನಡುವಿನ ಆದಾಯಗಳ ಅಂತರದ ಅಂಕೆ ಸಂಖ್ಯೆ ಸಂಗ್ರಹಿಸುತ್ತಿದೆ. ಅಮೆರಿಕನ್ ಸಂಸತ್ತಿನ ಒಂದು ಆರ್ಥಿಕ ವರದಿ ಪ್ರಕಾರ ೧೯೮೮ ರಲ್ಲಿ ಅತ್ಯಂತ ಹೆಚ್ಚು ಶ್ರೀಮಂತರಲ್ಲಿ ೪೦% ಮಂದಿ ಆದಾಯದ ೬೮ ಶೇಕಡಾ ಪಾಲು ಹೊಂದಿದ್ದರು. ೧೯೭೯ರಲ್ಲಿ ಇದು ೬೫.೮% ಇತ್ತು. ಇದೇ ಅವಧಿಯಲ್ಲಿ ಅತ್ಯಂತ ಬಡ ೪೦% ಮಂದಿಯ ಪಾಲು ೧೬.೮ರಿಂದ ೧೫.೬ ಶೇಕಡಾಕ್ಕಿಳಿದಿದೆ. ಆರ್ಥಿಕ ಸೂಚ್ಯಂಕಗಳು ಏರುತ್ತಿದ್ದರೂ ಬಡತನದ ರೇಖೆಯ ಕೆಳಗಿರುವ ಅಮೆರಿಕನ್ನರ ಸಂಖ್ಯೆಯೂ ಏರುತ್ತಿದೆ. ೧೯೮೮ ರಲ್ಲಿ ೧೩ ಶೇಕಡಾ ಅಂದರೆ ೩.೧೯ ಕೋಟಿ ಅಮೆರಿಕನ್ನರು ಬಡತನ ರೇಖೆಯ ಕೆಳಗೆ ಜೀವಿಸುತ್ತಿದ್ದರು. ಅಮರಿಕಾದ ಕರಿಯ ಮಕ್ಕಳಲ್ಲಿ ಅರ್ಧಕ್ಕೂ ಹೆಚ್ಚು ಅತಂತ ಬಡವರು.

'ಇಂತಿಫದಾ' ಇಪ್ಪತ್ತೆಂಟನೇ ತಿಂಗಳಲ್ಲಿ

ಪಶ್ಚಿಮ ತಟ ಹಾಗೂ ಗಾಝಾ ಪಟ್ಟಿಯಲ್ಲಿ ಪ್ಯಾಲೆಸ್ಟೀನಿಯನ್ನರ ಹೋರಾಟ 'ಇಂತಿಫಾದಾ' ಮಾರ್ಚ್ ೯ ರಂದು ಸಾರ್ವತ್ರಿಕ ಮುಷ್ಕರದೊಂದಿಗೆ ೨೮ನೇ ತಿಂಗಳು ಪ್ರವೇಶಿಸಿದೆ. ಡಿಸೆಂಬರ್ ೧೯೮೭ರಲ್ಲಿ 'ಇಂತಿಫಾದಾ' ಆರಂಭವಾದಂದಿನಿಂದ ೧೦೦೦ ನಿಶಸ್ತ್ರ ಪಾಲೆಸ್ಟೀನಿಯನ್ನರ ಕೊಲೆಯಾಗಿದೆ. ಇವರಲ್ಲಿ ೧೨೦ ಹನ್ನೆರಡು ವರ್ಷಕ್ಕಿಂತ ಚಿಕ್ಕ ಮಕ್ಕಳು ೧ ಲಕ್ಷ ಮಂದಿ ಗಾಯಗೊಂಡಿದ್ದಾರೆ. ೬೫೦೦ ಮಂದಿ ಶಾಶ್ವತವಾಗಿ ಅಂಗವಿಕಲರಾಗಿದ್ದಾರೆ. ೫೦೦೦ ಗರ್ಭಿಣಿಯರು ಗರ್ಭಪಾತ ಎದುರಿಸಬೇಕಾಯಿತು. ೧೬ ಸಾವಿರ ಮಂದಿಗೆ ಅಕಾರಣ ಜೈಲು ಶಿಕ್ಷೆಯಾಗಿದೆ. ೮೦೦ ಮನೆಗಳು, ೧೦೦೦ ಫಾರ್ಮುಗಳು, ವರ್ಕಶಾಪ್‌ಗಳು ನಾಶವಾಗಿವೆ.

ಆದರೂ 'ಇಂತಿಫಾದಾ'ದ ಜ್ವಾಲೆ ಅಡಗುವ ಬದಲು ಇನ್ನಷ್ಟು ತೀವ್ರಗೊಳ್ಳುತ್ತಿದೆ. ಆಕ್ರಮಣಕಾರಿ ಇಸ್ರೇಲಿ ಸೇನೆಯ ಚೈತನ್ಯ ದಿನಗಳೆದಂತೆ ಕುಸಿಯುತ್ತಿರುವಂತೆ ಕಾಣುತ್ತದೆ. ೧೯೮೯ರಲ್ಲಿ ಐವತ್ತು ಇಸ್ರೇಲಿ ಸೈನಿಕರು ಆತ್ಮಹತ್ಯೆ ಮಾಡಿಕೊಂಡರು. ಪಶ್ಚಿಮ ಗಾಝಾ ಪಟ್ಟಿಯಲ್ಲಿ ಮಿಲಿಟರಿ ಸೇವೆ ಮಾಡಲು ನಿರಾಕರಿಸಿದ ೧೦೦ ಕ್ಕೂ ಹೆಚ್ಚು ಇಸ್ರೇಲಿ ಯುವಕರನ್ನು ಕೋರ್ಟುಗಳು ದಂಡಿಸಿವೆ.

ತ್ರಿಪುರಾ — ಮೇ ೪ ರಂದು ಲಕ್ಷ ಮಂದಿಯ ಪ್ರತಿಭಟನೆ

ತ್ರಿಪುರಾದ ಭ್ರಷ್ಟ, ಜನ ವಿರೋಧಿ, ಪ್ರಜಾಪ್ರಭುತ್ವ-ವಿರೋಧಿ, ಬುಡಕಟ್ಟು ಜನಗಳ ಹಕ್ಕುಗಳ ಮೇಲೆ ಸತತ ಆಕ್ರಮಣ ನಡೆಸುತ್ತಿರುವ ಕಾಂಗ್ರೆ ಟಿ.ಯು. ಜೆ.ಎಸ್. ಕೂಟ ಸರಕಾರದ ವಿರುದ್ಧ ತ್ರಿಪುರಾಜನತೆಯ ಹೋರಾಟದ ಮುಂದಿನ ಹಂತವಾಗಿ ಮೇ 4 ರಂದು ರಾಜ್ಯದ ಎಲ್ಲಾ ೧೧ ಸಬ್ ಡಿವಿಜನ್ ಹಾಗೂ ೧೮ ಬ್ಲಾಕುಗಳಲ್ಲಿ ನಾಗರಿಕ ಅಸಹಕಾರ ಆಂದೋಲನದಲ್ಲಿ ಕನಿಷ್ಟ ಒಂದು ಲಕ್ಷ ಮಂದಿ ಬಂಧನಕೊಳಗಾಗಲಿದ್ದಾರೆ. ಮಾರ್ಚ್ ೧೭ರಂದು ಅಗರ್ತಲಾದ ಪುರಭವನದಲ್ಲಿ ನಡೆದ ಒಂದು ರಾಜ್ಯ ಸಮಾವೇಶ ಈ ಸಾಮೂಹಿಕ ಆಂದೋಲನಕ್ಕೆ ಕರೆ ನೀಡಿದೆ.

ಈ ಸಮಾವೇಶದಲ್ಲಿ ಎಡರಂಗದ ನಾಲ್ಕು ಪಕ್ಷಗಳಲ್ಲದೆ ರಾಜ್ಯ ಜನತಾದಳದ ಮುಖಂಡರೂ ಭಾಗವಹಿಸಿದ್ದರು. ಎರಡು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮಾವೇಶ ಹಾಗೂ ಅದು ರೂಪಿಸಿದ ಕಾರ್ಯಾಚರಣೆಯ ಮಹತ್ವವನ್ನು ವಿವರಿಸುತ್ತಾ ಚರ್ಚೆ ಆರಂಭಿಸಿದ ರಾಜ್ಯದ ಮಾಜಿ ಮುಖ್ಯಮಂತ್ರಿ ಮತ್ತು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಸದಸ್ಯ ನೃಪೇನ್ ಚಕ್ರವರ್ತಿ ಕಾಂಗ್ರೆ ಟಿ.ಯು.ಜೆ.ಎಸ್. ಸರಕಾರಕ್ಕೆ ರಾಜ್ಯವನ್ನಾಳುವ ಯಾವ ನೈತಿಕ ಹಕ್ಕೂ ಇಲ್ಲ. ಈ ಸರಕಾರದ ಪತನದವರೆಗೆ ಆಂದೋಲನ ಮುಂದುವರಿಯುತ್ತದೆ ಎಂದರು. ಈ ಕೂಟದ ಆಳ್ವಿಕೆಯು ಹೇಗೆ ಬುಡಕಟ್ಟು ಜನಗಳು ಅತ್ಯಂತ ಹೆಚ್ಚು ಸಂಕಷ್ಟ ಕ್ಕೊರಬೇಕಾಗಿದೆ ಎಂಬುದನ್ನು ವಿವರಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಕೆಲಸವಿಲ್ಲ. ರೇಶನ್ ಅಂಗಡಿಗಳಲ್ಲಿ ಆಹಾರ ಧಾನ್ಯವಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಗ್ರಾಮೀಣ ಸಹಕಾರಿ ಸಾಲ ವ್ಯವಸ್ಥೆಯೂ ಕುಸಿದು ಬಿದ್ದು ಖಾಸಗೀ ಲೇವಾದೇವಿಗಾರರ ಅಟ್ಟಹಾಸ ಮತ್ತೊಮ್ಮೆ ಹರಡಿದೆ. ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ. ಡಾಕ್ಟರುಗಳು ಅನಿರ್ದಿಷ್ಟ ಕಾಲದ ಹೋರಾಟ ಕ್ಕಿಳಿಯುವ ಬಗ್ಗೆ ಯೋಚಿಸುತ್ತಿದ್ದಾರೆ. ಸ್ವಾಯತ್ತ ಜಿಲ್ಲಾ ಮಂಡಳಿ ಪ್ರದೇಶಗಳಲ್ಲಿ ಬುಡಕಟ್ಟೇತರರರನ್ನು ತಂದು ನೆಲೆಸಲಾಗುತ್ತಿದೆ. ಬಾಂಗ್ಲಾದೇಶ್‌ದಿಂದ ಬಂದವರನ್ನು ಮತದಾನ ಪಟ್ಟಿಯಲ್ಲಿ ಕಾನೂನು ಬಾಹಿರವಾಗಿ ಸೇರಿಸಲಾಗುತ್ತಿದೆ. ಗಡಿ ಪ್ರದೇಶಗಳಲ್ಲಿ ಡಕಾಯಿತರ ರಾಜ್ಯಭಾರವೇ ಇದ್ದಂತಿದೆ. ದೇಶದಲ್ಲೆಲ್ಲಾ ಕಾಂಗ್ರೆಸ್(ಐ) ಚುನಾವಣಾ ಹೋರಾಟಗಳಲ್ಲಿ ಮಣ್ಣು ಮುಕ್ಕುತ್ತಿರುವಾಗ ರಾಜ್ಯದಲ್ಲಿ ತಮ್ಮ ಬೇಳೆ ಬಹಳ ದಿನ ಬೇಯಲಾರದು ಎಂದು ತಿಳಿದಿರುವ ಕೂಟದ ಮಂತ್ರಿಗಳು ಖಜಾನೆ ಲೂಟಿಯಲ್ಲಿ ತೊಡಗಿದ್ದಾರೆ. ಆದ್ದರಿಂದಲೇ ಈ ಸಮಾವೇಶ ರೂಪಿಸುವ ಕಾರ್ಯಾಚರಣೆಗಳ ಬಗ್ಗೆ ಜನ ಬಹಳ ಉತ್ಸುಕತೆಯಿಂದ ಕಾಯುತ್ತಿದ್ದರು. ಆದ್ದರಿಂದಲೇ ಮೇ ೪ ತ್ರಿಪುರಾದ ಪ್ರಜಾಪ್ರಭುತ್ವ ಆಂದೋಲನದ ಇತಿಹಾಸದಲ್ಲೊಂದು ಮಹತ್ವದ ದಿನವಾಗಲಿದೆ.

ಸಮಾವೇಶದ ಆರಂಭದಲ್ಲಿ ಕಾಂಗ್ರೆ ಟಿ.ಯು. ಜೆ.ಎಸ್. ಕೂಟದ ರಾಕ್ಷಸೀ ಆಳ್ವಿಕೆಗೆ ಬಲಿಯಾದ ೧೦೬ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ದೆಹಲಿ: ನೀರಿನ ದರ ಏರಿಕೆಗೆ ಪ್ರತಿಭಟನೆ

ದೆಹಲಿ ಮೆಟ್ರೊಪೊಲಿಟನ್ ಮಂಡಳಿ ಎಪ್ರಿಲ್ ೧ ರಿಂದ ನೀರಿನ ದರಗಳನ್ನು ವಿಪರೀತವಿರಿಸಿರುವುದನ್ನು ಸಿ.ಪಿ.ಐ.(ಎಂ) ದೆಹಲಿ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.. ಕೈಗಾರಿಕೆ, ವ್ಯಾಪಾರೀ ಉದ್ದೇಶಗಳ ನೀರು ಪೂರೈಕೆಗೆ ಇಷ್ಟೊಂದು ಏರಿಕೆ ಹೇರಿಲ್ಲ. ದೆಹಲಿ ಆಡಳಿತ ದರ ತೆರಲು ಸಾಮರ್ಥ್ಯವಿರುವವರನ್ನು ಬಿಟ್ಟುಬಿಟ್ಟು ಸಂಬಳದಾರ ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದಿಂದಲೇ ತೆರಿಗೆ ಕೀಳಲು ಪ್ರಯತ್ನಿಸುತ್ತಿದೆ ಎಂಬುದು ಇದರಿಂದ ಸ್ಪಷ್ಟ. ನೀರು ಪೂರೈಕೆಯಲ್ಲಿ, ಸೋರಿಕೆ ತಡೆಯುವುದರಿಂದಲೇ ಮತ್ತು ಖಾಸಗಿ ನೀರು ಪೂರೈಕೆದಾರಿಕೆಯನ್ನು ನಿಲ್ಲಿಸುವುದರಿಂದಲೇ ಮಂಡಳಿ ಈ ಏರಿಕೆಯ ಹಣವನ್ನು ಸಂಗ್ರಹಿಸಲು ಸಾಧ್ಯವಿತ್ತು ಎಂದು ಹೇಳಿರುವ ಸಿ.ಪಿ.ಐ(ಎಂ) ಏರಿಕೆಯ ವಿರುದ್ಧ ಪ್ರತಿಭಟಿಸಬೇಕೆಂದು ದೆಹಲಿಯ ಜನತೆಗೆ ಕರೆ ನೀಡಿದೆ.

ಮಧ್ಯ ಪ್ರದೇಶ — ಹರಿಜನರಮೇಲೆ ಅಮಾನುಷ ದಾಳಿ

೩೫ ವರ್ಷದ ಗಿರಿರಾಜನನ್ನು ೭೦-೮೦ ಮಂದಿ ಅಟ್ಟಿಸಿಕೊಂಡು ಹೋಗಿ ಲಾಠಿಗಳಿಂದ ಹೊಡೆದು ಈಟಿಗಳಿಂದ ತಿವಿದುಕೊಂದರು. ಅವನ ಕುರುಡಿ ತಾಯಿ ಹಾಗೂ ವೃದ್ಧ ತಂದೆಗೆ ಬಡಿದರು. ಒಂದು ವರ್ಷದ ಮಗು ಚಂದನ್‌ಗೆ ತೀವ್ರ ಕಲ್ಲೇಟು. ಆತನ ತಾಯಿ ರಾಮವತಿಗೆ ತೀವ್ರ ಹೊಡೆತ. ೨೦ ವರ್ಷದ ರತಿ ಬಾಯಿಗೆ ಆಯ್ದ ಬೈಗಳ ಜತೆಗೆ ಏಟುಗಳು. ೭೦ ವರ್ಷದ ಬಿಜಾನಿಯಾಗೆ ಈಟಿಯಿಂದ ತಿವಿದುದರಿಂದ ತೊಡೆಯಲ್ಲಿ ೨೭ ಹೊಲಿಗೆಹಾಕಬೇಕಾಯಿತು. ಆಕೆಯ ಗಂಡ ಮುಲುವಾನಿಗೆ ಹೊಡೆದರು. ಸುಕೂನ ತಲೆಯನ್ನು ಕೊಡಲಿಯಿಂದ ಹೊಡೆದು ಸೀಳಿದರು. ೪೦ ವರ್ಷದ ಖಾಲ್ಯಾನ ಬೆನ್ನು ಮೂಳೆಯೇ ಮುರಿದು ಹೋಗಿದೆ. ಇವರೆಲ್ಲಾ ಸಾಲ್ಪೆಯಾ ಎಂಬ ಗ್ರಾಮದ ಜಾಟವರ ಅಂದರೆ ಒಂದು ಹರಿಜನ ಜಾತಿಗೆ ಸೇರಿದವರು. ಈ ಜಾತಿಯ ಒಟ್ಟು ೧೫೦ ಜನ ಈ ಹಳ್ಳಿಯಲ್ಲಿದ್ದರೆ ಮೇಲ್ಜಾತಿಗಳ ಮಂದಿ ೧೦೫೦.

ಈ ಭಯಾನಕ ಘಟನೆ ನಡೆದದ್ದು ಹೋಳಿಯ ದಿನ. ಅಂದರೆ ಮಾರ್ಚ್ ೧೨ ರಂದು. ಹೋಳಿಯ ದಿನ ಈ ಜಾತಿಯ ಗಂಡಸರು ಡೊಳ್ಳು ಬಾರಿಸಬೇಕು. ಅವರ ಹೆಂಗಸರು ಕುಣಿಯಬೇಕು. ಅವರೊಂದಿಗೆ ಮೇಲ್ಜಾತಿಯ ಗಂಡಸರು ಹೋಳಿಯಾಡಬೇಕು. ಇದು ಈ ಒಂದು ದಶಕದ ಹಿಂದಿನವರೆಗೂ ಇದ್ದ ಒಂದು ಪದ್ಧತಿ. ಒಬ್ಬ ಶಿಕ್ಷಣಾಧಿಕಾರಿಯ ಪ್ರಯತ್ನಗಳಿಂದ ನಿಂತು ಹೋಗಿದ್ದ ಊಳಿಗಮಾನ್ಯ ಪದ್ಧತಿಯನ್ನು ಮತ್ತೆ ಆರಂಭಿಸಬೇಕೆಂದು ಈ ಬಾರಿ ಊರಿನ ಮೇಲ್ಜಾತಿಯ ೭೦-೮೦ ಮಂದಿ ಬಂದು ಜಾಟವರಿಗೆ ಬೆದರಿಕೆ ಹಾಕಿದರು. ರಾಜ್ಯದಲ್ಲೀಗ ಬಿ.ಜೆ.ಪಿ. ಆಳ್ವಿಕೆಯಿದೆ, ಆದ್ದರಿಂದ ಹರಿಜನ ಮಹಿಳೆಯರು ಮೇಲ್ಜಾತಿಯವರ ತಾಳಕ್ಕೆ ಸರಿಯಾಗಿ ಕುಣಿಯಬೇಕು ಎಂದು ಹೆದರಿಸಿದರು. ಜಾಟವರು ಒಪ್ಪಲಿಲ್ಲ. ಹಿರಿಯ ಜಾಟವರು ಇದನ್ನು ಮತ್ತೆ ಆರಂಭಿಸಬೇಡಿ ಎಂದು ಕಳಕಳಿಯಿಂದ ವಿನಂತಿಸಿಕೊಂಡರು.

ಸಂಜೆ ೫ ಗಂಟೆಯ ಸುಮಾರಾಗಿ ಜಾಟವರು ತಮ್ಮ ಒಂದು ದೇವಸ್ಥಾನದಲ್ಲಿ ಹೋಳಿ ಹಬ್ಬದ ಪೂಜೆ ನಡೆಸುತ್ತಿದ್ದಾಗ ೭೦-೮೦ಮಂದಿ ಮೇಲ್ಜಾತಿಯವರು ಬಂದೂಕು, ಲಾಠಿ, ಈಟಿ ಕೊಡಲಿಗಳೊಂದಿಗೆ ಬಂದು ಹಲ್ಲೆ ಆರಂಭಿಸಿಯೇ ಬಿಟ್ಟರು. ಹಳ್ಳಿಗಳಿಂದ ತಪ್ಪಿಸಿಕೊಂಡ ಕೆಲವರು ಪಕ್ಕದಲ್ಲಿದ್ದ ಮಹಾವೀರಪುರ, ತೇಜಪುರ ಹರಿಜನ ಕೇರಿಯಲ್ಲಿ ಆಶ್ರಯ ಪಡೆಯಲು ಪ್ರಯತ್ನಿಸಿದಾಗ ಮೇಲ್ಜಾತಿಯ ಜನ ಈ ಕೇರಿಗಳಲ್ಲಿ ತಮ್ಮ ಅಮಾನುಷ ಅತ್ಯಾಚಾರ ಹರಿಯಬಿಟ್ಟರು. ಮೂರು ಗಂಟೆಯವರೆಗೆ ಇದು ನಡೆಯಿತು. ಪೋಲೀಸರು ರಾತ್ರಿ ೧೧ಕ್ಕೆ ಬಂದರು. ಆದರೆ ಬಿ.ಜೆ.ಪಿ.ಯ ಪ್ರಭಾವದಿಂದಾಗಿ ಪೋಲೀಸರು ನಿರ್ಲಕ್ಷ್ಯದಿಂದ ವರ್ತಿಸುತ್ತಿದ್ದಾರೆ ಎಂದು ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದ ರಾಜ್ಯ ಸಿ.ಪಿ.ಐ(ಎಂ) ಕಾರ್ಯದರ್ಶಿ ಬಾದಲ್‌ಸರೋಜ್ ಹಾಗೂ ಡಿ.ವೈ.ಎಫ್.ಐ.ನ ಆರ್.ಡಿ. ಶರ್ಮಾ ಹೇಳಿದ್ದಾರೆ.

ಈ ದಾಳಿಯ ನೇತೃತ್ವ ವಹಿಸಿದ್ದ ಕಮಾಲ್ ಸಿಂಗ್ ಹಿಂದೆ ಕಾಂಗ್ರೆ ಜತೆಗಿದ್ದಾತ. ಲೋಕಸಭಾ ಚುನಾವಣೆಗಳ ನಂತರ ಆತ ಬಿ.ಜೆ.ಪಿ. ಸೇರಿದ. ಆದ್ದರಿಂದ ಬಿ.ಜೆ.ಪಿ. ಈ ದಾಳಿಕೋರರನ್ನು ರಕ್ಷಿಸಲು ಯತ್ನಿಸುತ್ತಿದೆ. ಕಾಂಗ್ರೆಸಿನವರೂ ತಮ್ಮ ಜಾತಿ ಬಾಂಧವರ ರಕ್ಷಣೆಗೆ ಪ್ರಯತ್ನ ನಡೆಸಿದ್ದಾರೆ.

ಈ ಹಳ್ಳಿ ಗ್ವಾಲೀರ್ ಸಂಸದೀಯ ಕ್ಷೇತ್ರದಲ್ಲಿದೆ. ಮಾಜಿ ರೈಲು ಮಂತ್ರಿ ಸಿಂಧ್ಯಾ ಇಲ್ಲಿಯ ಎಂ.ಪಿ. ಆತನ ವಿರುದ್ಧ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಶೀತಲ್ ಸಹಾಯ್ ಈಗ ಮಧ್ಯಪ್ರದೇಶದ ಗೃಹ ಮಂತ್ರಿ. ಆದರೆ ಇವರಿಬ್ಬರೂ ಇನ್ನೂ ಈ ಹಳ್ಳಿಯ ಕಡೆಗೆ ತಲೆ ಹಾಕಿಲ್ಲ.

ಒಬ್ಬ ಹೈಕೋರ್ಟ್ ನ್ಯಾಯಾಧೀಶರಿಂದ ಇದೀ ಘಟನೆಯ ತನಿಖೆಯಾಗಬೇಕು. ಕೊಲೆಯಾದವರ ಮನೆಯವರಿಗೆ ೫೦ ಸಾವಿರ ರೂ. ಪರಿಹಾರ ನೀಡಬೇಕು. ಹರಿಜನ ಕುಟುಂಬಗಳಿಗೆ ಲೈಸೆನ್ಸ್ ಸಹಿತ ಬಂದೂಕುಗಳನ್ನು ಒದಗಿಸಬೇಕು. ಭೂಮಾಲಿಕರ ಮೇಲೆ ಅವರ ಅವಲಂಬನೆ ತಪ್ಪಿಸಲು ಅವರಿಗೆ ಸಾಕಷ್ಟು ಭೂಮಿ ನೀಡಬೇಕೆಂದು ಸಿ.ಪಿ.ಐ.(ಎಂ) ಒತ್ತಾಯಿಸಿದೆ.

ಪಂಜಾಬ್: ಹುತಾತ್ಮನಿಗೆ ಶ್ರದ್ಧಾಂಜಲಿ

ಅಮೃತಸರ ಜಿಲ್ಲೆಯ ತರನ್ ತಾರನ್ ತಹಸೀಲಿನ ಜಮರಾಯಿ ಹಳ್ಳಿಯಲ್ಲಿ ಮಾರ್ಚ್ ೨೩ ರಂದು [illegible] ಸಂಖ್ಯೆಯಲ್ಲಿ ನೆರೆದು ಮಾರ್ಚ್ ೭ರಂದು ಭಯೋತ್ಪಾದಕರ ಗುಂಡಿನ್ನೆದುರಿಸಿ ಹುತಾತ್ಮರಾದ ಸಿ.ಪಿ.ಐ.(ಎಂ) ಮುಖಂಡ ಗುರು ಪ್ರತಾಪ್‌ಸಿಂಗ್‌ರಿಗೆ ಭಾವ ಪೂರ್ಣ ಶ್ರದ್ಧಾಂಜಲಿ ಅರ್ಪಿಸಿ ದೇಶದ ಐಕ್ಯತೆ ರಕ್ಷಣೆಗಾಗಿ ಮತ್ತೊಮ್ಮೆ ಪಣ ತೊಟ್ಟರು. [illegible]

ಬೆಂಗಳೂರಿನಲ್ಲಿ ಯಶಸ್ವಿ ಆಟೋ ಮುಷ್ಕರ

ಕಾಂಗ್ರೆಸ್ ಪಕ್ಷದ ಪುಡಾರಿಗಳು ಮೈಕುಗಳನ್ನು ಹಾಕಿ ೪-೫ ದಿನ ಬೆಂಗಳೂರಿನಲ್ಲೆಲ್ಲಾ ಪ್ರಚಾರ ನಡೆಸಿದರೂ, ಮುಷ್ಕರ ನಡೆಸುತ್ತೇವೆ ಎಂದು ಎಆರ್‌ಡಿಯು (ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್) ಕೊಟ್ಟ ಕರೆಯನ್ನು ಮತ್ತೊಂದು ಸಂಘ ಮುಷ್ಕರ ಹಿಂತೆಗೆದುಕೊಳ್ಳಲಾಗಿದೆ ಎಂದು ಪತ್ರಿಕೆಗಳಲ್ಲಿ ಘೋಷಿಸುವುದರ ಮೂಲಕ ಗೊಂದಲ ಉಂಟು ಮಾಡಲು ಪ್ರಯತ್ನಿಸಿದರೂ, ಬೆಂಗಳೂರಿನ ಆಟೋರಿಕ್ಷಾ ಚಾಲಕರ ಮುಷ್ಕರ ಯಶಸ್ವಿಯಾಯಿತು. ಏಪ್ರಿಲ್ ಎರಡು ಮತ್ತು ಮೂರರಂದು ನಡೆದ ಮುಷ್ಕರದ ಯಶಸ್ಸು ಆಟೋ ಚಾಲಕರ ಒಗ್ಗಟ್ಟನ್ನು ಎತ್ತಿತೋರಿಸಿತು.

ಇತ್ತೀಚಿನ ಪೆಟ್ರೋಲ್ ಬೆಲೆ ಏರಿಕೆಯಿಂದ, ಈಗಾಗಲೇ ಹಿಂದಿನ ಪೆಟ್ರೋಲ್ ಬೆಲೆ ಏರಿಕೆ, ಇತರ ಬಿಡಿಭಾಗಗಳ ಬೆಲೆ ಏರಿಕೆ ಎಲ್ಲಕ್ಕಿಂತ ಮಿಗಿಲಾಗಿ ಜೀವನ ವೆಚ್ಚದ ಏರಿಕೆಗಳಿಂದ ಆದಾಯ ದಿನೇ ದಿನೇ ಕಡಿಮೆಯಾಗುತ್ತಿದ್ದು ಸಮಸ್ಯೆಯ ತೀವ್ರತೆಯನ್ನು ಈ ಮುಷ್ಕರದ ಯಶಸ್ಸು ಎತ್ತಿತೋರಿಸಿದೆ.

ವಾಹನಗಳಿಂದ ತುಂಬಿ ತುಳುಕುವ ಬೆಂಗಳೂರಿನ ರಸ್ತೆಗಳು ಆಟೋಗಳಿಲ್ಲದೆ ಆರಾಮಾಗಿದ್ದುವು. ಸರ್ಕಾರ ಆಟೋ ಚಾಲಕರ ಬೇಡಿಕೆಗಳನ್ನು ಈ ಮೊದಲೇ ಮನ್ನಿಸದೆ ಪ್ರಯಾಣಿಕರಿಗೆ ಅದರಲ್ಲಿಯೂ ದೂರದ ಊರಿನಿಂದ ಬಂದವರಿಗೆ ಈ ಎರಡೂ ದಿನವೂ ಗೋಳಾಯಿತು.

ಮುಷ್ಕರದ ಮೊದಲದಿನ ಸಾರಿಗೆ ರಾಜ್ಯ ಸಚಿವ ಚಾಲಕರ ಮನವಿ ತೆಗೆದುಕೊಳ್ಳದೆ, ಅವರನ್ನು ಭೇಟಿ ಮಾಡಿ ಮಾತನಾಡದಿದ್ದುದರಿಂದ ಎರಡನೆಯ ದಿನವೂ ಮುಂದುವರೆಸಲು ಚಾಲಕರು ತೀರ್ಮಾನಿಸಿದರು. ಮುಷ್ಕರದ ಯಶಸ್ಸನ್ನು ನೋಡಿ ಮರುದಿನ ಎಆರ್‌ಡಿಯು ಪ್ರತಿನಿಧಿಗಳನ್ನು ಭೇಟಿ ಮಾಡಲು ನಿರ್ಧರಿಸಿತು. ಸಾರಿಗೆ ಖಾತೆ ಸಚಿವರು ಅಂದಿನಿಂದಲೇ ಒಂದು ಕಿ.ಮಿ.ಗೆ ೧-೫೦ ದರ ಹಾಗೂ ೨.೮೦ರೂ ಕನಿಷ್ಠದರವನ್ನು ಜಾರಿ ಮಾಡುವುದಾಗಿಯೂ ಒಂದು ತಿಂಗಳ ಒಳಗೆ ೩.೦೦ ರೂಗಳಿಗೆ ಕನಿಷ್ಠ ದರವನ್ನು ಏರಿಸುವುದರ ವಿಷಯಕ್ಕೆ ಸಮಿತಿಯ ವರದಿ ಪಡೆಯುವುದಾಗಿ ತಿಳಿಸಿದರು. ಇತರ ಚಾಲಕ ಸಂಘಗಳೊಡನೆ ಮಾತುಕೂಡ ಆಡದೆ ಆಯ್ತು ಬಂದಿದ್ದೀರಿ ಕಾಫಿ ಕುಡಿದು ಹೋಗಿ ಎಂದು ಹೇಳಿದರೆಂದೂ ವರದಿಯಾಗಿದೆ. ಸಚಿವರ ಈ ಭರವಸೆಯನಂತರ ಸೇರಿದ ಚಾಲಕರ ಸಭೆಯಲ್ಲಿ ಮುಷ್ಕರ ಹಿಂತೆಗೆದುಕೊಳ್ಳುವ ನಿರ್ಧಾರವನ್ನು ಪ್ರಕಟಿಸಿದರು

ರಾಷ್ಟ್ರಪತಿ ಆಳ್ವಿಕೆ...

ಪುಟ 1 ರಿಂದ

ಜನರಲ್ಲಿ ಜಿಗುಪ್ಸೆ ಮೂಡುತ್ತಿದೆ. ಉಳಿದ ಅಕಾಲಿ ಗುಂಪುಗಳೆಲ್ಲಾ ಈಗ ನಗಣ್ಯ. ತನ್ನದು ಮಾತ್ರ ಜನಪ್ರಿಯ ಪಕ್ಷ ಎಂದು ಭಾವಿಸಿದ್ದ ಮಾನ್‌ರ ಜನಪ್ರಿಯತೆಯೂ ತ್ವರಿತವಾಗಿ ಕುಗ್ಗುತ್ತಿದೆ. ಹುಸೈನೀವಾಲಾ ಮತ್ತು ಖಟ್ಕರ್ ಕಾಲನ್‌ನಲ್ಲಿ ನಡೆದ ಭಾರಿ ಸರ್ವಪಕ್ಷ ಸಭೆಗಳಲ್ಲಿ ಜನಗಳು ಭಾಗವಹಿಸುವಿಕೆಯೇ ಇದಕ್ಕೆ ಸ್ಪಷ್ಟಸಂಕೇತ. ಮಾರ್ಚ್ ೨೩ರಂದು ಸರ್ವಪಕ್ಷ ಸಭೆಯುಲ್ಲಿ ಲಕ್ಷಾಂತರ ಜನನೆರೆದಿದ್ದರು. ಪ್ರಖ್ಯಾತ ಕ್ರಾಂತಿಕಾರಿ ದೇಶಪ್ರೇಮಿ ಭಗತ್‌ಸಿಂಹರ ಊರುಖಟ್ಕರ್ ಕಾಲಾನ್. ಹುತಾತ್ಮ ದಿನದಂದು ನೆರೆದ ಈ ಜನ ರಾಷ್ಟ್ರೀಯ ಐಕ್ಯತೆಯ ತಮ್ಮ ಆಕಾಂಕ್ಷೆಯನ್ನು ಸ್ಪಷ್ಟವಾಗಿ ತೋರಿಸಿಕೊಟ್ಟರು. ಅದೇ ದಿನ ಅದೇ ಊರಿನಲ್ಲಿ ಒಂದು ಪರ್ಯಾಯ ಸಭೆ ಯೋಜಿಸಿದ್ದ ಮಾನ್ ಕೆಲವೇ ನೂರು ಜನ ಬಂದಿದ್ದರಿಂದ ತನ್ನ ಸಭೆಯನ್ನು ಒಂದು ಗುರುದ್ವಾರದಲ್ಲಿ ನಡೆಸಬೇಕಾಯಿತು!

ಈ ಹಿನ್ನೆಲೆಯಲ್ಲೇ ಮಾನ್‌ಗುಂಪು ಬಿಟ್ಟು ಪಂಜಾಬಿನ ಇತರೆಲ್ಲಾ ಪಕ್ಷಗಳು ರಾಜ್ಯದಲ್ಲಿ ಚುನಾವಣೆ ನಡೆಯುವ ಮೊದಲು ಶಾಂತಿ ನೆಲೆಸಬೇಕೆಂದು ಶಿಫಾರಸುಮಾಡಿವೆ. ಇಲ್ಲವಾದರೆ ಜನತೆಯ ತೀರ್ಪು ಎಂಬುದು ಕೇವಲ ಹಾಸ್ಯಾಸ್ಪದವಾಗುತ್ತದೆ. ರಾಜ್ಯದ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ ಎಂದು ಅವು ಅಭಿಪ್ರಾಯ ಪಟ್ಟಿವೆ.

ಆದ್ದರಿಂದ ಪ್ರಧಾನ ನಮಂತ್ರಿಗಳು ದೆಹಲಿಯಲ್ಲಿ ಸರ್ವಪಕ್ಷಗಳ ಸಭೆ ಕರೆದು ಎರಡು ಗಂಟೆಗಳ ಚರ್ಚೆಯ ನಂತರ ಮೇ೧೦ ರಂದು ಮುಗಿಯಲಿರುವ ರಾಷ್ಟ್ರಪತಿ ಆಳ್ವಿಕೆಯನ್ನು ಮುಂದುವರೆಸಲು ಸಾಧ್ಯವಾಗುವಂತೆ ಒಂದು ಸಂವಿಧಾನ ತಿದ್ದುಪಡಿ ತರುವ ಬಗ್ಗೆ ಸರ್ವಸಮ್ಮತಿ ರೂಪಿಸಲಾಯಿತು.

ರಾಷ್ಟ್ರಪತಿ ಆಳ್ವಿಕೆ ಒಂದು ಪರ್ಯಾಯ ಮಾರ್ಗವೇನೂ ಅಲ್ಲವೆಂಬುದು ನಿಸ್ಸಂಶಯ. ವಾಸ್ತವವಾಗಿ ಇದರಿಂದ ಈಗಾಗಲೇ ರಾಷ್ಟ್ರಪತಿ ಆಳ್ವಿಕೆಯಲ್ಲಿ ಪಟ್ಟಭದ್ರ ಹಿತಾಸಕ್ತಿ ಬೆಳೆಸಿಕೊಂಡಿರುವ ತನ್ಮೂಲಕ ಜನರಿಂದ ದೂರಸರಿದಿರುವ ಪೋಲೀಸ್ ಮತ್ತು ಆಡಳಿತಕ್ಕೆ ಸಂತೋಷವೂ ಆಗುತ್ತದೆ. ಆದ್ದರಿಂದ ಆಡಳಿತದ ಮತ್ತು ಪೋಲಿಸಿನ ಜನಸಾಮಾನ್ಯರೊಂದಿನ ವರ್ತನೆಯ ಮೇಲೆ ನಿಗಾ ಇಡಬೇಕು. ಜಿಲ್ಲಾ ಸಬ್‌ಡಿವಿಜನ್ ಮಟ್ಟಗಳಲ್ಲಿ ಎಲ್ಲಾ ರಾಜಕೀಯ ಶಕ್ತಿಗಳನ್ನೊಳಗೊಂಡ ಸಲಹಾ ಸಮಿತಿಗಳು ರಚನೆಗೊಂಡು ಆಡಳಿತದ, ಪೋಲೀಸರ ದುರ್ವರ್ತನೆಗಳನ್ನು ಲಡೆಯುವಂತಾಗಬೇಕು. ಜನರ ವಿಶ್ವಾಸಗಳಿಸಬೇಕು.

ಆದರೆ ಇದೊಂದರಿಂದಲೇ ಶಾಂತಿ ನೆಲಸಲಾರದು. ವಿವಿಧ ಅಕಾಲಿ ಗುಂಪುಗಳು ಸರಿಯಾದ ಪಾಠ ಕಲಿಯಬೇಕು. ಅವರು ಭಯೋತ್ಪಾದಕರ ಪ್ರತ್ಯೇಕತೆ ವಿರುದ್ಧ ಸ್ಪಷ್ಟ ನಿಲುವು ತಳೆದರೆ ಪಂಜಾಬಿನಲ್ಲಿ ತ್ವರಿತವಾಗಿ ಶಾಂತಿ ಸ್ಥಾಪಿಸಲು ಸಾಧ್ಯ. ರಾಷ್ಟ್ರೀಯ ಐಕ್ಯತೆ ಬಯಸುವ, ಭಯೋತ್ಪಾದಕತೆ, ಪ್ರತ್ಯೇಕತೆಗಳನ್ನು ವಿರೋಧಿಸುವ ರಾಜ್ಯದಲ್ಲಿನ ದೇಶದಲ್ಲಿನ ಇತರ ರಾಜಕೀಯ ಶಕ್ತಿಗಳೊಂದಿಗೆ ಅವರು ಕೈಸೇರಿಸಲಿ.

ಈಗಿನ ಸಂದರ್ಭದಲ್ಲಿ ರಾಷ್ಟ್ರಪತಿ ಆಳ್ವಿಕೆಯ ವಿಸ್ತರಣೆಯನ್ನು ವಿರೋಧಿಸುವವರು ಉಗ್ರವಾದಿ ಭಾವನೆಗಳಿಗೆ ಇಂಬುಗೊಡುತ್ತಾರಷ್ಟೆ. ೪೬%ರಷ್ಟಿರುವ ಭಯದ ನೆರಳಿನಲ್ಲಿರುವ ರಾಜ್ಯದ ಅಲ್ಪಸಂಖ್ಯಾತರ ಪರಿಗಣನೆಯೇ ಅವರಿಗಿದ್ದಂತಿಲ್ಲ. ಮಾತ್ರವಲ್ಲ, ಶಾಂತಿ ಬಯಸುವ ಸಿಖ್‌ಜನ ಸಾಮಾನ್ಯರ ಪರಿವೆಯೂ ಅವರಿಗಿದ್ದಂತಿಲ್ಲ.

ತೀವ್ರಗಾಮಿಗಳ 'ಮಾನವ ಹಕ್ಕುಗಳ' ಬಗ್ಗೆಯಷ್ಟೇ ಮಾತಾಡುವ ಕೆಲವು ವ್ಯಕ್ತಿಗಳು ಅಖಿಲ ಭಾರತ ಮಟ್ಟದಲ್ಲಿದ್ದಾರೆ. ಆದರೆ ಅವರಿಗೆ ರಾಜ್ಯದ ಜನ ಸಾಮಾನ್ಯರ ಮಾನವ ಹಕ್ಕುಗಳ ಪರಿವೆಯೇ ಇಲ್ಲ. ರಾಜಕೀಯ ಪ್ರಕ್ರಿಯೆ ಆರಂಭಿಸಬೇಕೆಂಬುದಕ್ಕೆ ಅವರು ಮಾಡುವ ವಾದಗಳೇನೇ ಇದ್ದರೂ ಅದರ ಮರೆಯಲ್ಲಿ ವಾಸ್ತವವಾಗಿ ಅವರು ಉಗ್ರಗಾಮಿಗಳನ್ನು ಅಧಿಕಾರಕ್ಕೆ ತರಬಯಸುತ್ತಿದ್ದಾರೆ. ಇದು ದೇಶದ ಶತ್ರುಗಳ ಬಯಕೆಯನ್ನು ಈಡೇರಿಸುತ್ತದಷ್ಟೆ.

ರಾಷ್ಟ್ರೀಯ ಐಕ್ಯತೆ ಬಯಸುವ ಎಲ್ಲರೂ ತಮ್ಮೆಲ್ಲಾ ಶಕ್ತಿಗಳನ್ನು, ಚೈತನ್ಯವನ್ನು ಕ್ರೋಢೀಕರಿಸಿ ಭಯೋತ್ಪಾದಕರನ್ನು, ಪ್ರತ್ಯೇಕತಾವಾದಿಗಳನ್ನು ಮೂಲೆಗಟ್ಟಿ ಕೆಲವೇ ತಿಂಗಳಲ್ಲಿ ಶಾಂತಿ ನೆಲೆಸುವಂತೆ ಮಾಡೋಣ. ವಿಸ್ತರಣೆಗೊಳ್ಳುವ ರಾಷ್ಟ್ರಪತಿ ಆಳ್ವಿಕೆಯ ಆರು ತಿಂಗಳು ಮುಗಿಯುವವರೆಗೆ ಕಾಯುವ ಅಗತ್ಯವಿಲ್ಲ. ಅದರ ಮೊದಲೇ ಶಾಂತಿ ನೆಲೆಸುವಂತಾಗಿ ರಾಜಕೀಯ ಪ್ರಕ್ರಿಯೆಆರಂಭಿಸಲು ಸಾಧ್ಯ. ಇದು ಖಟ್ಕರ್ ಕಾಲಾನ್, ಹುಸೈನೀವಾಲಾ ಸಭೆಗಳ ಸಂದೇಶ. ಏಪ್ರಿಲ್ ೧೩ ರಂದು ನಡೆಯಲಿರುವ ಜಾಲಿಯಾನ್ ವಾಲಾ ಬಾಗ್ ಸರ್ವಪಕ್ಷ ಸಮ್ಮೇಳನದ ಸಂದೇಶ ಕೂಡಾ ಖಂಡಿತವಾಗಿಯೂ ಇದೇ.

ಪಂಜಾಬಿನ ಜನತೆಗೆ ಶಾಂತಿ ಬೇಕು. ಇಂತಹ ಪಂಜಾಬೀ ಜನತೆಯತ್ತ ಪ್ರತಿಯೊಬ್ಬರ ಅಧ್ಯಗಮನ ಹರಿಯಬೇಕು.

.... ಈ ವಾರ

ತಮ್ಮದು ಸಂಸ್ಕೃತಿಯ ಪ್ರಾಚೀನತೆಯ ಬಗ್ಗೆ ಬಲವಾದ ನಂಬಿಕೆ ಭಾರತೀಯರದ್ದು. ಇತ್ತೀಚೆಗೆ ಈ ನಂಬಿಕೆಗೆ ಬಲವಾದ ಏಟು ಬಿದ್ದಿದೆ. ಅಯೋಧ್ಯೆ ಕ್ರಿ.ಪೂ. ೭ಕ್ಕಿಂತ ಹಳೆಯದೇನಲ್ಲ ಎಂದು ಇತ್ತೀಚಿನ ಭೂಖನನಗಳಿಂದ ತಿಳಿದು ಬಂದಿದೆ. ಪುರಾಣಗಳ ಪ್ರಕಾರ ರಾಮಾಯಣದ ಕಾಲ ಸುಮಾರು ಕ್ರಿ.ಪೂ.೧೮೦೯

— ರಾಜೇಶ್ ಕೊಚ್ಚಾರ್, ಟೈಮ್ಸ್ ಆಫ್‌ಇಂಡಿಯಾ, ಮಾರ್ಚ್ ೨೮

ಶ್ರೀಮಾನ್ ಜಗನ್ಮೋಹನ್‌ರವರ ಅತಿರೇಕದ, ಪಕ್ಷಪಾತ ಪೂರ್ಣ ವರ್ತನೆಯೂ ಕಾಶ್ಮೀರ ಸಮಸ್ಯೆಗೆ ಕಾಣಿಕೆ ನೀಡಿದೆ. ಇವರ ನೇಮಕದಲ್ಲಿ ರಾಷ್ಟ್ರೀಯ ರಂಗದೊಳಗೆ ಹಾಗೂ ಅದರ ಎಡಪಂಥೀಯ ಮಿತ್ರರಿಂದ ತೀವ್ರ ಭಿನ್ನಾಭಿಪ್ರಾಯ ವ್ಯಕ್ತವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆತನ ಮೇಲೆ ಸರ್ಕಾರ ಇಟ್ಟಿದ್ದ ನಿರೀಕ್ಷೆ ಹುಸಿಯಾಗಿದೆ. ಬದಲಾಗಿ, ಅವರ ಆತುರದ ಕೃತ್ಯಗಳು ಕಣಿವೆಯಲ್ಲಿ ಇದ್ದಬಿದ್ದ ರಾಜಕೀಯ ಪ್ರಕ್ರಿಯೆಯನ್ನು ಮುರಿದು ರಾಷ್ಟ್ರೀಯ ಸರ್ವಸಮ್ಮತಿಯನ್ನು ನಾಶಮಾಡಿದೆ.

— ಟೈಂಸ್ ಆಫ್ ಇಂಡಿಯಾ, ಮಾರ್ಚ್ ೩೦

ಹೆಚ್.ಡಿ.ಡಬ್ಲ್ಯು. ಸಬ್‌ಮೆರಿನ್ ವ್ಯವಹಾರದಲ್ಲಿ, ಪಶ್ಚಿಮ ಜರ್ಮನಿಯ ಈ ಹಡಗು ನಿರ್ಮಾಣ ಸಂಸ್ಥೆ ಭಾರತೀಯ ಏಜೆಂಟರಿಗೆ ೧೮ ಶೇಕಡಾ ದಳ್ಳಾಳಿ ಕೊಟ್ಟ ಬಗ್ಗೆ ತನ್ನಲ್ಲಿ ಮಾಹಿತಿಯಿದೆ ಎಂದು ಪಶ್ಚಿಮ ಜರ್ಮನಿಯ ವಿರೋಧ ಪಕ್ಷದ ವಕ್ತಾರ ನಾರ್ಬರ್ಟ್ ಗ್ಯಾನ್ಸೆಲ್ ಹೇಳಿದ್ದಾರೆ.

— ಯು.ಎನ್.ಐ. ಸುದ್ದಿ, ಮಾರ್ಚ್ ೩೧

ತೃತೀಯ ಜಗತ್ತಿನ ದೇಶಗಳಿಗೆ ಪೂರ್ವ ಯುರೋಪಿನ ಘಟನೆಗಳ ಒಂದು ದೊಡ್ಡ ಅನಾಹುತಕ್ಕಿಂತ ಕಡಿಮೆಯನಲ್ಲ. ಝಿಯೋನಿಸಂ, ವರ್ಣಭೇದದ ವಿರುದ್ಧ ಜಾಗರೂಕತೆಯಿಂದ ಕಟ್ಟಿದ್ದ ಅಂತರಾಷ್ಟ್ರೀಯ ರಂಗವನ್ನು ಪೂರ್ವ ಯುರೋಪಿನ ಹೊಸ ಆಳ್ವಿಕೆಗಳು ಅತ್ಯಂತ ಹುದ್ದೀಕರಣದ ಭಾವದಿಂದ ಬಡಿಯುತ್ತಿವೆ. ಎಲ್ಲಾ ಅಂತರ್‌ರಾಷ್ಟ್ರೀಯ ವೇದಿಕೆಗಳಲ್ಲಿ ಇವು ಮೂರನೇ ಜಗತ್ತಿನ ವಿರುದ್ಧ ಪಾಶ್ಚಿಮಾತ್ಯರೊಂದಿಗೆ ಮತ ನೀಡಬಹುದೆಂದು ನಿರೀಕ್ಷಿಸಬಹುದು. ಕೊನೆಯದಾಗಿ ಮಹತ್ವ ಪೂರ್ಣ ಸಂಗತಿಯಂದರೆ ಈ ಹೊಸ ಆಳ್ವಿಕೆಗಳ ಮಾರುಕಟ್ಟೆ ಕನಸುಗಳನ್ನು ಆಯಾ ದೇಶಗಳ ಬಹು ಪಾಲು ಜನ ಒಪ್ಪುತ್ತಾರೆಂಬುದು ಪ್ರಶ್ನಾರ್ಹ.

— ಟೈಸ್ ಆಫ್ ಇಂಡಿಯಾದ ಒಂದು ಲೇಖನದಲ್ಲಿ ಏಪ್ರಿಲ್ ೩

ಮಾಟ, ಮಂತ್ರ, ಮಾನಭಂಗ, ಕೊಲೆಗಳನ್ನು ಕುರಿತು ಹೊರಬರುತ್ತಿರುವ ಪಾಪ್ ಸಂಗೀತ ಅಮೆರಿಕನ್ನರನ್ನು ಬೆಚ್ಚಿಸಿದೆ. ಈ ಸಮಸ್ಯೆ ವಾಕ್‌ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವವರ ಹಾಗೂ ಎಳೆಯ ಮನಸ್ಸುಗಳ ಮೇಲೆ ದುಷ್ಪರಿಣಾಮ ಬೀರಬಾರದೆಂದು ಪ್ರತಿಪಾದಿಸುವವರ ನಡುವೆ ಸಾಕಷ್ಟು ಭಿನ್ನಾಭಿಪ್ರಾಯವನ್ನು ಹುಟ್ಟು ಹಾಕಿದೆ.

— ಡಿ.ಪಿ.ಎ. ಸುದ್ದಿ

ನಗರ ಪಾಲಿಕೆಗಳ ಚುನಾವಣೆಗಳನ್ನು ಮುಂದೂಡಲು ರಾಜ್ಯ ಸರಕಾರಕ್ಕೆ ನಿರಂಕುಶ ಅಧಿಕಾರ ಕೊಡುವ ಮಸೂದೆ ವಸ್ತುತಃ ಈಗಾಗಲೇ ನಡೆದು ಹೋಗಿರುವ ಸಂಪುಟ ನಿರ್ಣಯವೊಂದಕ್ಕೆ ವಿಧಾಯಕ ಮುದ್ರೆ ಒತ್ತಿಸುವ ಉದ್ದೇಶದ್ದು.

— ಪ್ರಜಾವಾಣಿ, ಏಪ್ರಿಲ್-೪

ಸರ್ವಾಧಿಕಾರಿ ಪ್ರವೃತ್ತಿ ....

ಪುಟ 1 ರಿಂದ

ನಗರ ಪಾಲಿಕೆಗಳ ಚುನಾವಣೆಗಳನ್ನು ತನಗೆ ಬೇಕೆನಿಸಿದಾಗ ಮುಂದೂಡಲು ಅಧಿಕಾರ ಪಡೆಯುವ ತಿದ್ದುಪಡಿ ಜನ ವಿರೋಧಿಯಾಗಿದೆ. ಅಧಿಕಾರ ದುರುಪಯೋಗಕ್ಕೆ ಕಾನೂನು ರಕ್ಷೆ ನೀಡಿದಂತಾಗಿದೆ.

ರಾಜ್ಯದಲ್ಲಿಯ ಅಧಿಕಾರ ವಿಕೇಂದ್ರೀಕರಣಕ್ಕೆ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ ರಾಜ್ಯ ಮಂತ್ರಿ ಬಸವಲಿಂಗಪ್ಪನವರು ಮತ್ತೊಂದು ಹೊಡೆತ ಕೊಡುತ್ತಿದ್ದಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರುಗಳಿಗೆ ಅಧಿಕಾರವೇ ಇಲ್ಲವೆಂದೂ, ಸಂವಿಧಾನ ತಿದ್ದುಪಡಿ ಇಲ್ಲದೆ ಈ ಸಂಸ್ಥೆಗಳಿಗೆ ಯಾವುದೇ ಅಧಿಕಾರ ಸ್ಥಾನಮಾನಗಳು ಇಲ್ಲವೆಂದೂ, ಜಿಲ್ಲಾ ಪರಿಷತ್ ಕಾರ್ಯದರ್ಶಿಯ ಆದೇಶದಂತೆ ಜಿಲ್ಲಾ ಪರಿಷತ್ ಅಧ್ಯಕ್ಷರುಗಳು ವರ್ತಿಸಬೇಕೆಂದೂ, ಹೀಗೆ ಹಲವಾರು ರೀತಿಯಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳ ಬಗೆಗೆ ದುರುದ್ದೇಶಪೂರಿತ ಮತ್ತು ಪ್ರಚೋದನಕಾರಿ ಹೇಳಿಕೆ ನೀಡುತ್ತಿರುವುದು ಖಂಡನೀಯ ಮತ್ತು ಅದು ಸರ್ವಾಧಿಕಾರಿ ಪ್ರವೃತ್ತಿಯಾಗಿದೆ.

ರಾಜ್ಯದ ೧೩ ಜಿಲ್ಲಾ ಪರಿಷತ್ ಅಧ್ಯಕ್ಷರು, ಕಾಂಗ್ರೆಸ್ ಜನತಾದಳ ಸೇರಿ, ಪಕ್ಷಬೇಧ ಮರೆತು ಮಂತ್ರಿಗಳ ಅವಹೇಳವನಕಾರಿ ಹೇಳಿಕೆಗಳಿಗೆ ಪ್ರತಿಭಟನೆ ವ್ಯಕ್ತ ಮಾಡಲು ಸರಕಾರದ ಕಾನೂನುಬಾಹಿರ ಆದೇಶಗಳನ್ನೂ, ಸುತ್ತೋಲೆಗಳನ್ನೂ ಪಾಲಿಸದಿರಲು ನಿರ್ಧರಿಸಿರುವುದು ಸ್ವಾಗತಾರ್ಹ.

ರಾಜ್ಯದಲ್ಲಿರುವ ೧೫,೦೦೦ ಮಂಡಲ ಪಂಚಾಯತಿ ನೌಕರರಲ್ಲಿ ಕೆಲವರು ಈಗಲೂ ತಿಂಗಳ ವೇತನ ೧೫.೨೫.೫೦ ಪಡೆಯುತ್ತಿದ್ದು, ಅವರಿಗೆಲ್ಲ ಸುಪ್ರೀಮ್ ಕೋರ್ಟು ನಿರ್ಧರಿಸಿದ ಕನಿಷ್ಠ ವೇತನವನ್ನಾದರೂ ನೀಡಬೇಕೆಂದು ಮಂತ್ರಿ ಬಸವಲಿಂಗಪ್ಪನವರನ್ನು ಕೇಳಿದಾಗ, ತನಗೂ ಆ ನೌಕರರಿಗೂ ಸಂಬಂಧವೇ ಇಲ್ಲ, ನೌಕರ ಸಂಘದ ಪದಾಧಿಕಾರಿಗಳ ಜೊತೆಯಲ್ಲಿ ಚರ್ಚಿಸಲೂ ತಯಾರಿಲ್ಲವೆಂದು ಹೇಳಿರುವುದು ಖಂಡನೀಯ.

ಈಗಿನ ವೀರೇಂದ್ರ ಪಾಟೀಲ ಕಾಂಗ್ರೆಸ್ ಸರಕಾರ ಸರ್ವಾಧಿಕಾರಿ ಪ್ರವೃತ್ತಿಯನ್ನು ಅನುಸರಿಸುತ್ತಿದೆ, ಅಂಥ ಧೋರಣೆಯನ್ನು ಸಂಘಟನೆ, ಚಳುವಳಿಗಳ ಮೂಲಕ ವಿರೋಧಿಸಬೇಕು.

ಎನ್.ಕೆ. ಉಪಾಧ್ಯಾಯ

ಪಾಲಿಟ್ ಬ್ಯೂರೋ

ಪುಟ ೧ ರಿಂದ

ವಿಶ್ವ ಹಿಂದೂ ಪರಿಷತ್ ಬಾಬರಿ ಮಸೀದಿಯನ್ನು ನಾಶಮಾಡಿ ರಾಮ ದೇವಾಲಯವನ್ನು ಕಟ್ಟುವ ಪ್ರಯತ್ನವನ್ನು ರಾಷ್ಟ್ರೀಯರಂಗ ಸರ್ಕಾರ ಕೆಲ ತಿಂಗಳುಗಳ ಕಾಲ ಮುಂದಕ್ಕೆ ಹಾಕಿದೆ. ಆದರೆ ಈ ಪ್ರಶ್ನೆ ಮತ್ತೆ ಎದ್ದು ನಿಲ್ಲುತ್ತದೆ. ಏಕೆಂದರೆ ವಿಶ್ವಹಿಂದೂ ಪರಿಷತ್ ಯಾವುದೇ ಸಂಧಾನ, ಸರ್ವಸಮ್ಮತ ತೀರ್ಮಾನವನ್ನೊಪ್ಪಲು ಸಿದ್ಧರಾಗಿಲ್ಲ. ಆದ್ದರಿಂದ ಕೋಮು ಸೌಹಾರ್ದಕ್ಕಾಗಿ ಜನತೆಯ ಐಕ್ಯತೆಗಾಗಿ ವ್ಯಾಪಕ ಪ್ರಚಾರ ಕಾರ್ಯಕ್ರಮ ನಡೆಸಲು ಮುಂದೆ ಬರಬೇಕೆಂದು ಎಲ್ಲಾ ಎಡ ಮತು ಜಾತ್ಯಾತೀತ ಪಕ್ಷಗಳಿಗೆ ಪಿ.ಬಿ. ವಿನಂತಿಸಿದೆ. ಶ್ರೀಲಂಕಾಕ್ಕೆ ಸಂಬಂಧಿಸಿದಂತೆ ಭಾರತ-ಶ್ರೀಲಂಕಾ ಒಪ್ಪಂದದ ಷರತ್ತುಗಳನ್ನು ಭಾರತ ಪಾಲಿಸಿ ಶಾಂತಿ ಸೇನೆಯನ್ನು ಹಿಂದೆಗೆದುಕೊಂಡಿದೆ. ಆದರೆ ಶ್ರೀಲಂಕಾ ಸರ್ಕಾರ ಈಶಾನ್ಯ ಮಂಡಳಿಗೆ ಸ್ವಾಯುತ್ತ ಅಧಿಕಾರ ನೀಡುವುದರಲ್ಲಿ ಮತ್ತಿತರ ಅಂಶಗಳಲ್ಲಿ ತನ್ನ ಪಾಲಿನ ಶರತ್ತುಗಳನ್ನು ಪೂರೈಸಿಲ್ಲ.

ಉದ್ಯೋಗದ ಹಕ್ಕು ಮೂಲಭೂತ ಹಕ್ಕು

ಮೊಟ್ಟ ಮೊದಲ ಬಾರಿಗೆ ದೇಶದ ಉದ್ದಿಮೆವಾರು ಒಕ್ಕೂಟಗಳು ಒಂದೆಡೆ ಕಲೆತು ಉದ್ಯೋಗದ ಹಕ್ಕನ್ನು ಮೂಲಭತ ಹಕ್ಕು ಎಂದು ಪರಿಗಣಿಸುವ ಬಗ್ಗೆ ಮಹತ್ವ ಪೂರ್ಣ ರಾಷ್ಟ್ರೀಯ ಸಮಾವೇಶ ನಡೆಸುತ್ತಿದ್ದಾರೆ. ಏಪ್ರಿಲ್ ೨ ರಂದು ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ಈ ಸಮಾವೇಶ ಆರಂಭವಾಗಿದೆ. ಭಾರತ ಉಕ್ಕು ಕಾರ್ಮಿಕರ ಒಕ್ಕೂಟದ ಆರಂಭಿಸಿದ ಈ ಪ್ರಯತ್ನದ ಫಲವಾಗಿ ಏಪ್ರಿಲ್ ೨ ಹಾಗೂ ೩ ರಂದು ಉಕ್ಕು, ಕಲ್ಲಿದ್ದಲು, ಕೃತಕಗೊಬ್ಬರ, ಬಿ.ಹೆಚ್.ಇ.ಎಲ್, ವಿಮೆ, ಬ್ಯಾಂಕಿಂಗ್, ರೈಲ್ವೆ, ರಾಜ್ಯ ಮತ್ತು ಕೇಂದ್ರ ಸರ್ಕಾರೀ ನೌಕರರ ಹಾಗೂ ವಿವಿಧ ಉದ್ದಿಮೆವಾರು ಸಂಘಟಣೆಗಳ ಒಂದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಈ ವಿಷಯದ ವಿವಿಧ ಆಯಾಮಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಮರ್ ಮುಖರ್ಜಿ ಈ ಸಮಾವೇಶದ ಉದ್ಘಾಟನೆ ನಡೆಸಿದರು.

ಸಮಾವೇಶದ ವಿವರಗಳನ್ನು, ನಿರ್ಣಯಗಳನ್ನು ಮುಂದಿನ ಸಂಚಿಕೆಗಳಲ್ಲಿ ಕೊಡಲಾಗುವುದು.

Printed and published by P.Ramachandra Rao on behalf of Communist party of India (Marxist), Karnataka State Committee, 50 K.V.Temple Street, Sultanpet, Bangalore - 560 053. Phone No. 75331. Editor: P.RAMACHANDRA RAO